ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 1 ಗುರುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 224 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 1 ಗುರುವಾರ 2022

ಸಂಪುಟ: 43 | ಸಂಚಿಕೆ: 224 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಪಿಎಫ್‌ಐ ನಿಷೇಧಕ್ಕೆ ಹೈಕೋರ್ಟ್ ಅಸ್ತು

ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ನೇತೃತ್ವದ ಏಕ ಸದಸ್ಯ ಪೀಠ

ಬೆಂಗಳೂರು, ನ.30(ಕೆಎಂಶಿ)–ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ನಿಷೇಧವನ್ನು ರಾಜ್ಯ ಹೈಕೋರ್ಟ್ ಎತ್ತಿ ಹಿಡಿದಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಕೇಂದ್ರ ಸರ್ಕಾರ ಪಿಎಫ್‌ಐ ಸಂಘಟನೆ ನಿಷೇಧ ಮಾಡಿರುವುದನ್ನು ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಏಕ ಸದಸ್ಯ ಪೀಠ ಇಂದು ತೀರ್ಪು ಪ್ರಕಟಿಸಿದೆ.

ಪಿಎಫ್‌ಐ ನಿಷೇಧ ಮುಂದುವರಿಯಲಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಅಂಗಸಂಸ್ಥೆಗಳನ್ನು ಯುಎಪಿಎಯ ಸೆಕ್ಷನ್3(1) ಅಡಿಯಲ್ಲಿ 5 ವರ್ಷಗಳ ಕಾಲ 'ತಕ್ಷಣದ ಪರಿಣಾಮ'ದೊಂದಿಗೆ "ಕಾನೂನು ಬಾಹಿರ ಸಂಘಗಳು" ಎಂದು ಘೋಷಿಸಿ ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ ಅಧಿಸೂಚನೆಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ನಾಸಿರ್ ಪಾಷಾ ಎಂಬ ಪಿಎಫ್‌ಐ ಕಾರ್ಯಕರ್ತರೊಬ್ಬರು ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿರುವುದರಿಂದ ಅವರ ಪತ್ನಿ ಮೂಲಕ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿ ಈ ಆದೇಶವನ್ನು ಪ್ರಕಟಿಸಿದೆ.

1967ರ ಕಾನೂನುಬಾಹಿರ ಚಟುವಟಿಕೆಗಳ ಕಾಯಿದೆಯ ಸೆಕ್ಷನ್(3)ರ ಉಪವಿಭಾಗ 3ರ ನಿಬಂಧನೆಗಳ ಪ್ರಕಾರ, ಸಕ್ಷಮ ಪ್ರಾಧಿಕಾರದ ಕಡೆಯಿಂದ ಇದು ಕಡ್ಡಾಯವಾಗಿದೆ ಎಂದು ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್ ವಾದಿಸಿದರು.



ವಿಧಿಸಲಾದ ಆದೇಶವು ಸಂಯೋಜಿತ ಆದೇಶವಾಗಿದೆ. ಇದರಲ್ಲಿ ಯಾವುದೇ ಪ್ರತ್ಯೇಕ ಕಾರಣ ಅಥವಾ ಕಾಯಿದೆಯ ಸೆಕ್ಷನ್ 3ರ ಉಪ–ವಿಭಾಗ 3ಕ್ಕೆ ಅನುಗುಣವಾಗಿ ಆದೇಶವನ್ನು ರವಾನಿಸಲಾಗಿಲ್ಲ ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. 2007–08ನೇ ಸಾಲಿನಲ್ಲಿ ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆಯಡಿಯಲ್ಲಿ ಪಿಎಫ್‌ಐ ನೋಂದಣಿಯಾಗಿದ್ದು, ಸಮಾಜದ ದೀನದಲಿತರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದೆ ಎಂದು ವಾದಿಸಿದ್ದರು.

ಯುಎಪಿ ಕಾಯಿದೆಯ ಸೆಕ್ಷನ್ 3(1)ರ ಅಡಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವ ಮೂಲಕ ಭಾರತ ಒಕ್ಕೂಟವು ಆಕ್ಷೇಪಾರ್ಹ ಅಧಿಸೂಚನೆಯನ್ನು ಅಂಗೀಕರಿಸಿದೆ, ಈ ಅಧಿಸೂಚನೆಯು ಯುಎಪಿಎ ಟ್ರಿಬ್ಯೂನಲ್‌ನ ದೃಢೀಕರಣಕ್ಕೆ ಒಳಪಟ್ಟಿರುತ್ತದೆ, ಹೀಗಾಗಿ ಇದನ್ನು ಮೊದಲು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿಲ್ಲ. ಯುಎಪಿ ಕಾಯಿದೆಯ ಸೆಕ್ಷನ್3(3)ರ ನಿಬಂಧನೆಯ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಮೂಲಕ ಈ ಅಧಿಸೂಚನೆಯನ್ನು ತಕ್ಷಣವೇ ಜಾರಿಗೆ ತರಲಾದ ಅಧಿಸೂಚನೆಯ ನಂತರದ ಭಾಗದಿಂದ ಅರ್ಜಿದಾರರು ನೊಂದಿದ್ದಾರೆ. ಸಂವಿಧಾನದ ಪರಿಚ್ಛೇದ 19(1)(ಸಿ) ಅಡಿಯಲ್ಲಿ ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನು ನಿಗ್ರಹಿಸಲು ಹಲವಾರು ಅಪರಾಧ ಘಟನೆಗಳ ಆಧಾರದ ಮೇಲೆ ಭಾರತ ಒಕ್ಕೂಟವು ತನ್ನ ಸಾರ್ವಭೌಮ ಅಧಿಕಾರವನ್ನು ನಿರಂಕುಶವಾಗಿ ಚಲಾಯಿಸಿದೆ ಎಂದು ಮನವಿಯಲ್ಲಿ ಹೇಳಲಾಗಿದೆ. ಹಲವಾರು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದ್ದ, ▶ 6ನೇ ಪುಟಕ್ಕೆ

ದಿನೇಶ್‌ಕುಮಾರ್ ನಿಗೂಢ ಸಾವು ಪ್ರಕರಣ

ಇಂದು ಎಫ್‌ಎಸ್‌ಎಲ್ ವರದಿ ನಿರೀಕ್ಷೆ



ಮೈಸೂರು, ನ. 30(ಆರ್‌ಕೆ)– ಕ್ರೆಡಲ್ ಅಧಿಕಾರಿ ಡಿ.ಕೆ. ದಿನೇಶ್‌ಕುಮಾರ್ ನಿಗೂಢ ಸಾವಿನ ಪ್ರಕರಣ ಸಂಬಂಧ ನಾಳೆ (ಡಿ.1) ಎಫ್‌ಎಸ್‌ಎಲ್‌ನಿಂದ ವರದಿ ಬರುಬಹುದೆಂದು ನಿರೀಕ್ಷಿಸಲಾಗಿದೆ. ಮಂಗಳವಾರ ಮರಣೋತ್ತರ ಪರೀಕ್ಷೆ ನಡೆಸಿದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವೈದ್ಯರು ವರದಿ ನೀಡಬೇಕಾಗಿದ್ದು, ದಿನೇಶ್ ಕುಮಾರ್ ಅವರ ಮನೆಯಿಂದ ಸಂಗ್ರಹಿಸಿದ ಸ್ಯಾಂಪಲ್ ಪರೀಕ್ಷಿಸಿ ಎಫ್‌ಎಸ್‌ಎಲ್ ವರದಿಯೂ ಗುರುವಾರ ಲಭ್ಯವಾಗಬಹುದೆಂದು ಸರಸ್ವತಿಪುರಂ ಠಾಣೆ ಪೊಲೀಸರು ನಿರೀಕ್ಷೆಯಲ್ಲಿದ್ದಾರೆ. ಪಿಎಂ ಮತ್ತು ಎಫ್‌ಎಸ್‌ಎಲ್ ವರದಿ ಬಂದ ನಂತರ ಸ್ಪಷ್ಟ ಚಿತ್ರಣ ಸಿಗಲಿದ್ದು, ಅದರ ಆಧಾರದ ಮೇಲೆ ಪ್ರಕರಣದ ▶ 6ನೇ ಪುಟಕ್ಕೆ

15 ಸಾವಿರ ಪ್ರಾಥಮಿಕ ಶಿಕ್ಷಕರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕ್ರಿಯೆಗೆ ಹೈಕೋರ್ಟ್ ತಡೆ

ಬೆಂಗಳೂರು, ನ.30– 15ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ. ಮೀಸಲಾತಿ ಸಂಬಂಧ ಹಲವು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಮಾನ್ಯ ಮಾಡಿದ ಹೈಕೋರ್ಟ್ ನ್ಯಾ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಮುಂದಿನ ಕ್ರಮ ಕೈಗೊಳ್ಳದಂತೆ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದೆ. ಅಂತಿಮ ಆಯ್ಕೆ ಪಟ್ಟಿಗೆ ಮುಂದಿನ ವಿಚಾರಣೆವರೆಗೂ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು, ವಿಚಾರಣೆಯನ್ನು ಮುಂದೂಡಿದೆ.

15 ಸಾವಿರ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ನ.19ರಂದು ಪ್ರಕಟಿಸಲಾಗಿದ್ದು, ಆ ಪೈಕಿ 13,363 ಅಭ್ಯರ್ಥಿಗಳಷ್ಟೇ ಆಯ್ಕೆ ಆಗಿದ್ದರು. ಉಳಿದ 1,637 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಲ್ಲದ ಕಾರಣ ಅವು ಖಾಲಿ ಉಳಿದಿದ್ದವು.



ಇಂದಿನಿಂದ ಬೆಳಗಲಿವೆ ರಿಂಗ್ ರೋಡ್ ಎಲ್‌ಇಡಿ ದೀಪಗಳು

ಸಂಸದ ಪ್ರತಾಪ್ ಸಿಂಹ ಡಿಸೆಂಬರ್‌ನಲ್ಲಿ ದೀಪ ಬೆಳಗಿಸುವ ವಾಗ್ದಾನ ಮಾಡಿದ್ದರು



ಮೈಸೂರು, ನ.30(ಆರ್‌ಕೆ)– ಮೈಸೂರಿನ ರಿಂಗ್ ರಸ್ತೆ ದೀಪಗಳು ನಾಳೆ(ಡಿ.1) ಯಿಂದ ಬೆಳಗಲಿವೆ.

ಇಂದು ಮೈಸೂರು–ಬೆಂಗಳೂರು ರಸ್ತೆಯ, ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಿಂದ ನಂಜನಗೂಡು ರಸ್ತೆ ಜಂಕ್ಷನ್‌ವರೆಗೆ ಪ್ರಾಯೋಗಿಕವಾಗಿ ರಿಂಗ್ ರಸ್ತೆಯಲ್ಲಿ ಎಲ್‌ಇಡಿ ದೀಪಗಳನ್ನು ಬೆಳಗಿಸಲಾಯಿತು. ಅಂಡರ್‌ಗ್ರೌಂಡ್ ಕೇಬಲ್ ಮತ್ತು ಎಲ್‌ಇಡಿ ಬಲ್ಬ್ ಅಳವಡಿಸುವ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ನಾಳೆ(ಡಿ.1) ಸಂಜೆ ಮೈಸೂರು ಹೊರವರ್ತುಲ ರಸ್ತೆಯ ಎಲ್‌ಇಡಿ ದೀಪಗಳಿಗೆ ಚಾಲನೆ ನೀಡಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. 42.5 ಕಿ.ಮೀ. ಉದ್ದದ ರಿಂಗ್ ರಸ್ತೆಯ ಎರಡೂ ಬದಿಯಲ್ಲಿರುವ 2,135 ಎಲೆಕ್ಟ್ರಿಕ್ ಕಂಬಗಳಿಗೆ ▶ 6ನೇ ಪುಟಕ್ಕೆ

ರಿಂಗ್ ರಸ್ತೆಯಲ್ಲಿ ಅಪಘಾತ, ಅಪರಾಧಗಳಿಗೆ ಬ್ರೇಕ್!

ಮೈಸೂರು, ನ. 30(ಆರ್‌ಕೆ)– ಕಗ್ಗತ್ತಲಲ್ಲಿದ್ದ ಮೈಸೂರಿನ ರಿಂಗ್ ರಸ್ತೆ ದೀಪಗಳು ಬೆಳಗಿದಲ್ಲಿ ಅಪಘಾತ, ಅಪರಾಧ ಹಾಗೂ ಅನೈತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಿದಂತಾಗುತ್ತದೆ. 6 ಪಥದ 42.5 ಕಿ.ಮೀ. ಹೊರವರ್ತುಲ ರಸ್ತೆಯಲ್ಲಿ ಕಳೆದ 3 ವರ್ಷಗಳಿಂದ ಬೀದಿ ದೀಪಗಳು ಬೆಳಗದೆ ರಾತ್ರಿ ವೇಳೆ ಕಗ್ಗತ್ತಲು ಆವರಿಸುತ್ತಿದ್ದರಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದವು. ಅದರಲ್ಲೂ ಕಡಿದಾದ ತಿರುವಿರುವ ಹೆಬ್ಬಾಳಿನ ಶೇಷಾದ್ರಿಪುರಂ ಕಾಲೇಜು ಬಳಿ, ದಟ್ಟಗಳ್ಳಿಯ ಸಾರಾ ಕನ್ವೆನ್ಷನ್ ಹಾಲ್ ಸಮೀಪ ಕೇರ್ಗಳ್ಳಿ ಬಳಿ, ಜೆಎಸ್‌ಎಸ್ ಅರ್ಬನ್ ಹಾತ್ ಬಳಿ ▶ 6ನೇ ಪುಟಕ್ಕೆ

ನಾವು ಕುರುಬರು ಎಂದು ಎದೆಯುಬ್ಬಿಸಿ ಹೇಳಿಕೊಳ್ಳಲು ನನ್ನ ಹೋರಾಟವೇ ಕಾರಣವಾಯ್ತು...

ಮೈಸೂರಲ್ಲಿ ಕನಕ ಜಯಂತಿ ಸಮಾರಂಭದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹೆಮ್ಮೆಯ ನುಡಿ

ಮೈಸೂರು, ನ.30(ಆರ್‌ಕೆಬಿ)– ಹಿಂದೆ ಕುರುಬ ಎಂದು ಹೇಳಿಕೊಳ್ಳಲು ಭಯ ಮತ್ತು ನಾಚಿಕೆ ಪಡುವ ಕಾಲವಿತ್ತು. ಆದರೆ ಇಂದು ನಾನು ಕುರುಬ ಎಂದು ಎದೆಯುಬ್ಬಿಸಿ ಹೇಳಿಕೊಳ್ಳುವ ಮಟ್ಟಕ್ಕೆ ಕುರುಬ ಸಮಾಜದಲ್ಲಿ ಜಾಗೃತಿ ಮೂಡಿದೆ. ಅದಕ್ಕೆ ಕಾರಣ ನನ್ನ ಹೋರಾಟ ಮತ್ತು ಸಂಘಟನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಕರ್ನಾಟಕ ರಾಜ್ಯ ಕುರುಬರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಗಳು ಆಯೋಜಿಸಿದ್ದ 535ನೇ ಕನಕದಾಸರ ಜಯಂತಿ ಸಮಾರಂಭದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ 1988ರಲ್ಲಿ ಎಸ್.ಆರ್.ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಾನು ಸಾರಿಗೆ ಸಚಿವನಾಗಿದ್ದೆ. ಸರ್ಕಾರದ ವತಿಯಿಂದ ಒಂದು ವರ್ಷ ಕಾಲ ಕನಕದಾಸ ಜಯಂತಿ ಆಚರಿಸುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ. ಅವರು ಒಪ್ಪಿದರು. ಆಗ ನಾನು 500ನೇ ಕನಕ ಜಯಂತಿ ಸಮಿತಿ ಅಧ್ಯಕ್ಷನಾಗಿದ್ದೆ. ಕಾರ್ಯಕ್ರಮವನ್ನು ವರ್ಷಪೂರ್ತಿ ಆಚರಿಸಲಾಯಿತು. 1989ರ ನವೆಂಬರ್‌ನಲ್ಲಿ ಜಯಂತಿ ಮಹೋತ್ಸವ ಸಮಾರೋಪ ಆಚರಿಸಬೇಕಿತ್ತು. ಅಷ್ಟರಲ್ಲಿ ಬೇರೆ ಸರ್ಕಾರ ಬಂತು. ಸಮಾರೋಪ ಸಮಾರಂಭ ಮಾಡಲೇ ಇಲ್ಲ ಎಂದು ತಾವು ಸರ್ಕಾರದ ವತಿಯಿಂದ ಕನಕ ಜಯಂತಿ ಆಚರಣೆಗೆ ನೀಡಿದ ಮಹತ್ವದ ಬಗ್ಗೆ ವಿವರಿಸಿದರು. ನಾನು ಕನಕದಾಸರ ಸಾಹಿತ್ಯವನ್ನು, ಅವರ ಪುಸ್ತಕಗಳನ್ನು ಕಡಿಮೆ ದರದಲ್ಲಿ ಇಡೀ ರಾಜ್ಯದ ಜನರಿಗೆ ಸಿಗಬೇಕೆಂದು ಮುದ್ರಿಸಿ, ▶ 9ನೇ ಪುಟಕ್ಕೆ



ಬದಲಾವಣೆ ತರಲು ಬಿಡದ ಆರ್‌ಎಸ್‌ಎಸ್

ಮೈಸೂರು, ನ.30(ಆರ್‌ಕೆಬಿ)– ಜಾತಿ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಆರ್‌ಎಸ್‌ಎಸ್ ಬಿಡುವುದಿಲ್ಲ. ಆರ್‌ಎಸ್‌ಎಸ್ ಹೆಸರು ಹೇಳಿ ಬಿಜೆಪಿಯನ್ನು ದೂರವಿಡಬೇಕಿದೆ. ಆರ್‌ಎಸ್‌ಎಸ್‌ನ ಒಬ್ಬರಾದರೂ ಸ್ವಾತಂತ್ರ್ಯ ಹೋರಾಟಗಾರರನ್ನು ತೋರಿಸಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದರು. ಆರ್‌ಎಸ್‌ಎಸ್‌ನವರಿಗೆ ಸಮಾಜ ಬದಲಾವಣೆ ಬೇಕಾಗಿಲ್ಲ. ದೇಶಭಕ್ತರನ್ನು ಹುಟ್ಟು ಹಾಕುವ ಸಂಸ್ಥೆ ಎಂದು ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ದೇಶಕ್ಕೆ ಅವರಿಂದ ಯಾವುದೇ ಕೊಡುಗೆ ಇಲ್ಲ. ಮುಸ್ಲಿಮರನ್ನು ಬೆದರು ಬೊಂಬೆಯಾಗಿಟ್ಟುಕೊಂಡು ದೇಶ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಅಂಥವರ ಬಗ್ಗೆ ಎಚ್ಚರಿಕೆಯಿಂದಿರಿ ಎಂದು ಸಿದ್ದರಾಮಯ್ಯ ಆರ್‌ಎಸ್‌ಎಸ್ ಹೆಸರು ಹೇಳಿ ಬಿಜೆಪಿಯನ್ನು ದೂರ ಇಡುವಂತೆ ಕರೆ ನೀಡಿದರು. ಸುಮ್ಮನೆ ಕನಕದಾಸರ ಪ್ರತಿಮೆಗೆ ಹಾರ ಹಾಕಿ ಹೊರಟರೆ ಸಾಧ್ಯವಿಲ್ಲ. ಅಸಮಾನತೆ ಇಲ್ಲದಿದ್ದರೆ ಅವರು ಶೋಷಣೆ ಮಾಡಲು ಸಾಧ್ಯವಿಲ್ಲ. ಹಾಗಾಗಿ ಎಲ್ಲರೂ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಬೇಕು. ಅವಾಗಲೇ ಕನಕದಾಸರು, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಆಶಯದಂತೆ ಜಾತಿ ವ್ಯವಸ್ಥೆಯನ್ನು ತೊಡೆದು ಹಾಕಿ, ಸಮಾನತೆ ತರಲು ಸಾಧ್ಯ ಎಂದು ಹೇಳಿದರು.

ಹೆಚ್.ವಿಶ್ವನಾಥ್ ಒಡನಾಟ ಮೆಲುಕು ಹಾಕಿದ ಸಿದ್ದರಾಮಯ್ಯ

ಮೈಸೂರು, ನ.30–ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ನಡೆದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮತ್ತು ಎಚ್.ವಿಶ್ವನಾಥ್ ಜೊತೆಗಿನ ಒಡನಾಟವನ್ನು ಮೆಲುಕು ಹಾಕಿದರು.

ಹಿಂದೆ ಕುರುಬ ಎಂದು ಹೇಳಿಕೊಳ್ಳಲು ವಿದ್ಯಾರ್ಥಿಗಳು ಹಿಂಜರಿಯುತ್ತಿದ್ದ ಕಾಲವಿತ್ತು. ನಾನು ಕೊನೆಯ ವರ್ಷದ ಲಾ ಓದುತ್ತಿದ್ದೆ. ವಿಶ್ವನಾಥ್ ಮೊದಲ ವರ್ಷದ ಲಾ ವಿದ್ಯಾರ್ಥಿ. 1971–72ರಲ್ಲಿ ಕಾಳಿದಾಸ ವಿದ್ಯಾರ್ಥಿ ಸಂಘ ಕಟ್ಟಿದೆವು. ನಾನು ಅಧ್ಯಕ್ಷ, ವಿಶ್ವನಾಥ್ ಪ್ರಧಾನ ಕಾರ್ಯದರ್ಶಿ. ನಮ್ಮ ಸಮುದಾಯದ ವಿದ್ಯಾರ್ಥಿಗಳನ್ನು ಸಂಘಟಿಸಿದೆವು. ನಾನು ಲಾಯರ್ ಆದ ಮೇಲೆ ವಿಶ್ವನಾಥ್ ಅಧ್ಯಕ್ಷನಾದ ಎಂದು ತಮ್ಮ ಮತ್ತು ಎಚ್.ವಿಶ್ವನಾಥ್ ಜೊತೆಗಿನ ಒಡನಾಟವನ್ನು ಸ್ಮರಿಸಿದರು.

ಸಿದ್ದರಾಮಯ್ಯಗೆ ವರುಣಾ ಲಕ್ಕಿ ಕ್ಷೇತ್ರ, ಇಲ್ಲಿ ಗೆದ್ದರೆ ಸಿಎಂ ಗ್ಯಾರಂಟಿ...!

ಭವಿಷ್ಯ ನುಡಿದ ಡಾ.ಯತೀಂದ್ರ ಸಿದ್ದರಾಮಯ್ಯ



ಮೈಸೂರು, ನ.30(ಆರ್‌ಕೆಬಿ)– ಸಿದ್ದರಾಮಯ್ಯ ಅವರಿಗೆ ವರುಣಾ ಲಕ್ಕಿ ಕ್ಷೇತ್ರ. ತಂದೆಯವರು ವರುಣಾಗೆ ಬರಬೇಕೆಂದು ಒತ್ತಾಯ ಮಾಡುತ್ತೇನೆ. ಕೊನೆ ಚುನಾವಣೆ ವರುಣಾದಿಂದ ಸ್ಪರ್ಧಿಸಲಿ ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಪ್ಪ ವರುಣಾಗೆ ಬಂದರೆ ನಾನು ಸ್ಪರ್ಧಿಸುವುದಿಲ್ಲ. ಇಲ್ಲಿ ಸಿದ್ದರಾಮಯ್ಯ ಅವರು ಗೆದ್ದರೆ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶವಿದೆ ಎಂದು ಭವಿಷ್ಯ ನುಡಿದರು. ಬಿಜೆಪಿ ನಾಯಕ ಸಿ.ಟಿ.ರವಿ ವಿರುದ್ಧ ಕಿಡಿಕಾರಿದ ಯತೀಂದ್ರ ಸಿದ್ದರಾಮಯ್ಯ, ಬಿಜೆಪಿಯವರು ಕೇವಲ ಹಿಂದುತ್ವವಾದಿಗಳು. ನಾವೇ ನಿಜವಾದ ಹಿಂದೂಗಳು ಎಂದು ಬೊಗಳೆ ಬಿಡುತ್ತಾರೆ. ಆದರೆ ಬಿಜೆಪಿ ಅಧಿಕಾರದ ಅವಧಿಯಲ್ಲೇ ಹಿಂದೂಗಳ ಹತ್ಯೆ ಹೆಚ್ಚಾಗಿ ನಡೆದಿದೆ ಎಂದು ಟೀಕಿಸಿದರು.

ಪೊಲೀಸ್ ಜೀಪಿನಿಂದ ಹಾರಿ ಆರೋಪಿ ದುರಂತ ಸಾವಿನ ಪ್ರಕರಣ

ಸರ್ಕಲ್ ಇನ್‌ಸ್ಪೆಕ್ಟರ್ ಸೇರಿ ಐವರು ಅಮಾನತು

ಸಬ್‌ಇನ್‌ಸ್ಪೆಕ್ಟರ್ ಸೇರಿ ಮೂವರ ವಿರುದ್ಧ ಎಫ್‌ಐಆರ್ ದಾಖಲು




ಸರ್ಕಲ್ ಇನ್‌ಸ್ಪೆಕ್ಟರ್ ಶಿವಮಾದಯ್ಯ ಅವರ ಅಮಾನತು ರದ್ದುಗೊಳಿಸಬೇಕೆಂದು ಆಗ್ರಹಿಸಿ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಯಳಂದೂರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ನ.30– ಬಾಲಕಿ ಅಪಹರಣ ಪ್ರಕರಣದ ಆರೋಪಿ ತಪ್ಪಿಸಿಕೊಳ್ಳುವ ಸಲುವಾಗಿ ಚಲಿಸುತ್ತಿದ್ದ ಪೊಲೀಸ್ ಜೀಪಿನಿಂದ ಹಾರಿ ದುರಂತ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿದೆ.

ಯಳಂದೂರು ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಶಿವಮಾದಯ್ಯ, ಮಾಂಬಳ್ಳಿ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಾದೇಗೌಡ, ಎಎಸ್‌ಐ ಚೆಲುವರಾಜು, ಮಹಿಳಾ ಕಾನ್‌ಸ್ಟೇಬಲ್ ಭದ್ರಮ್ಮ ಹಾಗೂ ಕಾನ್‌ಸ್ಟೇಬಲ್ ಸೋಮಶೇಖರ್ ಅಮಾನತುಗೊಂಡವರು. ಅಮಾನತುಗೊಂಡಿರುವ ಐವರ ಪೈಕಿ ಶಿವಮಾದಯ್ಯ, ಮಾದೇಗೌಡ ಹಾಗೂ ಸೋಮಶೇಖರ್ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು. ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ತಿಳಿಸಿದ ಎಸ್‌ಪಿ ಅವರು, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದರು. ಆರೋಪಿಯನ್ನು ಕರೆದೊಯ್ಯುವ ವೇಳೆ ಕರ್ತವ್ಯ ಲೋಪವೆಸಗಿದ ಆರೋಪದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ.

ಯಳಂದೂರು ತಾಲೂಕಿನ ಕುಂತೂರು ಮೋಳೆ ಗ್ರಾಮದ ನಿಂಗರಾಜು (24) ವಿರುದ್ಧ ಅದೇ ಗ್ರಾಮದ ಬಾಲಕಿ ಅಪಹರಣದ ಬಗ್ಗೆ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆರೋಪಿ ನಿಂಗರಾಜುವನ್ನು ಪೊಲೀಸರು ಜೀಪಿನಲ್ಲಿ ಮಂಗಳವಾರ ಕರೆದೊಯ್ಯುವಾಗ ಯರಿಯೂರು ಮತ್ತು ಮದ್ದೂರು ನಡುವೆ, ಜೀಪಿನಿಂದ ಹಾರಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ತೀವ್ರವಾಗಿ ಗಾಯಗೊಂಡು ಮೃತಪಟ್ಟಿದ್ದ. ಈ ಸಂಬಂಧ ಆತನ ಕುಟುಂಬದವರೊಂದಿಗೆ ಗ್ರಾಮಸ್ಥರು ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿ ಸಂಬಂಧಿಸಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.



ಮೈಸೂರು ನಗರ ಪೊಲೀಸ್ ಆಯುಕ್ತರಾಗಿ ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿರುವ ರಮೇಶ್ ಭಾನೊತ್ ಅವರನ್ನು ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ಪ್ರದೀಪ್‌ಸಿಂಗ್ ಅವರು ಆತ್ಮೀಯವಾಗಿ ಅಭಿನಂದಿಸಿದರು.

ನಕ್ಕರೆ ಅದೇ ಸ್ವರ್ಗ

ತಿಮ್ಮ : ಅಲ್ವೋ ಕಾಲಿಗೆ ಹಾವು ಕಚ್ಚಿ ಇನ್ನೂ ಐದು ನಿಮಿಷ ಆಗಲಿಲ್ಲ, ಅಷ್ಟರಾಗ ಹೆಂಗ ಸತ್ತ ಅವನು...?

ಗುಂಡ : ತಲೀಗೆ ವಿಷ ಏರತ್ತೋ ಏನೋ ಅಂತ ಕುತ್ತಿಗೀಗೆ ಜೋರಾಗಿ ಹಗ್ಗ ಬಿಗಿದಿದ್ವಿ..!

ಮೈಸೂರು ಮಿತ್ರ

ಗುರುವಾರ, 1 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದಲ್ಲಿ ಏನೇ ಸವಾಲುಗಳು ಬಂದರು ಅದನ್ನು ಸಮರ್ಥವಾಗಿ ಎದುರಿಸುವ ಆತ್ಮ ಬಲವಿರಬೇಕು. ಅಳುತ್ತಾ ಬದುಕುವುದಕ್ಕಿಂತ ಅರಳುತ್ತಾ ಬದುಕಬೇಕು.


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಗಿನ ಅರಮನೆಗಿಂತ ಗುಡಿಸಲೇ ಮೇಲು.

ನಿಮ್ಮ ಪತ್ರಗಳು

ಶಿಕ್ಷಣ ಸಚಿವ ಬಿ.ಸಿ. ನಾಗೇಶ್‌ರವರಿಗೆ ಒಂದು ಬಹಿರಂಗ ಪತ್ರ

ಮಾನ್ಯರೆ,

ಮಾನ್ಯ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರೇ ನೀವು ಹಿರಿಯರೂ, ಅನುಭವಿಗಳೂ, ಸಮಾಜದಲ್ಲಿ ಸುಧಾರಣೆ ತರಬಲ್ಲ ಶಕ್ತಿ ಹೊಂದಿರುವ ಅತ್ಯಂತ ಜವಾಬ್ದಾರಿಯುಳ್ಳ ಅತಿ ದೊಡ್ಡ ಖಾತೆಯೂ ಆಗಿರುವ ಶಿಕ್ಷಣ ಸಚಿವರಾಗಿದ್ದೀರಿ.



ಇಂದಿಗೂ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳ ದುಃಸ್ಥಿತಿ ಹೇಗಿದೆ ಎಂದರೆ, ಅದೆಷ್ಟೋ ಶಾಲೆಗಳಿಗೆ ಸುಸಜ್ಜಿತ ಕಟ್ಟಡಗಳಿಲ್ಲ, ಶೌಚಾಲಯಗಳಂತೂ ನಿರ್ವಹಣೆ ಇಲ್ಲದೆ ಕೊಚ್ಚೆಯಾಗಿ ಗಬ್ಬೆದ್ದು ನಾರುತ್ತಿವೆ. ಅಗತ್ಯಕ್ಕೆ ತಕ್ಕಂತೆ ಶಿಕ್ಷಕರಿಲ್ಲ, ಇದ್ದರೂ ಅವರು ಪಠ್ಯಕ್ಕಿಂತ ಪಠ್ಯೇತರ ಚಟುವಟಿಕೆಗಳಲ್ಲಿ ಬ್ಯುಸಿಯಾಗಿರುತ್ತಾರೆ. ಕಾಲಕ್ಕನುಗುಣವಾಗಿ ಪುಸ್ತಕ, ಬ್ಯಾಗ್, ಯೂನಿಫಾರಂ, ಶೂ ವಿತರಿಸಿಲ್ಲ. ಇವು ಸರಬರಾಜಾಗುವಷ್ಟರಲ್ಲಿ ಅರ್ಧ ಶೈಕ್ಷಣಿಕ ವರ್ಷವೇ ಕಳೆದುಹೋಗಿರುತ್ತದೆ.

ಕಳೆದ ಎರಡು ವರ್ಷಗಳಿಂದ ಸೈಕಲ್ ಕೂಡ ವಿತರಿಸಿಲ್ಲ. ಯಾರನ್ನೂ ಫೇಲ್ ಮಾಡಬಾರದೆಂಬ ಸೂಚನೆ ಇರುವುದರಿಂದ ಎಸ್‌ಎಸ್‌ಎಲ್‌ಸಿ ಪಾಸಾಗಿರುವ ಶೇ. 50ಕ್ಕಿಂತ ಹೆಚ್ಚು ಮಕ್ಕಳಿಗೆ ಒಂದು ರಜಾ ಚೀಟಿ ಬರೆಯಲು ಬರುವುದಿಲ್ಲ. ಇಂಗ್ಲಿಷ್‌ನಲ್ಲಂತೂ ಕೇವಲ 10 ಪದಗಳನ್ನು ತಪ್ಪಿಲ್ಲದೆ ಬರೆಯುವ ಸಾಮರ್ಥ್ಯವಿಲ್ಲ. ಇದರಿಂದಾಗಿ ಮಕ್ಕಳ ದಾಖಲಾತಿ ದಿನೇ ದಿನೇ ಕುಸಿಯುತ್ತಿದೆ.

ಇಂದಿಗೂ ಬಸ್ಸುಗಳಿಲ್ಲದ, ರಸ್ತೆಗಳಿಲ್ಲದ ಅನೇಕ ಹಳ್ಳಿಗಳಿವೆ. ಊಟಕ್ಕೂ ಕಷ್ಟಪಡುವ ಅನೇಕ ಕುಟುಂಬಗಳಿವೆ. ಹಾಗಾಗಿ ಸರ್ಕಾರ ಬಿಸಿಯೂಟ, ಉಚಿತ ಸೈಕಲ್ ಸೌಲಭ್ಯ ಕಲ್ಪಿಸಿದ್ದರಿಂದ ತುಂಬಾ ಅನುಕೂಲವಾಗಿದೆ.

ಶಾಲೆಗಳಿಗೆ ಸೌಲಭ್ಯ ಕಲ್ಪಿಸುವುದಷ್ಟೇ ನಿಮ್ಮ ಜವಾಬ್ದಾರಿ ಅಲ್ಲ. ಶಿಕ್ಷಕರು ಮತ್ತು ಮಕ್ಕಳು 'ಬಂದಾ ಪುಟ್ಟಾ, ಹೋದಾ ಪುಟ್ಟಾ' ಎಂಬಂತಾಗಬಾರದು. ಮಕ್ಕಳು ಶಾಲೆಯಿಂದ ನಿರ್ಗಮಿಸುವಷ್ಟರಲ್ಲಿ ಅವರು ಏನು ಕಲಿತರು, ಎಷ್ಟು ಕಲಿತರು ಎಂಬುದನ್ನು ಪರಿಶೀಲಿಸಿ ಪರಿಗಣಿಸಬೇಕಾದುದು ಕೂಡ ನಿಮ್ಮ ಮತ್ತು ನಿಮ್ಮ ಇಲಾಖೆಯ ಜವಾಬ್ದಾರಿ.

ಬಡವ ಬಲ್ಲಿದ ಎನ್ನದೇ ಎಲ್ಲರಿಗೂ ಏಕರೂಪ ಶಿಕ್ಷಣ ವ್ಯವಸ್ಥೆ ರೂಪಿಸುವ ಆಲೋಚನೆ ಮರೀಚಿಕೆಯಾಗಿದೆ. ಕೊನೇಪಕ್ಷ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿಯಾದರೂ ನೀವು ಮತ್ತು ನಿಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು ಒಬ್ಬೊಬ್ಬರು ಒಂದೊಂದು ದಿನ ಒಂದೊಂದು ಶಾಲೆಯಲ್ಲಿ ವಾಸ್ತವ್ಯ ಹೂಡುವ ಪ್ರಕ್ರಿಯೆ ಪ್ರಾರಂಭಿಸಿ. ಪಠ್ಯಪುಸ್ತಕ ಪರಿಷ್ಕರಣೆ, ಹಿಜಾಬ್, ಕೇಸರಿ ಬಣ್ಣ ಮುಂತಾದ ಗೊಂದಲಗಳಿಗೆ ಕಡಿವಾಣ ಹಾಕಿ. ಆಗ ಶಾಲೆಗಳಲ್ಲಿ ಸಾಕಷ್ಟು ಸುಧಾರಣೆಗಳು ಶುರುವಾಗುತ್ತವೆ. ನೀವು ನೀಡುವ ಗುಣಮಟ್ಟದ ಶಿಕ್ಷಣವು ದೇಶದ ಉಜ್ವಲ ಭವಿಷ್ಯಕ್ಕೆ ಭದ್ರವಾದ ಬುನಾದಿಯಾಗುತ್ತದೆ.

– ಶ್ರೀಧರ ಎಸ್. ಕಲ್ಕುಣಿ, ಬೋಗಾದಿ, ಮೈಸೂರು.

'ಟಿಪ್ಪು ನಿಜಕನಸುಗಳು' ನಾಟಕ ಎಲ್ಲಾ ಜಿಲ್ಲೆಗಳಲ್ಲೂ ಪ್ರದರ್ಶನವಾಗಲಿ



ಮಾನ್ಯರೆ,

ರಂಗಾಯಣದ ಭೂಮಿಗೀತದಲ್ಲಿ ನಡೆಯುತ್ತಿರುವ 'ಟಿಪ್ಪು ನಿಜಕನಸುಗಳು' ನಾಟಕವು ಎಲ್ಲಾ ವರ್ಗದ ಜನರನ್ನೂ ಆಕರ್ಷಿಸುತ್ತಿದೆ. ಮೈಸೂರಿನವರಾದ ನಮಗೆ ಟಿಪ್ಪುವಿನ ನಿಜ ಜೀವನದ ಎಷ್ಟೋ ವಿಷಯಗಳ ಪರಿಚಯ ಇದ್ದಂತಿಲ್ಲ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಎಷ್ಟೋ ವಿಷಯಗಳು ಈ ನಾಟಕದಲ್ಲಿದೆ. ಪ್ರತಿಯೊಬ್ಬರೂ ಈ ನಾಟಕವನ್ನು ನೋಡಬೇಕಿದೆ. ರಂಗಾಯಣದ ನಿರ್ದೇಶಕರಾದ ಅಡ್ಡಂಡ ಕಾರ್ಯಪ್ಪನವರ ಶ್ರಮ ಈ ನಾಟಕದಲ್ಲಿ ಸಾಬೀತಾಗಿದೆ.

ಸುಮಾರು 25 ಕಲಾವಿದರ ಅಭಿನಯ ಸರ್ವ ಶ್ರೇಷ್ಠವಾಗಿದೆ. ಪ್ರತೀದಿನ ಭೂಮಿಗೀತದ ಸಭಾಂಗಣ ತುಂಬುತ್ತಿದ್ದು, ಬೆಳಕು, ರಂಗಸಜ್ಜಿಕೆ, ಧ್ವನಿಮುದ್ರಣ, ಸಂಗೀತ, ನಾಟಕ ಪ್ರಿಯರಿಗೆ ಬಹು ಮೆಚ್ಚುಗೆಯಾಗುತ್ತದೆ. ಟಿಪ್ಪು, ಟಿಪ್ಪುವಿನ ಪತ್ನಿ ಮತ್ತು ಪೂರ್ಣಯ್ಯನವರು ನಡೆಸುವ ಸಂಭಾಷಣೆ ಮೆಲುಕು ಹಾಕುವಂತಿದೆ.

ರಂಗಾಸಕ್ತರು ತಪ್ಪದೇ ನೋಡಬೇಕಾದ ನಾಟಕವಿದು. ಅಲ್ಲದೆ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಈ ನಾಟಕವನ್ನು ಪ್ರದರ್ಶಿಸಬೇಕಿದೆ. ರಾಜ್ಯದ ಮುಖ್ಯಮಂತ್ರಿಗಳು ಈ ನಾಟಕವನ್ನು ಅಗತ್ಯವಾಗಿ ವೀಕ್ಷಿಸಬೇಕಿದೆ. ನಾಟಕದ ಕಲಾವಿದರಿಗೆ, ನಾಟಕ ಕರ್ತೃವಿಗೆ ಮೈಸೂರಿನ ಜನತೆ ಪರ ವಾಗಿ ಧನ್ಯವಾದಗಳು.

– ಮಜೂರು ರಘುವೀರ ಪುರಾಣಿಕ, ಸಿದ್ಧಾರ್ಥನಗರ, ಮೈಸೂರು.

ಭತ್ತ ಖರೀದಿ ಕೇಂದ್ರ ತೆರೆಯಿರಿ

ಮಾನ್ಯರೆ,

ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕಿನ ಬನ್ನೂರು ಸುತ್ತಮುತ್ತಲಿನ ಜಮೀನುಗಳಲ್ಲಿ ಭತ್ತ ಕಟಾವು ಶುರುವಾಗಿರುವುದರಿಂದ ಬನ್ನೂರು ಹೋಬಳಿ ಕೇಂದ್ರದಲ್ಲಿ ಭತ್ತ ಖರೀದಿ ಕೇಂದ್ರ ತೆರೆದರೆ ಈ ಭಾಗದ ರೈತರಿಗೆ ಅನುಕೂಲವಾಗಲಿದೆ. ಬನ್ನೂರು ಹೋಬಳಿಯ ಗ್ರಾಮಗಳಾದ ತುರಗನೂರು, ಯಾಚೇನಹಳ್ಳಿ, ದೊಡ್ಡಮುಲಗೂಡು, ಮೆಣಸಿಕ್ಯಾತನಹಳ್ಳಿ, ಅಂಕನಹಳ್ಳಿ, ಕೊಡಗಹಳ್ಳಿ, ಹನುಮನಾಳು, ಗೊರವನಹಳ್ಳಿ, ಬಾನಾಗವಾಡಿ ಮತ್ತು ಬನ್ನೂರು ಗ್ರಾಮಾಂತರ ಪ್ರದೇಶದ ಅತ್ತಹಳ್ಳಿ, ಬೆಟ್ಟಹಳ್ಳಿ, ಮೇಗಳಕೊಪ್ಪಲು, ಮಲಿಯೂರು, ಹೆಗ್ಗೂರು, ದಾಸೇಗೌಡನಕೊಪ್ಪಲು, ಯಡಹಳ್ಳಿ ಸೇರಿದಂತೆ ಸುಮಾರು ಇನ್ನೂ ಹತ್ತು ಹಳ್ಳಿಗಳಿದ್ದು, ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭತ್ತ ಬೆಳೆಯುತ್ತಾರೆ. ಆದ್ದರಿಂದ ಬನ್ನೂರಿನಲ್ಲಿ ಭತ್ತ ಖರೀದಿ ಕೇಂದ್ರ ತೆರೆದರೆ ಬನ್ನೂರು ಹೋಬಳಿ ರೈತರಿಗೆ ಅನುಕೂಲವಾಗುತ್ತದೆ.

– ಟಿ.ಎಸ್. ಪ್ರಸನ್ನ, ತುರಗನೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮಹಿಳೆಯರಿಗೆ ಉದ್ಯೋಗ ಸ್ಥಳಗಳು ಎಷ್ಟು ಸುರಕ್ಷಿತ...?

ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಘನತೆಯನ್ನು ಕಾಪಾಡಲು ಬಿಗಿ ಕಾಯಿದೆಯೇನೋ ಇದೆ. ಆದರೆ ಲಭ್ಯ ಮಾಹಿತಿಯ ಪ್ರಕಾರ, ದೌರ್ಜನ್ಯವನ್ನು ಎದುರಿಸುವವರಲ್ಲಿ ಶೇ.76ರಷ್ಟು ಮಹಿಳೆಯರು ತಮ್ಮ ಉದ್ಯೋಗ ಸ್ಥಳಗಳಲ್ಲಿ ಮೌಖಿಕ ದೌರ್ಜನ್ಯವನ್ನು ಎದುರಿಸುತ್ತಾರೆ. ದೈಹಿಕ ದೌರ್ಜನ್ಯ ಮತ್ತು ದೃಷ್ಟಿ ದೌರ್ಜನ್ಯಗಳನ್ನು ಎದುರಿಸುವ ಮಹಿಳೆಯರು ಅನುಕ್ರಮವಾಗಿ ಶೇ.44 ಮತ್ತು 7ರಷ್ಟು ಇದ್ದಾರೆ. ಬೆಂಗಳೂರು ನಗರದಲ್ಲಿ ಶೇಕಡಾ 51ರಷ್ಟು ಮಹಿಳೆಯರು ತಮ್ಮ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯವನ್ನು ಎದುರಿಸುತ್ತಾರೆ ಹಾಗೂ ಒಟ್ಟಾರೆ, ಶೇಕಡಾ 40ರಷ್ಟು ಉದ್ಯೋಗಿ ಮಹಿಳೆಯರು ದಿನ–ನಿತ್ಯ ಯಾವುದಾದರೂ ಒಂದು ಬಗೆಯ ದೌರ್ಜನ್ಯಕ್ಕೆ ಒಳಗಾಗುತ್ತಾರೆ.



ಕಳೆದ ವಾರವಷ್ಟೇ ವಿವಿಧ ಸಂಸ್ಥೆಗಳು, ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರ ರಾಷ್ಟ್ರೀಯ ದಿನಾಚರಣೆಯನ್ನು ಆಚರಿಸಿದ ಮುಂದುವರೆದ ಭಾಗವಾಗಿ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ ದೇಶದಾದ್ಯಂತ ಎಲ್ಲ ಸರ್ಕಾರಿ ಸಂಸ್ಥೆಗಳಿಗೆ ಪತ್ರ ಬರೆದು ಡಿಸೆಂಬರ್ ತಿಂಗಳ ಎರಡನೇ ವಾರ ಅಂತ್ಯವಾಗುವ ವೇಳೆಗೆ ತಮ್ಮ ಎಲ್ಲ ಕಚೇರಿಗಳಲ್ಲಿ 2013ರಲ್ಲಿ ಜಾರಿಗೆ ಬಂದ ಉದ್ಯೋಗ ಸ್ಥಳದಲ್ಲಿ ಮಹಿಳೆಯರು ಎದುರಿಸುವ ಲೈಂಗಿಕ ಕಿರುಕುಳ(ಸಂರಕ್ಷಣೆ, ತಡೆ ಹಾಗೂ ಪರಿಹಾರ) ಕಾಯಿದೆ, 2013 ಬಗ್ಗೆ ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ಎಲ್ಲ ಉದ್ಯೋಗಿಗಳಲ್ಲಿ ಅರಿವನ್ನು ಮೂಡಿಸಬೇಕೆಂಬ ಆದೇಶವನ್ನು ಹೊರಡಿಸಿತು. ಇಲ್ಲಿ ನಮ್ಮ ಗಮನವನ್ನು ಸೆಳೆಯುವುದು ಈ ಕಾರ್ಯಾಗಾರಗಳನ್ನು ಏರ್ಪಡಿಸುವುದನ್ನು, ಅದರಲ್ಲಿ ಎಲ್ಲ ಉದ್ಯೋಗಿಗಳ ಭಾಗವಹಿಸುವಿಕೆಯನ್ನು ಕಡ್ಡಾಯ ಮಾಡಿರುವುದು ಹಾಗೂ ಈ ಆದೇಶವನ್ನು ಪಾಲಿಸಲು ಒಂದು ಸಮಯ ಮಿತಿಯನ್ನು ನಿಗದಿಪಡಿಸಿರುವುದು. ಕಾರ್ಯಕ್ರಮ ನಡೆಸಿದ ವರದಿಯನ್ನು ಆಯಾ ಸಂಸ್ಥೆಗಳ ಕೇಂದ್ರ ಕಚೇರಿಗಳಿಗೆ ಕಳುಹಿಸಬೇಕೆಂಬ ಸೂಚನೆಯೂ ಇದೆ. ಈಗಾಗಲೇ ಅನೇಕ ಸಂಸ್ಥೆಗಳು ಕಾರ್ಯಾಗಾರಗಳನ್ನು ನಡೆಸಿವೆ. ಆದರೆ ಇದೇ ಆದೇಶ ರಾಜ್ಯ ಸರ್ಕಾರದ ಕಚೇರಿಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ವೈದ್ಯಕೀಯ ಹಾಗೂ ಖಾಸಗಿ ಮತ್ತು ಕಾರ್ಪೊರೇಟ್ ಸಂಸ್ಥೆಗಳಿಗೆ ಅನ್ವಯಿಸಿದೆಯೇ, ಆದೇಶ ಈಗಾಗಲೇ ತಲುಪಿರುವ ಎಲ್ಲ ಕಚೇರಿಗಳೂ ಈ ಕಾರ್ಯಾಗಾರಗಳನ್ನು ನಡೆಸಿವೆಯೇ ಎಂಬ ವಿಚಾರದತ್ತ ಗಮನಹರಿಸುವುದೂ ಮುಖ್ಯ.

ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರು ಎದುರಿಸುವ ಹಿಂಸೆ ಅಥವಾ ಕಿರುಕುಳವನ್ನು ತಡೆಗಟ್ಟಿ ಅವರಿಗೆ ಸುರಕ್ಷಿತ ಪರಿಸರದಲ್ಲಿ ಕೆಲಸ ಮಾಡುವಂಥ ವಾತಾವರಣವನ್ನು ನಿರ್ಮಾಣ ಮಾಡುವುದು ಉದ್ಯೋಗದಾತರ ಜವಾಬ್ದಾರಿ ಎನ್ನುವ ವಿಚಾರಕ್ಕೆ ಕಾನೂನಾತ್ಮಕ ಸ್ವೀಕಾರ ದೊರೆತು ಹೆಚ್ಚು–ಕಡಿಮೆ ಒಂದು ದಶಕ ಮಾತ್ರ ಕಳೆದಿದ್ದರೂ ಈ ಕಾಯಿದೆಗೆ 30 ವರ್ಷಗಳ ಇತಿಹಾಸವೇ ಇದೆ. 1992ರಲ್ಲಿ ರಾಜಸ್ಥಾನದ ಭತೇರಿ ಎಂಬ ಗ್ರಾಮದಲ್ಲಿ ನಡೆಯುತ್ತಿದ್ದ 9 ತಿಂಗಳ ಹೆಣ್ಣು ಮಗುವಿನ ವಿವಾಹವನ್ನು ತಡೆಗಟ್ಟಿದ್ದಕ್ಕಾಗಿ, ಆ ಗ್ರಾಮದ ಪ್ರಬಲ ಜಾತಿಗಳ, ಪುರುಷ ಪಟ್ಟಭದ್ರ ಹಿತಾಸಕ್ತಿಗಳ ವೈರವನ್ನು ಕಟ್ಟಿಕೊಂಡ ಭಾವರಿ ದೇವಿಯ ಮೇಲೆ ಸಾಮೂಹಿಕ ಅತ್ಯಾಚಾರವನ್ನು ನಡೆಸಿದ ಪುರುಷರ ವಿರುದ್ಧ ಆಕೆ ನಡೆಸಿದ ಹೋರಾಟ ಮಹಿಳೆಯರು ತಮ್ಮ ಉದ್ಯೋಗ ಸಂಬಂಧಿ ಜವಾಬ್ದಾರಿಗಳನ್ನು ನಿರ್ವಹಿಸುವಾಗ ಎದುರಿಸುವ ಅಪಾಯದತ್ತ ಸಮಾಜದ–ಸರ್ಕಾರದ ಗಮನವನ್ನು ಪ್ರಥಮ ಬಾರಿಗೆ ಸೆಳೆಯಿತು.

ಆಕೆಯ ಹೋರಾಟಕ್ಕೆ ಜೊತೆ ನೀಡಿದ ಮಹಿಳಾ ಸಂಘಟನೆಗಳ ಒಕ್ಕೂಟ 'ವಿಶಾಖ' ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜಸ್ಥಾನ ಸರ್ಕಾರದ ವಿರುದ್ಧ ಹೂಡಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ಸ್ಪಂದಿಸಿದ ನ್ಯಾಯಾಲಯ, ಮಹಿಳೆಯರು ಕೆಲಸ ಮಾಡುವ ಸ್ಥಳ ಮುಖ್ಯವಲ್ಲ, ಅವರು ನಿರ್ಭೀತಿಯಿಂದ ಕೆಲಸ ಮಾಡುವ ವಾತಾವರಣ ನಿರ್ಮಾಣ ಮಾಡುವುದು ಉದ್ಯೋಗ ಸಂಸ್ಥೆಯ ಜವಾಬ್ದಾರಿ ಎಂಬ ಸಂದೇಶವನ್ನು ಕಳುಹಿಸಿತು. ಭಾವರೀ ದೇವಿ ಕೆಲಸ ಮಾಡುತ್ತಿದ್ದುದು ಬಾಲ್ಯವಿವಾಹವನ್ನು ತಡೆಗಟ್ಟಲು ರಾಜಸ್ಥಾನ ಸರ್ಕಾರವೇ ಆಯೋಜಿಸಿದ್ದ ಸಾಥಿನ್ ಎಂಬ ಕಾರ್ಯಕ್ರಮದಲ್ಲಿ. ಆ ಸರ್ಕಾರ ತನ್ನ ಉದ್ಯೋಗಿಗೆ ಸೂಕ್ತ ರಕ್ಷಣೆಯನ್ನು ನೀಡಲು ವಿಫಲವಾದದ್ದರಿಂದಲೇ ಆಕೆ ಅಮಾನುಷ ದೌರ್ಜನ್ಯವನ್ನು ಎದುರಿಸಬೇಕಾದಂಥ ಪರಿಸ್ಥಿತಿ ಸೃಷ್ಟಿಯಾದದ್ದು. ರಕ್ಷಣೆಯ ಮಾತಿರಲಿ ಆಕೆಗೆ ಇಂದಿಗೂ ನ್ಯಾಯ ದೊರೆಯದಿರುವುದು, ಇಡೀ ಗ್ರಾಮವೇ ಆಕೆಯ ನೆರವಿಗೆ ಬಾರದಂಥ ಸ್ಥಿತಿಯನ್ನು ಊಳಿಗಮಾನ್ಯ ವ್ಯವಸ್ಥೆ ತಂದಿಟ್ಟಿದ್ದು, ಅತ್ಯಾಚಾರ ಮಾಡಿದವರ ಪರವಾಗಿಯೇ ನಿಂತ ಜಯಪುರದ ನ್ಯಾಯಾಲಯ– ಇವುಗಳೆಲ್ಲ ನಮ್ಮ ಸಮಾಜದಲ್ಲಿ ತಾಂಡವವಾಡುತ್ತಿರುವ ದ್ವಂದ್ವ ಮೌಲ್ಯಾಚರಣೆಗಳಿಗೆ ಸಾಕ್ಷಿಯಾಗಿದೆ.

ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಯನ್ನು ಮಾಡುವುದು ಅವರು ಕೆಲಸ ಮಾಡುವ ಸಂಸ್ಥೆಗಳ ಜವಾಬ್ದಾರಿ ಎಂದು ನೀಡಿದ ತೀರ್ಪು ವಿಶಾಖಾ ಮಾರ್ಗದರ್ಶಕ ಸೂಚಿಗಳೆಂದು ಅಸ್ತಿತ್ವಕ್ಕೆ ಬಂದದ್ದು1997ರಲ್ಲಿ. ಅದು ಕಾಯಿದೆಯ ರೂಪ ತಳೆದದ್ದು 2013ರಲ್ಲಿ, ಎಂದರೆ ಘಟನೆ ನಡೆದ ಎರಡು ದಶಕಗಳ ನಂತರ. ಆದರೆ ದೇಶದಲ್ಲಿ ಪ್ರಪ್ರಥಮ ಬಾರಿಗೆ ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಇಟ್ಟ ಮೊದಲ ಹೆಜ್ಜೆ ಇದಾಯಿತು. ಯಾವುದೇ ಬೆಂಬಲ ದೊರೆಯದಿದ್ದರೂ ಧೃತಿಗೆಡದೆ ತನ್ನ ಹೋರಾಟವನ್ನು ಇಂದಿಗೂ ಮುಂದುವರೆಸಿರುವ ಭಾವರಿ ದೇವಿ ಇಟ್ಟ ದಿಟ್ಟ ಹೆಜ್ಜೆ ಇಂಥ ಕ್ರಾಂತಿಕಾರಿ ಕಾಯಿದೆಗೆ ಮುನ್ನುಡಿ ಬರೆದದ್ದು ಮಹಿಳಾ ಹೋರಾಟಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ಈ ಕಾಯಿದೆಯ ಸ್ವರೂಪವಾದರೂ ಏನು? ಉದ್ಯೋಗ ಸ್ಥಳದಲ್ಲಿ ಮಹಿಳೆಯರು ಎದುರಿಸುವ ಲೈಂಗಿಕ ಕಿರುಕುಳ(ಸಂರಕ್ಷಣೆ, ತಡೆ ಹಾಗೂ ಪರಿಹಾರ) ಕಾಯಿದೆ, 2013 ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರು ಎದುರಿಸುವ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ಲೈಂಗಿಕ ಕಿರುಕುಳ ಯಾವ–ಯಾವ ಬಗೆಯ ಅನಪೇಕ್ಷಿತ–ಅಸ್ವಾಗತಾರ್ಹ ನಡೆವಳಿಕೆಗಳನ್ನು ಒಳಗೊಂಡಿದೆ ಎಂಬುದನ್ನು ಬಹುಸ್ಪಷ್ಟವಾಗಿ ಗುರುತಿಸಿದೆ. ಅವುಗಳೆಂದರೆ: 1. ಲೈಂಗಿಕ ಸಂಪರ್ಕ ಮಾಡುವುದು ಅಥವಾ ಅದಕ್ಕೆ ನೀಡುವ ಆಹ್ವಾನ 2. ಲೈಂಗಿಕ ಸಂಪರ್ಕ ಬೆಳೆಸಲು ಇಡುವ ಬೇಡಿಕೆ ಅಥವಾ ಕೋರಿಕೆ 3. ಲೈಂಗಿಕ ಸ್ವರೂಪದ ಹೇಳಿಕೆಗಳು, ಮಾತುಗಳು ಅಥವಾ ಟೀಕೆಗಳು 4. ಅಶ್ಲೀಲ ಬರಹಗಳು ಅಥವಾ ಚಿತ್ರಗಳನ್ನು ತೋರಿಸುವುದು ಮತ್ತು 5. ಯಾವುದೇ ಬಗೆಯ ಸ್ವಾಗತವಲ್ಲದ ದೈಹಿಕ, ಶಾಬ್ದಿಕ ಅಥವಾ ಅಶಾಬ್ದಿಕ ನಡತೆ. ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಎನ್ನುವುದನ್ನು ಕಾಯಿದೆ ಕೇವಲ ದೈಹಿಕ ಸಂಪರ್ಕಕ್ಕೆ ಸೀಮಿತಗೊಳಿಸಿಲ್ಲ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಹೆಣ್ಣಿನ ಆತ್ಮ ಗೌರವಕ್ಕೆ ಧಕ್ಕೆಯುಂಟು ಮಾಡಲು ಆಕೆಗೆ ಮುಜುಗರವಾಗುವಂತಹ ಭಾಷೆಯನ್ನು ಬಳಸಬಹುದು ಅಥವಾ ಮರ್ಯಾದೆಯ ಎಲ್ಲೆಯನ್ನು ಮೀರಿ ಅಶ್ಲೀಲ ದೃಶ್ಯಗಳನ್ನು ಅಥವಾ ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಕಳುಹಿಸಬಹುದು. ಈ ಪ್ರವೃತ್ತಿಯಂತೂ ಇಂದು ವ್ಯಾಪಕವಾಗಿ ಹರಡುತ್ತಿದೆ. ಇದನ್ನೆಲ್ಲ ಮನಗಂಡೇ ಲೈಂಗಿಕ ಕಿರುಕುಳ ಎನ್ನುವ ಪದದ ಅರ್ಥವನ್ನು ಮಹಿಳೆಯರ ಗೌರವಕ್ಕೆ ಅಡ್ಡಿ ಬರುವಂಥ ಎಲ್ಲ ನಡವಳಿಕೆಗಳನ್ನೂ ಈ ಕಾಯಿದೆಯ ವ್ಯಾಪ್ತಿಗೆ ತರಲಾಗಿದೆ.

ಉದ್ಯೋಗ ಸ್ಥಳ ಎಂದರೆ ಕೇವಲ ಕಚೇರಿಗಳು ಅಥವಾ ಔಪಚಾರಿಕ ಸೇವೆಗಳು ಎಂಬ ಭಾವನೆಯಿದೆ. ಆದರೆ ಈ ಕಾಯಿದೆ ಅದಕ್ಕೂ ಒಂದು ವಿಶಾಲವಾದ ಅರ್ಥವನ್ನು ನೀಡಿದೆ. ಎಲ್ಲ ಮಹಿಳೆಯರೂ ಔಪಚಾರಿಕ ಕ್ಷೇತ್ರದಲ್ಲೇ ಕೆಲಸ ಮಾಡಲು ಸಾಧ್ಯವೇ? ನಾವು ಮನೆಯಲ್ಲೇ ಕೆಲಸ ಮಾಡಲಿ, ನಮ್ಮ ಕೃಷಿ ಭೂಮಿಯಲ್ಲೇ ದುಡಿಮೆ ಮಾಡಲಿ ಅಥವಾ ಇತರರ ಮನೆಯಲ್ಲೇ ಕೆಲಸ ಮಾಡಲಿ ಅವೆಲ್ಲ ಕೆಲಸಗಳೇ. ಏಕೆಂದರೆ ನಾವು ದುಡಿಯುತ್ತಿರುವುದು ನಮ್ಮ ಹಾಗೂ ನಮ್ಮ ಕುಟುಂಬಗಳ ಜೀವನ ನಿರ್ವಹಣೆಗಾಗಿ. ಅದೇ ನಮ್ಮ ಉದ್ಯೋಗ ಸ್ಥಳ, ಆದ್ದರಿಂದ ನಮಗೆ ಸುರಕ್ಷಿತ ಪರಿಸರವನ್ನು ಒದಗಿಸುವುದು ಕಾನೂನಿನ ಜವಾಬ್ದಾರಿ ಎಂಬ ವಾದಕ್ಕೆ ಮನ್ನಣೆಯನ್ನು ನೀಡಿ ಈ ಕಾಯಿದೆ ಖಾಸಗಿ, ಸರ್ಕಾರಿ ಮತ್ತು ವಾಸಸ್ಥಾನಗಳು, ಗೃಹಾಧಾರಿತ ಆರ್ಥಿಕ ಚಟುವಟಿಕೆಗಳು ಹಾಗೂ ಮಹಿಳೆಯರು ಕೆಲಸದ ಮೇಲೆ ಹೋಗುವ ಯಾವುದೇ ಸ್ಥಳ–ಇವುಗಳೆಲ್ಲವನ್ನೂ ಈ ಕಾಯಿದೆ ವ್ಯಾಪ್ತಿಗೆ ಸೇರಿಸಲಾಗಿದೆ. ಹತ್ತು ಮಹಿಳಾ ಉದ್ಯೋಗಿಗಳಿದ್ದರೆ ಸಾಕು ಪ್ರತಿ ಸಂಸ್ಥೆಯೂ ಆಂತರಿಕ ದೂರು ಸಮಿತಿಯನ್ನು ಹೊಂದಿರಬೇಕು.

ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಘನತೆಯನ್ನು ಕಾಪಾಡಲು ಬಿಗಿ ಕಾಯಿದೆಯೇನೋ ಇದೆ. ಆದರೆ ಲಭ್ಯ ಮಾಹಿತಿಯ ಪ್ರಕಾರ, ದೌರ್ಜನ್ಯವನ್ನು ಎದುರಿಸುವವರಲ್ಲಿ ಶೇಕಡಾ 76ರಷ್ಟು ಮಹಿಳೆಯರು ತಮ್ಮ ಉದ್ಯೋಗ ಸ್ಥಳಗಳಲ್ಲಿ ಮೌಖಿಕ ದೌರ್ಜನ್ಯವನ್ನು ಎದುರಿಸುತ್ತಾರೆ. ದೈಹಿಕ ದೌರ್ಜನ್ಯ ಮತ್ತು ದೃಷ್ಟಿ ದೌರ್ಜನ್ಯಗಳನ್ನು ಎದುರಿಸುವ ಮಹಿಳೆಯರು ಅನುಕ್ರಮವಾಗಿ ಶೇಕಡಾ 44 ಮತ್ತು 7ರಷ್ಟು ಇದ್ದಾರೆ. ಬೆಂಗಳೂರು ನಗರದಲ್ಲಿ ಶೇಕಡಾ 51ರಷ್ಟು ಮಹಿಳೆಯರು ತಮ್ಮ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯವನ್ನು ಎದುರಿಸುತ್ತಾರೆ ಹಾಗೂ ಒಟ್ಟಾರೆ, ಶೇಕಡಾ 40ರಷ್ಟು ಉದ್ಯೋಗಿ ಮಹಿಳೆಯರು ದಿನ–ನಿತ್ಯ ಯಾವುದಾದರೂ ಒಂದು ಬಗೆಯ ದೌರ್ಜನ್ಯಕ್ಕೆ ಒಳಗಾಗುತ್ತಾರೆ.

ಈ ಕಾಯಿದೆಯೇನೋ ಮಹಿಳೆಯರ ವೃತ್ತಿ ಬದುಕಿನ ಘನತೆಯನ್ನು ಕಾಪಾಡಲು ಬದ್ಧವಾಗಿದೆ. ಆದರೆ ಅದರ ಯಶಸ್ಸು ನಿಂತಿರುವುದು ಈ ಕಾಯಿದೆ ಬಗ್ಗೆ ಎಷ್ಟು ಸಂಖ್ಯೆಯ ಉದ್ಯೋಗಿಗಳಿಗೆ ಅರಿವಿದೆ, ಎಷ್ಟು ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಮತ್ತು ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಸಾಬೀತಾದಾಗ ಎಷ್ಟು ಸಂಸ್ಥೆಗಳು ಅದಕ್ಕೆ ಕಾರಣರಾದವರ ಮೇಲೆ ಕ್ರಮ ಜರುಗಿಸುತ್ತವೆ ಎಂಬುದರ ಮೇಲೆ. ನಿರಂತರವಾಗಿ ಈ ಕಾಯಿದೆಯನ್ನು ಕುರಿತ ಅರಿವನ್ನು ಮೂಡಿಸುವುದು ಹಾಗೂ ಅಗತ್ಯ ಬಿದ್ದಾಗ ಅದನ್ನು ಧೈರ್ಯವಾಗಿ ಬಳಸಿಕೊಳ್ಳಲು ಪೂರಕ ಪರಿಸರವನ್ನು ಸೃಷ್ಟಿಸುವುದು –ಈ ಎರಡು ಕೆಲಸಗಳು ಎಲ್ಲ ಉದ್ಯೋಗ ಸಂಸ್ಥೆಗಳಲ್ಲಿ ನಡೆಯಬೇಕು.

ಡಿ.8ರಿಂದ 15ರವರೆಗೆ ಬಹುರೂಪಿ ರಾಷ್ಟ್ರೀಯ ರಂಗೋತ್ಸವ

ಜೈಪುರ ಉತ್ಸವದಂತೆ ರಂಗೋತ್ಸವ 'ಬ್ರಾಂಡ್' ಆಗಬೇಕು



ಮೈಸೂರು, ನ.30– ಮೈಸೂರು ದಸರಾ ನಂತರ ನಡೆಯುತ್ತಿರುವ ಅತೀ ದೊಡ್ಡ ಕಾರ್ಯಕ್ರಮ ಬಹುರೂಪಿ ರಾಷ್ಟ್ರೀಯ ರಂಗೋತ್ಸವ 'ಬ್ರಾಂಡ್' ಆಗಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಹೇಳಿದರು.

ರಂಗಾಯಣ ಮೈಸೂರು ಹಾಗೂ ಜಿಲ್ಲಾಡಳಿತದ ಸಹಯೋಗದೊಂದಿಗೆ ನಡೆದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಷ್ಟ್ರ ಮಟ್ಟದಲ್ಲಿ ನಡೆಯುವ ಜೈಪುರಿ ಸಾಹಿತ್ಯ ಉತ್ಸವದಂತೆ 22ನೇ ಬಹುರೂಪಿ ರಾಷ್ಟ್ರೀಯ ರಂಗೋತ್ಸವ ರಾಷ್ಟ್ರಮಟ್ಟದಲ್ಲಿ ಒಂದು ರೀತಿಯ ಬ್ರಾಂಡ್ ಕಾರ್ಯಕ್ರಮವಾಗಬೇಕು. ಈ ಕಾರ್ಯಕ್ರಮಕ್ಕೆ ನಾಡಿನ ಎಲ್ಲೆಡೆಯಿಂದ ಪ್ರತಿಷ್ಠಿತರು ಆಗಮಿಸುತ್ತಿದ್ದು, ಅದರೊಂದಿಗೆ ಬರುವ ವಿವಿಧ ರಾಜ್ಯಗಳ ಕಲಾವಿದರನ್ನು, ಪ್ರೇಕ್ಷಕರನ್ನು ಚೆನ್ನಾಗಿ ಉಪಚರಿಸುವ ಮೂಲಕ ಮೈಸೂರಿನ ಘನತೆಯನ್ನು ಹೆಚ್ಚಿಸಬೇಕು ಎಂದರು. ರಂಗೋತ್ಸವದಲ್ಲಿ ಯಾವುದೇ ವಿವಾದಾತ್ಮಕ ಅಥವಾ ನಿಷೇಧಿತ ನಾಟಕಗಳ ಪ್ರದರ್ಶನವಾಗಬಾರದು, ಸರ್ಕಾರ ಅನುಮೋದಿಸಿರುವ ನಾಟಕಗಳ ಪ್ರದರ್ಶನ ನಡೆಯಲಿ, ಒಟ್ಟಾರೆ ರಂಗೋತ್ಸವ ನೆನಪಿನಲ್ಲುಳಿಯುವಂತಹ ಕಾರ್ಯಕ್ರಮವಾಗಬೇಕು. ಅತಿಥಿಗಳು ಉಳಿದುಕೊಳ್ಳುವ ವಸತಿ ವ್ಯವಸ್ಥೆ ಬಗೆಗೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ, ಅವರುಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದರು.

ಕಾರ್ಯಕ್ರಮದ ಯಶಸ್ಸಿನಲ್ಲಿ ಶ್ರಮಿಸುವ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಯಾವುದೇ ಲೋಪವಿಲ್ಲದಂತೆ ನಿರ್ವಹಿಸಬೇಕು, ಯಾವುದೇ ರೀತಿಯ ಅವ್ಯವಸ್ಥೆ, ಅವಘಡಗಳಾಗದಂತೆ ನೋಡಿಕೊಳ್ಳುವ ಮೂಲಕ ಸಾಂಸ್ಕೃತಿಕ ರಾಜಧಾನಿ ಎಂದು ಹೆಸರು ಹೊಂದಿರುವ ಮೈಸೂರಿನಲ್ಲಿ ಜರುಗುವ ರಂಗೋತ್ಸವ ಇಡೀ ದೇಶದ ಗಮನ ಸೆಳೆಯಬೇಕು, ಪ್ರತಿ ವರ್ಷದಿಂದ ವರ್ಷಕ್ಕೆ ರಂಗೋತ್ಸವವನ್ನು ಉತ್ತಮಪಡಿಸುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಮಾಹಿತಿ ನೀಡಿ, ರಂಗೋತ್ಸವವು 8 ದಿನಗಳ ಕಾಲ ನಡೆಯಲಿದ್ದು, ರಂಗಾಯಣದ 5 ಪ್ರಮುಖ ಸ್ಥಳಗಳಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿವೆ, ಬೆಳಿಗ್ಗೆ ಹತ್ತರಿಂದ ರಾತ್ರಿ ಹತ್ತರವರೆಗೆ ಕಾರ್ಯಕ್ರಮಗಳು ನಡೆಯಲಿದ್ದು ಒಟ್ಟು 21 ನಾಟಕಗಳು ಪ್ರದರ್ಶನಗೊಳ್ಳಲಿವೆ. ಭಾರತೀಯತೆ ಎಂಬುದು ಈ ಬಾರಿಯ ವಿಷಯವಾಗಿದ್ದು, ಭಾರತೀಯತೆ ಈ ವಿಷಯದಲ್ಲಿ ವಿಚಾರ ಸಂಕಿರಣ ಕೂಡ ನಡೆಯಲಿದೆ. ಇದರೊಂದಿಗೆ ವಸ್ತು ಪ್ರದರ್ಶನ, ಜಾನಪದ ಕಾರ್ಯಕ್ರಮ ನಡೆಯಲಿವೆ. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರು ಆಗಮಿಸುತಿದ್ದು ಕಲಾಮಂದಿರದ ಆಜುಬಾಜು ಟ್ರಾಫಿಕ್ ಸಮಸ್ಯೆಯಾಗದಂತೆ ಸಾರಿಗೆ ಇಲಾಖೆಯವರು ನೋಡಿಕೊಳ್ಳುವಂತೆ ಹಾಗೂ ನಗರಪಾಲಿಕೆಯವರು ರಂಗಾಯಣದ ಆವರಣದ ಸ್ವಚ್ಛತೆ ನೋಡಿಕೊಳ್ಳಲು ಹೊರರಾಜ್ಯಗಳಿಂದ ಆಗಮಿಸುವ ಕಲಾವಿದರು ಆರ್‌ಟಿಪಿಸಿಆರ್ ಪರೀಕ್ಷೆಗಳನ್ನು ಆರೋಗ್ಯ ಇಲಾಖೆಯವರು ನೋಡಿಕೊಳ್ಳಲು ವಿನಂತಿಸಿದರು. ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಮಲ್ಲಿಕಾರ್ಜುನಸ್ವಾಮಿ, ನಿರ್ಮಲಾ ಮಠಪತಿ, ಡಿ.ಸಿ.ಪಿ. ಗೀತಾ ಪ್ರಸನ್ನ, ಪ್ರವಾಸೋದ್ಯಮ ಇಲಾಖೆ ಅಧಿಕಾರಿ ರಾಜೇಶ್ ಸೇರಿದಂತೆ ಹಲವು ಅಧಿಕಾರಿಗಳು ಉಪಸ್ಥಿತರಿದ್ದರು.

ಪೌರಕಾರ್ಮಿಕರಿಗೆ ಪ್ರತಿ ತಿಂಗಳು ವೇತನ ರಶೀದಿ ನೀಡಲೇ ಬೇಕು

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ

ಮೈಸೂರು, ನ.30– ನಗರದ ಸ್ವಚ್ಛತೆಯ ಸೇನಾನಿಗಳಾದ ಪೌರಕಾರ್ಮಿಕರ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸುವ ಮೂಲಕ ಅವರು ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮ ಹೊಣೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಪೌರಕಾರ್ಮಿಕರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ನಿರಂತರವಾಗಿ ಪೌರಕಾರ್ಮಿಕರ ಆರೋಗ್ಯ ತಪಾಸಣೆ ಆಗಬೇಕು, ಇದಕ್ಕಾಗಿ ಕೆಲ ಆಸ್ಪತ್ರೆಗಳನ್ನು ಗುರುತಿಸಿ ಚಿಕಿತ್ಸೆ ಕೊಡಿಸಬೇಕು. ಕೆಲ ಕಾರ್ಮಿಕರು ಧೂಮಪಾನ, ಮದ್ಯಪಾನದಂತಹ ಚಟಗಳಿಗೆ ಒಳಗಾಗಿದ್ದಾರೆ. ಅಂತಹವರ ಚಟಗಳನ್ನು ಬಿಡಿಸುವ ಕೆಲ ಕೇಂದ್ರಗಳಿದ್ದು ಅಂತಹ ಕೇಂದ್ರಗಳಿಗೆ ಸೇರಿಸುವ ಮೂಲಕ ಆರೋಗ್ಯವಂತರನ್ನಾಗಿ ಮಾಡಲು ಸ್ಥಳೀಯ ಸಂಸ್ಥೆಗಳು ಹಾಗೂ ಕಾರ್ಮಿಕ ಸಂಘಗಳು ಪ್ರಯತ್ನಿಸಬೇಕು ಎಂದರು.

ಈ ಕಾರ್ಮಿಕರಿಗೆ ಪ್ರತಿ ತಿಂಗಳ ವೇತನ ರಶೀದಿ ನೀಡಬೇಕು ಹಾಗೂ ಆ ರಶೀದಿ ಕನ್ನಡದಲ್ಲಿರಬೇಕು, ಪ್ರತಿ ತಿಂಗಳು ಅವರುಗಳ ಇಎಸ್‌ಐ, ಪಿ.ಎಫ್. ಕಡಿತಗೊಂಡಿರುವ ಮಾಹಿತಿಯನ್ನು ಸಂಬಂಧಿಸಿದ ಕಾರ್ಮಿಕರಿಗೆ ಮೆಸೇಜ್ ಕಳುಹಿಸುವ ಮೂಲಕ ತಲುಪುವುದನ್ನು ಕಾರ್ಪೊರೇಶನ್ ಹಾಗೂ ಸ್ಥಳೀಯ ಸಂಸ್ಥೆಗಳ ಈ ವಿಭಾಗಗಳನ್ನು ನೋಡಿಕೊಳ್ಳುವ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಬೇಕು, ಕೆಲವರ ಡಾಕ್ಯುಮೆಂಟ್ ಸರಿಯಾಗಿಲ್ಲ ಎಂದು ಕೆಲವರಿಗೆ ವೇತನ ನೀಡಿಲ್ಲದಿರುವ ದೂರುಗಳಿವೆ. ಅಧಿಕಾರಿಗಳೇ ಅವರ ಡಾಕ್ಯುಮೆಂಟ್‌ಗಳನ್ನು ಸರಿಪಡಿಸಿಕೊಡಬೇಕು ಎಂದರು.



ಬೇಡಿಕೆಗಳು: ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮ 2022ರ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿ ರದ್ದು ಮಾಡಬೇಕು. 700 ಜನಸಂಖ್ಯೆಗೆ ಅನುಗುಣವಾಗಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳ ನೇಮಕಾತಿಗೆ ಪ್ರಾಧಿಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಪಾಲಿಕೆಯಲ್ಲಿ 562 ಕಾಯಂ ನೇರ ಪಾವತಿಯಲ್ಲಿ 839 ಮತ್ತು 734 ಹೆಚ್ಚುವರಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಪಾಲಿಕೆ ವ್ಯಾಪ್ತಿಯ ಜನಸಂಖ್ಯೆ ಆಧಾರದ ಮೇಲೆ ಸುಮಾರು 10,30,000 ಜನಸಂಖ್ಯೆ ಇದ್ದು ಪ್ರವಾಸಿಗರು ದಿನೇದಿನೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು ಪೌರಕಾರ್ಮಿಕರ ಸೇವೆ ಅಗತ್ಯವಿರುತ್ತದೆ. ಹಾಲಿ ಪೌರಕಾರ್ಮಿಕರಿಗೆ ಉದ್ಯೋಗ ಭದ್ರತೆಯಾದ ನಿವೃತ್ತಿ ಅಥವಾ ಮೃತರಾದರೆ ಅನುಕಂಪದ ಕೆಲಸ ಮತ್ತು ಉಪದಾನ ನೀಡುವಂತೆ ಮಾಡಬೇಕು. ಪೌರಕಾರ್ಮಿಕರ ಹಾಜರಾತಿ ಸಂಬಂಧ ತಂತ್ರಜ್ಞಾನ ಬಳಸಿಕೊಂಡು smart phone ಮೂಲಕ face recognization system ವ್ಯವಸ್ಥೆಯನ್ನು ರದ್ದು ಮಾಡಬೇಕು. ಪಾಲಿಕೆಯಲ್ಲಿ ಕ್ಷಿಪ್ರ ಕಾರ್ಯಪಡೆ 3 ವಾಹನಗಳಲ್ಲಿ ಕೆಲಸ ಮಾಡುತ್ತಿರುವ 3 ಜನ ಡ್ರೈವರ್‌ಗಳು 12 ಜನ ನೌಕರರಿಗೆ ಕನಿಷ್ಠ ವೇತನ ಹಾಗೂ ಪಿ.ಎಫ್., ಇ.ಎಸ್.ಐ ಮತ್ತು ಬ್ಯಾಂಕಿನ ಮೂಲಕ ವೇತನ ಸೌಲಭ್ಯಗಳನ್ನು ನೀಡಬೇಕು. ಮೈಸೂರು ಜಿಲ್ಲೆಯ 13 ULBಗಳಲ್ಲಿ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ ಮಂಜೂರಾಗಿರುವ ಸುಮಾರು 622 ಹುದ್ದೆಗಳ ಅವಶ್ಯಕತೆ ಇದ್ದು, ತಕ್ಷಣ ಬಾಕಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು. ಹೊಸ ULBಗಳಾದ ಹೂಟಗಳ್ಳಿ ನಗರಸಭೆ, ಶ್ರೀರಾಂಪುರ ಪಟ್ಟಣ ಪಂಚಾಯಿತಿ, ಬೋಗಾದಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳಲ್ಲಿ ಸುಮಾರು 176 ಜನ ಪೌರಕಾರ್ಮಿಕರಿಗೂ FBAS ನಿಧಿ ಆಧರಿತ ಲೆಕ್ಕ ಪದ್ಧತಿ ವೇತನ ಅಳವಡಿಸಬೇಕು.

ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್. ರಾಜು ಮಾತನಾಡಿ, ನಗರಾಭಿವೃದ್ಧಿಗೆ ಸೇರಿದ ಮೈಸೂರು ತಾಲೂಕು ಕಸಬಾ ಹೋಬಳಿ ಮಳಲವಾಡಿ ಸರ್ವೆ ನಂಬರ್‌ನಲ್ಲಿ 1 ಎಕರೆ 20 ಗುಂಟೆ ಜಾಗದಲ್ಲಿ ನಿವೇಶನ ನೀಡುವುದಾಗಿ ಹೇಳಿದ್ದರು, ಆದರೆ ಏಕಾಏಕಿ ಆ ಸ್ಥಳವನ್ನು ಬದಲಾವಣೆ ಮಾಡಿ ನಗರದ ಹೊರವಲಯದಲ್ಲಿ ನಿವೇಶನ ನೀಡುವುದಾಗಿ ಹೇಳುತ್ತಿದ್ದಾರೆ. ಅಷ್ಟು ದೂರದಿಂದ ಬೆಳಗ್ಗೆ ಬೇಗ ಬಂದು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ತಾವೇ ಸಮಯಕ್ಕೆ ಸರಿಯಾಗಿ ಬರದಿದ್ದರೆ ಗೈರುಹಾಜರಿ ಹಾಕುತ್ತೀರಿ ಎಂದರು. ಇದಕ್ಕೆ ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ ಸಮಯಕ್ಕೆ ಬರುವುದು ನಮ್ಮಗಳ ಜವಾಬ್ದಾರಿ ಆಗಬೇಕೆಂದರು.

ಮೂರ್ನಾಲ್ಕು ದಿನಗಳ ಹಿಂದೆ ಅಧಿಕಾರಿಗಳ ಕಿರುಕುಳದಿಂದ ಪೌರಕಾರ್ಮಿಕರೊಬ್ಬರು ಮೃತಪಟ್ಟಿದ್ದು ಅಧಿಕಾರಿಗಳು ಒತ್ತಡ ಹಾಕಿದ್ದರಿಂದಲೇ ಅವರ ಸಾವಾಗಿರುವುದು. ಈ ಕೂಡಲೇ ಎಸ್.ಸಿ. ಎಸ್.ಟಿ ದೌರ್ಜನ್ಯದಡಿ ಮೊಕದ್ದಮೆ ದಾಖಲಿಸಿ ಸಂಬಂಧಿಸಿದವರ ಮೇಲೆ 302 ಅಡಿ ಪ್ರಕರಣ ದಾಖಲಿಸಲು ಒತ್ತಾಯಿಸಿದರು. ಹಾಗಾಗುವುದರಿಂದ ದೌರ್ಜನ್ಯ ಕಾಯ್ದೆಯಡಿ ಪರಿಹಾರ ಸಿಗುತ್ತದೆ. ಅವರ ಕುಟುಂಬಸ್ಥರೊಬ್ಬರಿಗೆ ಸರ್ಕಾರಿ ನೌಕರಿ ಸಿಗುವಂತೆ ನೋಡಿಕೊಳ್ಳಬೇಕೆಂದು ಮುಖಂಡರು ಆಗ್ರಹಿಸಿದರು ಮತ್ತು ಅಧಿಕಾರಿಗಳು ನೌಕರರನ್ನು ಚೆನ್ನಾಗಿ ನೋಡಿಕೊಂಡರೆ ಯಾವುದೇ ಪ್ರತಿಭಟನೆಗಳಾಗುವುದಿಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಲಕ್ಷ್ಮಿಕಾಂತ್ ರೆಡ್ಡಿ, ಉಪ ಆಯುಕ್ತರಾದ ರೂಪ, ರಾಜ್ಯ ಪೌರಕಾರ್ಮಿಕರ ಸಂಘದ ಕಾರ್ಯಾಧ್ಯಕ್ಷ ಮಂಚಯ್ಯ, ರಾಜ್ಯ ಪೌರಕಾರ್ಮಿಕರ ಸಂಘದ ಕಾರ್ಯದರ್ಶಿ ದಿನೇಶ್‌ಕುಮಾರ್, ರಾಜ್ಯ ಉಪಾಧ್ಯಕ್ಷ ಜಿ.ಎ.ಎನ್. ಚಾಮ ಸೇರಿದಂತೆ ಸ್ಥಳೀಯ ಮುಖ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಬೇಕಾಗಿದ್ದಾರೆ

ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯೋಮಿತಿ : 40 ರಿಂದ 50, ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ. ಪಾಸ್ ಅಥವಾ ಫೇಲ್, ಸಂಪರ್ಕಿಸಬೇಕಾದ ಸಮಯ 10 am to 6 pm ಸೋಮವಾರದಿಂದ ಶುಕ್ರವಾರದವರೆಗೆ.

0821-4852002

---

2 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ

365 ದಿನ ಕಾವೇರಿ ನೀರಿನ ಹರಿವು ಇರುತ್ತದೆ. ಸ್ಥಳ: ಹರವು ಗ್ರಾಮ, ಚನ್ನರಾಯ ಹೋಬಳಿ, ಪಾಂಡವಪುರ ತಾ., ಮಂಡ್ಯ ಜಿಲ್ಲೆ, ಪಾಂಡವಪುರ ರೈಲ್ವೆ ನಿಲ್ದಾಣದಿಂದ 5 ಕಿ.ಮೀ ದೂರದಲ್ಲಿದೆ. ದರ ಎಕರೆಗೆ 39 ಲಕ್ಷ, ಆಸಕ್ತ ಗ್ರಾಹಕರು ಮಾತ್ರ ಸಂಪರ್ಕಿಸಿ: ವಸಂತ್, ಅಶೋಕ್ ಕುಮಾರ್.

9741035441　9900119156 / 9448172525

ಕೆಲಸಕ್ಕೆ ಬೇಕಾಗಿದ್ದಾರೆ

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.,

#2921/ಎ, ಸರಸ್ವತಿಪುರಂ, ಮೈಸೂರು. 26 ವರ್ಷದ ಒಳಗಿನ ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. Tele Caller (with or without Experience) Branch Manager, Marketing Manager (with experience) ಗಳು ನಂಜನಗೂಡು, ಟಿ.ನರಸೀಪುರ, ಹುಣಸೂರು, ಚಾಮರಾಜನಗರ ಸ್ಥಳಗಳಲ್ಲಿ ಬೇಕಾಗಿದ್ದಾರೆ. ಆಸಕ್ತ ಇದ್ದಲ್ಲಿ ಸಂಪರ್ಕಿಸಿ.

8088647887

ಜಮೀನು ಮಾರಾಟಕ್ಕಿದೆ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮತ್ತು ಹಂಚ್ಯಾ ಹೋಬಳಿಯಲ್ಲಿ ತೋಟಗಳು ಹಾಗೂ ಜಮೀನುಗಳು ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ.

9945661696　8618848886

ವೃದ್ಧಾಶ್ರಮ

ಹಿರಿಯ ಜೀವಗಳ, ಹಾಸಿಗೆ ಹಿಡಿದ ವೃದ್ಧರು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಯಲಾಗದ ಮರೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇದ್ದೆಯುಳ್ಳವರು ಸಂಪರ್ಕಿಸಿ

9110455297

ಶ್ರೀ ಗೌರಿಶಂಕರ ಟ್ರಾವೆಲ್ಸ್

10–12–22 (4 ದಿನ) ಶಿರಡಿ, ಪಾಂಚ್, ತ್ರ್ಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ ಇತ್ಯಾದಿ 18–12–22 (1 ದಿನ) : ಕೊಡಚಾದ್ರಿ, ಕೊಲ್ಲೂರು, ಘಾಟಿ ಸುಬ್ರಮಣ್ಯ, ಚಿಕ್ಕ ತಿರುಪತಿ 24–12–22 (6 ದಿನ) : ಗುರುವಾಯೂರು, ಮೂಕಾಂಬ್ ತ್ರಿಶೂರು, ಕೊಚ್ಚಿನ್ ಇತ್ಯಾದಿ ವಿಮಾನ / ಬಸ್ / ರೈಲು / ಟ್ರಾವೆ

9620002114

GOLD COMPANY

ಗಿರವಿ ಚಿನ್ನಾಭರಣ ಖರೀದಿ

ನಿಮ್ಮ ಚಿನ್ನಾಭರಣಕ್ಕೆ ಹಣ ಬೇಕೆ ನೀವು ಗಿರವಿ ಇಟ್ಟ ಚಿನ್ನಾಭರಣವನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.

9964522225

ಅಂಗಡಿಗಳು ಮತ್ತು ರೂಂಗಳು ಬಾಡಿಗೆಗೆ ಇವೆ

ಚರ್ಚ್ ರೋಡ್, 2ನೇ ಹಂತ, ಗಾಯಿತ್ರಿಪುರಂ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ, ಮೈಸೂರು. ಸಂಪರ್ಕಿಸಿ:

7483499891

ಸುವರ್ಣ ಯಾತ್ರ

7 ದಿನಗಳ ಕಾಶಿ ಪ್ರವಾಸ 22/12/22
4 ದಿನಗಳ ಓಂಕಾರೇಶ್ವರ ಹಾಗೂ ಉಜ್ಜಯಿನಿ ಪ್ರವಾಸ 06/01/23
8 ದಿನಗಳ ಗುಜರಾತ್ ಪ್ರವಾಸ 25/01/23
9 ದಿನಗಳ ರಾಜಸ್ಥಾನ ಪ್ರವಾಸ 21/02/23

9019462508　9008381022

HOME APPLIANCES SERVICE

ಫ್ರಿಡ್ಜ್, ವಾಷಿಂಗ್ ಮಶೀನ್, ಮೈಕ್ರೋ ವೋವೆನ್, LED, LCD, AC Sales & Service

Contact: Srinivas

9379699229

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ



Vinaykrishna

9611648636

ಕಾರ್ನರ್ 2 ಸೈಟು ಮಾರಾಟಕ್ಕಿದೆ

1) ಬೈರವೇಶ್ವರ ನಗರದ ಹತ್ತಿರ,
2) ಅಂಕಮ್ಮನವರ ದೇವಸ್ಥಾನ ಹಿಂದೆ (ಹುಣ್ಸೂರ್ ರಿಂಗ್ ಹತ್ತ)
1) 40x20 ಕಾರ್ನರ್ ಸೈಟ್
2) 40x50 ಕಾರ್ನರ್ ಸೈಟ್
ಕೂಡಲೇ ಸಂಪರ್ಕಿಸಿ:

9611135796

ALI BROTHERS CARD CITY

Gold Covering Jewellery, Guarantee (6 Months) Available. 35/70 Devaraj Market Building, Sayyaji Rao Road, Mysore - 01

0821-4260511

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

7406375196, 9880548596

FOR RENT

1 or 2 BHK House at Vijayanagar 4th Stage, Sadhanalayout, Near SVEI School / Rastrothana School. Contact:

8762059656 / 9980355558

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಪ್ರಖ್ಯಾತ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 1 ಲಿಂದ SSLC, PUC, ITI, ಯಾವುದೇ ಡಿಗ್ರಿ ಯವರಿಗೂ (ಅಥವಾ) (ವಿದ್ಯಾರ್ಹತೆ ಇಲ್ಲ) ಪೇಜ ಅರ್ಹತೆಗೆ ತಕ್ಕಂತೆ ಇರುತ್ತದೆ. ವಯೋಮಿತಿ 18 ರಿಂದ 45 ವರ್ಷದವರೆಗೆ ಇರುತ್ತದೆ. ESI, PF (ಸೌಲಭ್ಯವಿರುತ್ತದೆ) (ಊಟ, ವಸತಿ ಸೌಲಭ್ಯವಿರುತ್ತದೆ) (ಪಾರ್ಟ್ ಟೈಮ್ ಜಾಬ್ ಇರುತ್ತದೆ) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

7795465519 / 8217498208　9164975503

ಹೋಲ್‌ಸೇಲ್ ದರದಲ್ಲಿ

ಜೀವಂತ ಕಾಟಿ ಕೋಳಿ ಕೆ.ಜಿ. ರೂ.230/– ಫ್ರೈನಿಂಗ್ 1 ಕೋಳಿಗೆ ರೂ.20/– ಗೌಡ್ರು ನಾಟಿಕೋಳಿ ಅಂಗಡಿ



ನಂ.5/1, ಎಂ.ಆರ್. ಮೊಹಲ್ಲಾ, ಉದಯಗಿರಿ ಮುಖ್ಯ ರಸ್ತೆ, ದೊಡ್ಡಮ್ಮತಾಯಿ ಕಲ್ಯಾಣ ಮಂಟಪ ಹತ್ರ, ಬಿಜ್ನಾಸ್, ಗಣೇಶ್‌ನಗರ, ಮೈಸೂರು. ಸಮಯ: ಬೆಳಗ್ಗೆ 6 ರಿಂದ ರಾತ್ರಿ 9ರವರೆಗೆ

9448048576 / 9632378020

MAKE - UP STUDIO BY BHADRA

* Bridal Make Up Course
* Basic to Advance Level in One Month Free Port Folio Shoot & Certification
* Marketing Ideas and Business Establishment Lifetime Support in Business
* 19th Batch Starts from 12th December 2022.
* Limited Seats Only, Individual Attention is given to all Students, To Enroll Contact :

9964398988

TV ಕೆಟ್ಟಿದೆಯೇ? LCD, LED TV

ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven

Doorstep ಸರ್ವೀಸ್ ಮಾಡಿಕೊಡಲಾಗುವುದು

ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬ್ಯಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುವುದು

ತೇಜು ಎಲೆಕ್ಟ್ರಾನಿಕ್ಸ್, ಕ್ಯಾಂಗಾರ್ ರಸ್ತೆ, ಅಗ್ರಹಾರ

9342114069

ಕೆಲಸ ಖಾಲಿ ಇದೆ

ಪ್ರತಿಷ್ಠಿತ ಕ್ಯಾಟರಿಂಗ್ ಸರ್ವೀಸ್ ಕಂಪನಿಗೆ, 1. ಮ್ಯಾನೇಜರ್ (5 ವರ್ಷ ಅನುಭವವಿರಬೇಕು) 2. ಅಡುಗೆ ಭಟ್ಟರು, (ಐದು ವರ್ಷ ಅನುಭವವಿರಬೇಕು) 3. ವಾಷಿಂಗ್ (ಮಹಿಳೆ) 4. ಸರ್ವಿಸ್ (ಹುಡುಗರು) ವೇತನ, ಊಟ ತಿಂಡಿ ವ್ಯವಸ್ಥೆ, ವಸತಿಗೃಹ ಸೌಲಭ್ಯವಿದೆ

6362178732

Dr. D.H. BAGALKOT SEXOLOGIST (Regd.)

ದೈಹಿಕ ಲೈಂಗಿಕ ಶಕ್ತಿ ತಜ್ಞರು ಡಾ.ಡಿ.ಹೆಚ್.ಬಾಗಲಕೋಟ

ಸ್ವಪ್ನ ಸ್ಖಲನ, ಸ್ವಯಂಭೋಗ, ಶೀಘ್ರಸ್ಖಲನ, ನಿಮಿರು ದೌರ್ಬಲ್ಯ, ಸಂತಾನಹೀನತೆ, ... ಮಧುಮೇಹಿಗಳ ಲೈಂಗಿಕ ದೌರ್ಬಲ್ಯಕ್ಕೆ ... ಚಿಕಿತ್ಸೆ

ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಅಕ್ಷಯ, ಧನ್ವಂತ್ರಿ ರೋಡ್

ವಿಳಾಸ: ಡಾ. ಬಾಗಲಕೋಟ್ಸ್ ಹಾಸ್ಪಿಟಲ್, ಹುಬ್ಬಳ್ಳಿ Cell:9743193428

www.drbagalkot.com

WANTED URGENTLY

Office Assistant - Female, (8 Numbers) Age - 18, 28, Qualification: 10th, 2nd PUC, or Any Degree, Salary 10,000/- to 15,000/-. Office: J&K Enterprises, Mogarahalli (Manti) K.R.S. Road, Near Bank of Baroda, Mysore.

9964942491 / 9164307146

ವಸತಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ

SITE FOR SALE

1788 Sq.ft. Nanjangud, KHB Colony, North East Corner

9880218745

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

PART TIME WORK

ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ).

Mob: 9148733213

ಪ್ರಮಾಣ ಪತ್ರ

ಎಸ್.ವಿ. ಭವ್ಯ, W/o ರಥಾ ಆರ್. ಮೈಸೂರು ಆದ 25 ವರ್ಷದ ನಾನು ನಂ. 2, ವಿವೇಕಾನಂದ ರಸ್ತೆ, ಯಾದವಗಿರಿ, ಮೈಸೂರು–570 020 ಇಲ್ಲಿ ವಾಸವಿದ್ದು, ನನ್ನ ಮದುವೆಯ ನಂತರ ನನ್ನ ಹೆಸರನ್ನು ಭವ್ಯ ರಥಾ ಎಂದು ಬದಲಾಯಿಸಿ ನೋಟರಿ ಎಂ. ಕಮಲಕರವರ ಮುಂದೆ ದಿನಾಂಕ: 17–8–2022 ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/– ಭವ್ಯ ರಥಾ

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

7676844160　6361056646

Sudarshan Saur

SOLAR WATER HEATER



ATTRACTIVE OFFER ಸೇಲ್ಸ್&ಸರ್ವೀಸ್ 10 ವರ್ಷಗಳ ಗ್ಯಾರಂಟಿ Bajaj Finserv Available

SUNZONE SOLAR SYSTEM

Vishwamanava Double Road, Kuvempunagar, Mysuru

9845175443

ಸೈಟು ಮಾರಾಟಕ್ಕಿದೆ SITE FOR SALE

30x40 ಪೂರ್ವ (East) 40x60 East Facing, 50x80 North West Corner, Saptharushi Nagara, Brahmins Layout, Mysore. Contact:

7996173613

2BHK ಹೊಸ ಮನೆ ಬಾಡಿಗೆಗೆ ಇದೆ

2nd Floor ಪೂರ್ವಕ್ಕೆ ಬಾಗಿಲು, ಕುವೆಂಪುನಗರ ಬಸ್ ಡಿಪೋ ಹತ್ತಿರ. ಸಂಪರ್ಕಿಸಿ:

8217084649　9448749157

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.

7795560970

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ

MOB: 9880583804

ಕೊಳ್ಳೇಗಾಲದ ದೊಡ್ಡ ಮಾಂತ್ರಿಕ ಅಘೋರಿಯ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೀತಿ, ಸಂತಾನ, ಶತ್ರುಕಾಟ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂದಿನ ಜನರಿಂದ ಮೋಸ ... ಪರಿಹಾರ ತಿಳಿಸಲಾಗುವುದು.

ಚಾಮುಂಡಿ ವಿಲಾಸ ಮೊಹಲ್ಲಾ ಎಟಿಎಂ ಹತ್ರ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ.) ಬಸ್ ಸ್ಟ್ಯಾಂಡ್, ಮೈಸೂರು.

ಮೇಕಪ್ ಸ್ಟುಡಿಯೋ ಬೈ ಭದ್ರಾ

* ಬ್ರೈಡಲ್ ಮೇಕಪ್ ಕಲಿಯಿರಿ ಒಂದು ತಿಂಗಳಲ್ಲಿ ಉಚಿತ ಫೋಟೋ ಫೋಲಿಯೋ ಶೂಟ್ ಮತ್ತು ಸರ್ಟಿಫಿಕೇಟ್ ಕೂಡ ದೊರೆಯುತ್ತದೆ.
* ಬಿಸಿನೆಸ್ ಮತ್ತು ಮಾರ್ಕೆಟಿಂಗ್ ಐಡಿಯಾಗಳು ಮತ್ತು ಸಹಾಯ.
* 19ನೇ ಬ್ಯಾಚ್ ಡಿಸೆಂಬರ್ 12 ರಿಂದ ಪ್ರಾರಂಭವಾಗಲಿದೆ, ಲಿಮಿಟೆಡ್ ಸೀಟ್‌ಗಳು ಮಾತ್ರ, ಕೂಡಲೇ ಕರೆ ಮಾಡಿ :

9964398988

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೋದುವಾಳ್

ಮೊ. 9731839596

ಇವರು ಕಟ್ಟೀಶ್ ದರ್ಶನದಿಂದ ... ದೇವಿ ಭಗವತಿ ಮಂತ್ರ, ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ಮಡೆಕ್ಕೆ, ಶತ್ರುಭಾಧೆ, ವ್ಯಾಪಾರ, ಆಸ್ತಿ ಕೋರ್ಟ್ ಕೇಸ್, ಸಾಲಭಾದೆ, ಆರೋಗ್ಯ, ... ಕಂಡು ಪರಿಹಾರ ... ಮನೆ ನಂ.68, ಸತ್ಯಧರ್ಮ ... ಹೋಟೆಲ್ ... ಮೈಸೂರು.

ತಕ್ಷಣ ಬೇಕಾಗಿದ್ದಾರೆ

ಕಡಕೊಳ ಮತ್ತು ಅಡಕನಹಳ್ಳಿ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಪೇಲ್/ಪಾಸ್, ಸಂಬಳ: 21,000/–, ESI & PF ಸೌಲಭ್ಯವಿರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:

9538567819　9620667819

ಮನೆ ಸಾಲ

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.,

#2921/ಎ, ಸರಸ್ವತಿಪುರಂ, ಮೈಸೂರು. ನಾವು ರಿಯಲ್ ಎಸ್ಟೇಟ್ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಲ್ಲಿ, ರಾಘವೇಂದ್ರ ನಗರ, ಕನಕಗಿರಿ, ಏಕಲವ್ಯ ನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ, Loan Amount - 5,00,000 to 20,00,000. ಸಂಪರ್ಕಿಸಿ:

8088647887

ಕಳೆದಿದೆ

ಎಸ್. ಮಹದೇವಯ್ಯ ಆದ ನಾನು ಮುದ್ದಹಳ್ಳಿ ಗ್ರಾಮ, ಬಿಳಿಗೆರೆ ಹೋಬಳಿ, ಹುಣಸೂರು ತಾ., ಮೈಸೂರು ಜಿಲ್ಲೆ, ಇಲ್ಲಿ ವಾಸವಿದ್ದು, ... ನಂ. 2 ... ದಿನಾಂಕ 3–28 ... ಸರ್ವೆ ನಂ. 1387/92–93 ದಿನಾಂಕ 28–01–1993 ... ಸಂಪರ್ಕಿಸಲು ಮನವಿ.

ನಿವೃತ್ತ ನೌಕರರಿಗೆ ಉದ್ಯೋಗ ಅವಕಾಶದ ಸೆಮಿನಾರ್

ವಿದ್ಯಾರ್ಹತೆ SSLC ಮೇಲ್ಪಟ್ಟ, ವಯಸ್ಸು 45 ವರ್ಷದಿಂದ 70 ವರ್ಷದವರೆಗೆ ... ಸಮಯ 11 ಗಂಟೆಗೆ ದಿನಾಂಕ 3–12–2022 ... Benefits: 1) Fixed salary + PF + ESI + ಇತರ ಭತ್ಯೆಗಳು ಲಭ್ಯವಿದ್ದು. Followed lunch.

9449068132, 7022034200

ಚಾಮುಂಡೇಶ್ವರಿ ಸರ್ವೀಸ್

ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9964230133

ರೈಲಿನಲ್ಲಿ ಕಾಶಿ ಯಾತ್ರೆ

20–03–2023 ರಂದ ರೈಲಿನಲ್ಲಿ 10 ದಿನಗಳ ಪ್ರವಾಸ, ಸ್ಥಳಗಳು: ಕಾಶಿ, ಸಾರನಾಥ್, ಅಯೋಧ್ಯೆ, ಅಲಹಾಬಾದ್, ಗಯಾ, ಬುದ್ಧಗಯಾ ಇತ್ಯಾದಿ. ಊಟ, ರೂಂ, ರೈಲಿನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟಿಗೆ ರೂ. 11,000. ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ ರೂ. 5000 ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವಾ ಟೂರ್ಸ್ & ಟ್ರಾವೆಲ್ಸ್, ಸುರೇಶ್, ಮೈಸೂರು

9342118682, 9449128682

WANTED

ITI - Electrician

1-2 years experience Near Mandagere Kikkeri (Power House).

ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:

Mob: 9900366446

SITE FOR SALE

30x40 Sites, Bank Loan upto 80%, Near Guru Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road

8660105902

SITE FOR SALE

40x60 Site for Sale Suvarna Layout (Martikytanahalli)

9880273834

ಬೇಕಾಗಿದ್ದಾರೆ

ಮೈಸೂರಿನ ಹೆಸರಾಂತ ಸಸ್ಯಹಾರಿ ಹೋಟೆಲ್‌ವೊಂದಕ್ಕೆ

* ದೋಸೆ ಭಟ್ಟರು – 2
* ರುಬ್ಬುವವರು – 2
* ಆಲ್‌ರೌಂಡರ್ ಭಟ್ಟರು – 1
* ಕೌಂಟರ್ ಬಾಯ್ಸ್ – 1

Mob: 9945059645

Change of Name

I, Tenzin Dadon Dorjee Jigme, residing at #2778, Pratham Shilp Apartment, Ground Floor G1, 6th Main Road, Vani Vilas Mohalla, Mysuru, Karnataka-570 002, have changed my name as Tenzin Dadon, on my own free will, in front of Notary Venkatesha Patawardhana on 30-11-2022. I hereby declare taht I shall at all times hereafter in all records, deeds and instrument in writing and in all occasions and proceedings, use and sign the said name of Tenzin Dadon.

Sd/- Tenzin Dadon

ತಿರುಮಲ ಸೆಕ್ಯೂರಿಟಿ ಸರ್ವೀಸ್ ಏಜನ್ಸಿ, ಮೈಸೂರು

ಮಾಲೀಕರು: ಚಂದ್ರೇಗೌಡ (Retd. ಎಸ್‌ಐ ಅಧಿಕಾರಿ) ಬೇಕಾಗಿದ್ದಾರೆ: ಹೌಸ್‌ಕೀಪಿಂಗ್ ಕೆಡಿ. ಸರ್ಕಲ್ ಹತ್ತಿರ, ವಿಜಯನಗರ, ಮೈಸೂರು. ಪುರುಷರು ಹಾಗೂ ಮಹಿಳೆಯರು. ಸಂಪರ್ಕಿಸಿ:

Mob: 9606808975

ಮೈತ್ರಿ ಅಸೋಸಿಯೇಟ್ಸ್

ನಮ್ಮಲ್ಲಿ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯಗಳನ್ನು ಮಾಡಿಕೊಡಲಾಗುತ್ತದೆ. ಪರ್ಸನಲ್ ಲೋನ್, ಬಿಜಿನೆಸ್ ಲೋನ್, ಆಸ್ತಿ ಮೇಲೆ ಗೃಹಸಾಲ ... ಸಾಲ ಹಾಗೂ ... ಸಾಲ ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

7353853281, 9845418798

COMMERCIAL SPACE FOR RENT

Ist Floor office tutorial any agencies and others near Mysore Palace Govardhan Complex, Opp. 900 sq.ft.

Mob: 9880218669

ತಕ್ಷಣ ಬೇಕಾಗಿದ್ದಾರೆ

ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳಗಳಲ್ಲಿರುವ ಪ್ರತಿಷ್ಠಿತ ಕಂಪನಿ, ಆಫೀಸ್ & ಹೋಟೆಲ್‌ಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Billings, Front Office Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 39000 (ESI+PF+OT) ಇದೆ

9353753194　9980630131

ಬೇಕಾಗಿದ್ದಾರೆ

ಮೈಸೂರಿನ ಸುದ್ದಿ ವಾಹಿನಿಯಲ್ಲಿ ಕಾರ್ಯ ನಿರ್ವಹಿಸಲು ಮ್ಯಾನೇಜರ್ (ಮಹಿಳೆ) ವಿಡಿಯೋ ಎಡಿಟರ್, ಮೈಸೂರು ವರದಿಗಾರರು, ನಿರೂಪಕಿಯರು ತಕ್ಷಣವೇ ಬೇಕಾಗಿದ್ದಾರೆ. ಆಕರ್ಷಕ ವೇತನ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9886034801　9738591367

ಸೈಟು ಮಾರಾಟಕ್ಕಿದೆ

ಯೂನಿವರ್ಸಿಟಿ ಲೇಔಟ್ 20x30 S/F. M.S. ರಾಮಯ್ಯ ಲೇಔಟ್ 40x60 W/F

Mob: 9740088990

HOUSE FOR RENT

2 BHK (2nd Floor) at Raman's Residency, V.V. Mohalla, Mysore. Contact:

9606429417, 9483186145

VEGETARIANS ONLY.

FOR SALE

1) 30x40 - 12 Lakhs. 30x50 - 15 L sites available attach Brahmins E blk layout.
2) 12x36 G+2 house Kuvempunagar 28 Guntas Land in Varkodu.
3) 35x55 S/W C, R.K. Nagar 'I' Block.
4) Commercial building 43x53 Srirampura.
5) 17x60 G+1 3 BHK house Kamakshi Hospital backside.

Prakruthi Properties

90359 90359, 95386 90359

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer

ಪಂಡಿತ್ ಸತೀಶ್, 9741250896

ಕಾಣತೂರ್ ನಾಲ್ಗ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಪ್ರೀತಿ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸು ತೊಂದರೆ, ವಿವಾಹ ತಡೆ, ಪ್ರೇತ ಬಾಧೆ, ವಿದೇಶ ಪ್ರಯಾಣ ... ಪರಿಹಾರ ಮಾಡಿಕೊಡಲಾಗುತ್ತದೆ. ಚಾಮುಂಡಿ ವಿಲಾಸ ಏದುರು ಮಾರ್ಗ, ... ಮೈಸೂರು.

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುವೆಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888

ಹೋಂ ನರ್ಸಿಂಗ್ ಕೆಲಸ

ಅನುಭವ ಇರುವ / ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತರು 8hrs ಹಾಗೂ 24hrs ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ 12,000 – 23000 ರವರೆಗೆ (ಆಧಾರ್ ಕಾರ್ಡ್ & ಫೋಟೋಕಡ್ಡಾಯ)

9035113222

ಬೇಕಾಗಿದ್ದಾರೆ

ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary : 13,000 -21,000 + ESI, PF, ವಿದ್ಯಾರ್ಹತೆ - 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ.

9035734821 / 6360353848

MOBILE ರಿಪೇರಿ ಟ್ರೈನಿಂಗ್

18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ... ಯುವಕ, ಯುವತಿಯರಿಗೆ ... PG ವ್ಯವಸ್ಥೆಯೂ ಇರುತ್ತದೆ. ಕೂಡಲೇ ಸಂಪರ್ಕಿಸಿ:

SMM Institute

ಶ್ರೀ ವಿಶ್ವೇಶ್ವರಯ್ಯ ... ದೇವರಾಜ ಮೊಹಲ್ಲಾ ...

Mob.: 9986926101

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎನ್.ಕೃಷ್ಣಮೂರ್ತಿ

ಮೊ.: 9741806990

ತಾಯಿ ಚಾಮುಂಡೇಶ್ವರಿ ... ಭಗವತಿ ... ಶಕ್ತಿಯಿಂದ ... ಸ್ತ್ರೀ ಪುರುಷ ವಶೀಕರಣ ... ಶತ್ರುಬಾಧೆ ... ಸಮಸ್ಯೆಗಳಿಗೆ ... ಪರಿಹಾರ ... ಮೈಸೂರು.

WANTED

COMPUTER OPERATOR

with knowledge of Excel and CADD for Office purpose MALE / FEMALE at Mysore.

Call : 93413 84429

---

airtel WANTED

Sales Executive, Salary : 10,000/- + Allowance + Incentive extra. Contact:

9591501305

ಮನೆಯಿಂದಲೇ ಸಂಪಾದಿಸಿ

ಮಹಿಳೆಯರಿಗಾಗಿ ಇಲ್ಲಿದೆ ಒಂದು ಸುವರ್ಣಾವಕಾಶ. ಮನೆಯಿಂದಲೇ ಕುಳಿತುಕೊಂಡು ನಿಮ್ಮ ಬಿಡುವಿನ ಸಮಯದಲ್ಲಿ ಟೈಲರಿಂಗ್ ಮಾಡಿ ತಿಂಗಳಿಗೆ 15000 ರಿಂದ 25000 ರ ವರೆಗೂ ಸಂಪಾದಿಸಿ. ಯಾವುದೇ ರಿಜಿಸ್ಟ್ರೇಷನ್ ಟಾರ್ಗೆಟ್ ಇರುವುದಿಲ್ಲ. ಅನುಭವವುಳ್ಳ ಟೈಲರ್ಸ್ ಹಾಗೂ ಹೊಲಿಯಲು ಆಸಕ್ತಿ ಇರುವ ... ಕೂಡಲೇ ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Mob: 9902827996

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ

BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed ವಿವಾಹ ನೊಂದಣಿಗೆ ಕರೆ ಮಾಡಿ (2nd Marriage Also)

9164743059

HOUSE FOR SALE

20x33 Sq. Ft, 3rd Floor, House for Sale in Gokulam 2nd Main 3rd Stage, Nandagokula, Near MUDA Park Mysore. for more details Contact:

7349424888 / 9663818040

ಬೇಕಾಗಿದ್ದಾರೆ

* ಮನೆ ಅಡುಗೆಗೆ ಹೆಂಗಸು ಸಮಯ: 7 – 9 (ಬೆಳಿಗ್ಗೆ) 5 – 7 (ಸಂಜೆ) 50 ವರ್ಷ ವಯಸ್ಸು ಒಳಪಟ್ಟಿರುವ. ವೇತನ: 8,000.
* ಕಾರ್ ಡ್ರೈವರ್ ಸಮಯ: 9.30 am - 6.30 pm ವೇತನ: 10,000/–, ವಯಸ್ಸು (55 – 65 ವರ್ಷಗಳು). (ಊಟ, ವಸತಿ ಉಚಿತ).

Mob: 9480916803

ಕೂಡಲೇ ನೇಮಕಾತಿ

* Production & Quality Engr. (BE, Mec) -05. Salary: 15,000 to 25,000.
* Claint Services Engr. BE (CS, IS) & BCA, BBM, B.Com & Dip Salary: 26,000/-
* Software developers ಬೇಕಾಗಿದ್ದಾರೆ.

Location - Mysore. Work from Home & Part time also

9480904330

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳ್ ಫೈರ್‌ಬ್ರಿಗೇಡ್ ಹತ್ತಿರವಿರುವ ಹೆಸರಾಂತ ಕಂಪನಿಯಲ್ಲಿ 18 ರಿಂದ 35 ವರ್ಷ ಒಳಗಿರುವ ಲೇಡೀಸ್‌ಗಳು ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ತಿಂಗಳಿಗೆ ರೂ.15,000/– ಸಂಬಳವಿರುತ್ತದೆ. ಸಂಪರ್ಕಿಸಿ:

9035050653　9035050656

ನಿವೃತ್ತರಿಗೆ ವಿಶೇಷ ಉದ್ಯೋಗವಕಾಶ

VRS ನಿವೃತ್ತರಿಗೆ, ಬಿಸಿನೆಸ್ ವಯಸ್ಸಿನವರಿಗೆ, Housewives ಇವರಿಗೆ ವಿಶೇಷ ಸುವರ್ಣಾವಕಾಶ Free ಸೆಮಿನಾರ್ 05-12-2022, 11 am ರ ವೆಲ್‌ಕಮ್ ರೋಡ್, Hotel (ರೋಯಲ್ಟನ್ Hotel ಪಕ್ಕ) ಶ್ರೀ ಹರ್ಷ ರಸ್ತೆ, ಮೈಸೂರು. Lunch Follows, Salary, PF, ESI ಇತರೆ ಸೌಲಭ್ಯಗಳಿವೆ. ಕೂಡಲೇ ಸಂಪರ್ಕಿಸಿ:

8197510102 / 7349052084　9880115979

ಉಚಿತ ಉಚಿತ ಉಚಿತ

ನಮ್ಮ ಬಟ್ಟೆಯ ಷಾಪ್‌ನಲ್ಲಿ ಲೇಡೀಸ್ ಸಂತಸ ಕ್ಲೀನ್ಸ್ ಎಲ್ಲಾ ರೀತಿಯ ಬಟ್ಟೆಗಳು ... ಶಾಪಿಂಗ್ ಮಾಡಿದರೆ ... ಉಚಿತ ... ರೂ. 1600/- ...

9206470833 ಮೈಸೂರು

ಬೇಕಾಗಿದ್ದಾರೆ

Organic Farmer's House, Mysore ಸೇಲ್ಸ್ & ಕಲೆಕ್ಷನ್ (ಎಕ್ಸಿಕ್ಯೂಟಿವ್) ಮಾಡಲು ಯುವಕರು ಬೇಕಾಗಿದ್ದಾರೆ. (ಮೈಸೂರಿನವರಿಗೆ ಮೊದಲ ಆದ್ಯತೆ)

7996315161

ಫ್ರೆಶರ್ ವೆಜಿಟಬಲ್ & ಫ್ರೂಟ್ ಉಚಿತ ಹೋಂ ಡೆಲಿವರಿ ಬೇಕಾದಲ್ಲಿ ಸಂಪರ್ಕಿಸಿ.

ನಿವೃತ್ತ ನೌಕರರಿಗೆ ಉದ್ಯೋಗವಕಾಶದ ಸೆಮಿನಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ... Business ಅವಕಾಶದ ಸೆಮಿನಾರ್ ... Benefits: (1) Fixed Salary + PF + ESI + ... ದಿನಾಂಕ: 03–12–2022, ಸಮಯ ಬೆಳಗ್ಗೆ 11 ಗಂಟೆ. Followed by Lunch

7795039992 / 9886883858

FOR SALE

11 Acer Hunsur Road, 450 Coconut Tree

9844998724

(Brocker Excuse)

FLAT FOR SALE / LEASE

2BHK Unused Flat, East Facing, 1310 Sq.ft., 1st Floor, Fully Furnished at Foundation Silver Springs, Hootgalli, Mysuru. Sale Price - 78 Lakhs / Lease 15 Lakhs

8660105902

MUDA APPROVED SITES FOR SALE

30x40, 30x50, 40x60 & 50x80 Ready for Registration & Bank Loan Available. Sree Sapthamathruka LYT Phase-1. Next to Lalbahadurshastri Nagar, 2 kms from Ring Road.

7337786007

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ನೇರ ವ್ಯವಹರಿಸಬೇಕು. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮೈಸೂರು ಮಿತ್ರ ಗುರುವಾರ 1 ಡಿಸೆಂಬರ್ 2022

ನಾಳೆಯಿಂದ ವಿಸಿ ಫಾರಂನಲ್ಲಿ ಕೃಷಿ ಮೇಳ

ಹೊಸ ತಳಿಗಳು, ತಂತ್ರಜ್ಞಾನ ಅನಾವರಣ: ಡಾ.ಎನ್.ಶಿವಕುಮಾರ್

ಮಂಡ್ಯ, ನ.30– ಕೃಷಿ ವಿಶ್ವವಿದ್ಯಾನಿಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರದಿಂದ ಡಿ.2 ಹಾಗೂ 3 ರಂದು ವಿ.ಸಿ.ಫಾರಂ ಆವರಣದಲ್ಲಿ ಕೃಷಿ ಮೇಳ ಆಯೋಜಿಸಲಾಗಿದ್ದು, ರೈತರಿಗೆ ಹೊಸ ತಂತ್ರಜ್ಞಾನ ಹಾಗೂ ತಳಿಗಳ ಮಾಹಿತಿ ನೀಡಲಾಗುವುದು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನ ನಿರ್ದೇಶಕ ಡಾ. ಎನ್.ಶಿವಕುಮಾರ್ ತಿಳಿಸಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಆರ್ 64 ಭತ್ತದ ತಳಿಯಲ್ಲಿ ಬೆಂಕಿ ರೋಗ ಬರುವ ಸಾಧ್ಯತೆ ಹೆಚ್ಚು. ಬೆಂಕಿ ರೋಗ ತಡೆಗಟ್ಟಿ ಕಡಿಮೆ ಅವಧಿಯಲ್ಲಿ ಬೆಳೆಯುವ ಕೆಎಂಪಿ 225 ಭತ್ತದ ಸುಧಾರಿತ ತಳಿ ಬಿಡುಗಡೆ ಮಾಡಲಾಗಿದೆ. ಜೊತೆಗೆ ಆರ್‌ಎನ್‌ಆರ್ 15048 ಹೊಸ ಭತ್ತದ ತಳಿ, ಸಣ್ಣ ತಳಿಯಾಗಿದ್ದು, ಸೇವಿಸಲು ಚೆನ್ನಾಗಿದೆ. ಈಗಾಗಲೇ ರೈತರು ತಮ್ಮ ಜಮೀನಿನಲ್ಲಿ ಬೆಳೆಯುತ್ತಿದ್ದಾರೆ. ಈ ರೀತಿಯ ಹೊಸ ತಳಿಗಳ ಪರಿಚಯ ಹಾಗೂ ಪ್ರಾತ್ಯಕ್ಷಿಕೆಗಳು ಕೃಷಿ ಮೇಳದ ಮುಖ್ಯ ಆಕರ್ಷಣೆಯಾಗಿರುತ್ತದೆ ಎಂದರು.

ಎಂಎಹೆಚ್ 14–138 ಮುಸುಕಿನ ಜೋಳದ ಹೈಬ್ರೀಡ್ ತಳಿಯಾಗಿದ್ದು, ಎಲೆ ಅಂಗಮಾರಿ ರೋಗಕ್ಕೆ ಸಹಿಷ್ಣುತೆ, ಕೇದಿಗೆ ರೋಗಕ್ಕೆ ಸಾಧರಣಾ ಸಹಿಷ್ಣುತೆ ಹೊಂದಿರುತ್ತದೆ. ಇದನ್ನು ಪ್ರದರ್ಶನದಲ್ಲಿ ನೋಡಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಕೊರಲೆ ಎಂಬ ಧಾನ್ಯವು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದ್ದು, ಸಂಪೂರ್ಣ ಒಣ ಪ್ರದೇಶದಲ್ಲಿ ನೀರು ಕಡಿಮೆ ಇರುವ ಜಾಗದಲ್ಲಿಯೂ ಬೆಳೆಯಬಹುದಾದ ಧಾನ್ಯವಾಗಿದೆ. ಇವುಗಳನ್ನು ಸಹ ಮೇಳದಲ್ಲಿ ನೋಡಬಹುದು ಎಂದರು.

ಸಿಎನ್‌ಎಫ್‌ಎಸ್–1 ಎಂಬ ಮೇವಿನ ಜೋಳದ ತಳಿ ಅಧಿಕ ನಾರು ಮತ್ತು ಪ್ರೊಟೀನ್ ಅಂಶ ಹೊಂದಿರುತ್ತದೆ. ಇದನ್ನು ಪ್ರದರ್ಶನದಲ್ಲಿ ಇಡಲಾಗುವುದು. ಕ್ಷೇತ್ರ ಪ್ರಯೋಗದ ಮೂಲಕ ಭತ್ತದಲ್ಲಿ ಹೈಬ್ರೀಡ್ ತಳಿಯನ್ನು ರೈತರಿಗೆ ಹೊಸದಾಗಿ ಪರಿಚಯಿಸಿದ್ದೇವೆ. ವಿ.ಸಿ.ಫಾರಂನಲ್ಲಿ 17,000ಕ್ಕೂ ಹೆಚ್ಚಿನ ತಳಿಗಳಿವೆ. ರೈತರಿಂದ ಬೇಡಿಕೆ ಇರುವ 100–150 ತಳಿಗಳನ್ನು ಸಂತತಿ ನಾಶವಾಗದಂತೆ ಉಳಿಸಿಕೊಳ್ಳಲಾಗಿದೆ ಎಂದರು.

ಗೋಷ್ಠಿಯಲ್ಲಿ ಡೀನ್(ಕೃಷಿ) ಹಾಗೂ ಆವರಣದ ಮುಖ್ಯಸ್ಥ ಡಾ.ಎಸ್.ಎಸ್. ಪ್ರಕಾಶ್, ಕೃಷಿ ಮಹಾವಿದ್ಯಾಲಯದ ವಿಸ್ತೀರ್ಣ ವಿಭಾಗದ ಮುಖ್ಯಸ್ಥ ಡಾ.ರಂಗನಾಥ್, ಸಹ ವಿಸ್ತಾರಣಾ ನಿರ್ದೇಶಕ ಡಾ. ಡಿ.ರಘುಪತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಎಸ್.ಹೆಚ್.ನಿರ್ಮಲ ಸೇರಿದಂತೆ ಇನ್ನಿತರರಿದ್ದರು.

ದೊಡ್ಡಬ್ಯಾಡರಹಳ್ಳಿ ಪಿಎಸಿಎಸ್‌ನಲ್ಲಿ 26 ಲಕ್ಷ ದುರ್ಬಳಕೆ: ಪ್ರತಿಭಟನೆ

ಪಾಂಡವಪುರ, ನ.30–ಸಹಕಾರ ಸಂಘದಲ್ಲಿ 26 ಲಕ್ಷ ರೂ. ದುರ್ಬಳಕೆಯಾಗಿದೆ ಎಂದು ಆರೋಪಿಸಿ ತಾಲೂಕಿನ ದೊಡ್ಡಬ್ಯಾಡರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಷೇರುದಾರರು ಹಾಗೂ ರೈತರು ಸಂಘದ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಸಂಘದ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಸಹಕಾರ ಸಂಘದ ಅಧ್ಯಕ್ಷ ಕಾರ್ಯದರ್ಶಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಉಪಾಧ್ಯಕ್ಷ ಸ್ವಾಮಿ, ಗ್ರಾಪಂ ಸದಸ್ಯ ಕುಮಾರಿ ಶಂಕರ್ ಮಾತನಾಡಿ, ಸಂಘದ ಅಧ್ಯಕ್ಷ ಪ್ರಕಾಶ್, ಕಾರ್ಯದರ್ಶಿ ಶಿವಲಿಂಗು, ಸೇಲ್ಸ್‌ಮನ್ ರಮಾಬಾಯಿ(ಕಲಾ), ಸೂಪರ್‌ವೈಸರ್ ರಮೇಶ್ ಸಂಘದ 26 ಲಕ್ಷದ 500 ರೂ. ದುರ್ಬಳಕೆ ಮಾಡಿಕೊಂಡಿದ್ದು, ಇವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.



ಅಧ್ಯಕ್ಷರು ಕಚೇರಿಗೆ ಬಂದರೆ ಸಂಜೆವರೆಗೂ ಇರುತ್ತಿದ್ದರು. ಅಧಿಕಾರಿಗಳು ಹಣ ದುರ್ಬಳಕೆ ಮಾಡಿಕೊಂಡಿರುವುದು ಅವರಿಗೆ ತಿಳಿಯಲಿಲ್ಲವೇ. ಹಣ ದುರ್ಬಳಕೆಯಲ್ಲಿ ಅಧ್ಯಕ್ಷರ ಪಾಲು ಹೆಚ್ಚಾಗಿದ್ದು, ಅವರನ್ನು ಅಧಿಕಾರದಿಂದ ವಜಾಗೊಳಿಸಬೇಕು ಹಾಗೂ ಇನ್ನಿತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೇ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಂಘದ ಅಧ್ಯಕ್ಷ ಕೆ.ಪ್ರಕಾಶ್ ಮಾತನಾಡಿ, ಸಂಘದಲ್ಲಿ 26 ಲಕ್ಷ ಹಣ ದುರ್ಬಳಕೆಗೆ ಕಾರ್ಯದರ್ಶಿ, ಸೇಲ್ಸ್‌ಮನ್ ಹೊಣೆಗಾರರು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ಹಣ ದುರ್ಬಳಕೆಯಲ್ಲಿ ನನ್ನ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರತಿಭಟನೆಯಲ್ಲಿ ನಿರ್ದೇಶಕರಾದ ಶೇಷಮ್ಮ, ಶಿವಣ್ಣ, ಡಿ.ಟಿ.ಧರ್ಮ, ಶಿವಣ್ಣ, ಆನಂದ, ಪ್ರಸನ್ನ, ಡಿ.ಎಂ.ರವಿ, ಚನ್ನೇಗೌಡ, ಚಂದನ್, ಲೋಕೇಶ್, ಪ್ರಕಾಶ್, ನಿಂಗರಾಜು, ಚಿಕ್ಕಣ್ಣ, ಪಟೇಲ್ ಕುಮಾರ್, ರವಿ, ಶಿವಲಿಂಗು ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಶ್ರದ್ಧಾಭಕ್ತಿಯ ಸುಬ್ರಹ್ಮಣ್ಯ ಷಷ್ಠಿ



ನಾಗಮಂಗಲ, ನ.30– ಪಟ್ಟಣದ ಪುರಾತನ ಪ್ರಸಿದ್ಧ ಯೋಗಾನಾರಸಿಂಹ ದೇವಾಲಯದಲ್ಲಿ ವಿಪ್ರ ಸೇವಾ ಸಮಿತಿಯಿಂದ 10ನೇ ವರ್ಷದ ಸುಬ್ರಹ್ಮಣ್ಯ ಷಷ್ಠಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಮುಂಜಾನೆಯೇ ನೂರಾರು ಭಕ್ತರು ಪುಣ್ಯಾಹ ಮತ್ತು ಸಂಕಲ್ಪದೊಂದಿಗೆ ಹುತ್ತಕ್ಕೆ ಮತ್ತು ನಾಗದೇವರಿಗೆ ತನಿ ಎರೆದರು. ನಂತರ ವಿವಿಧ ಹೂಗಳಿಂದ ಅಲಂಕಾರಗೊಂಡ ಸುಬ್ರಹ್ಮಣ್ಯ ಸ್ವಾಮಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ವಿಪ್ರ ವಟುಗಳಿಗೆ ಪಾದಪೂಜೆ ಮಾಡಲಾಯಿತು. ವೇದ ವಿದ್ವಾಂಸ ನಂಜುಂಡಭಟ್, ರವಿಶಾಸ್ತ್ರಿ, ಸುಬ್ಬರಾಮು, ನಾಗರಾಜು ಇತರರು ನಾಗದೇವನಿಗೆ ಅಷ್ಟಾವಧಾನ ಸೇವೆ ಸಲ್ಲಿಸಿದರು. ಮಹಾಮಂಗಳಾರತಿಯೊಂದಿಗೆ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿ, ಸಾವಿರಾರು ಮಂದಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಅಲ್ಲದೇ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿಪ್ರ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಜೆ ಮೈಸೂರಿನ ಕುಮಾರಿ ಚಂದನ ತಂಡದಿಂದ ಕರ್ನಾಟಕ ಶಾಸ್ತ್ರಿಯ ಸಂಗೀತ ಏರ್ಪಡಿಸಲಾಗಿತ್ತು. ಈ ವೇಳೆ ಷಟಲ್ ಬ್ಯಾಡ್ಮಿಂಟನ್ ನಲ್ಲಿ ಪ್ರಶಸ್ತಿ ಪಡೆದ ಸಿಂಹಾದ್ರಿ ಭಾರದ್ವಾಜ್ ಮತ್ತು ಕಳೆದ 10 ವರ್ಷಗಳಿಂದ ಷಷ್ಠಿಗೆ ಸಹಕಾರ ನೀಡುತ್ತಿರುವ ಬೆಂಗಳೂರಿನ ಉದ್ಯಮಿ ರುಕ್ಮಿಣಿ ಮನೋಹರ್ ದಂಪತಿ, ಪುತ್ರಿ ಸುನೀತಾ ರವಿ ದಂಪತಿಯನ್ನು ಸನ್ಮಾನಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ವಿಜಯ್ ಕುಮಾರ್, ಸುರೇಶ್, ಸುರೇಶ್, ನಾಗೇಂದ್ರ, ಶ್ರೀನಿವಾಸ್, ವಿಶ್ವನಾಥ್, ಕರೀಗೌಡ, ರಮೇಶ್, ಗೋಪಾಲಕೃಷ್ಣ ಸೇರಿದಂತೆ ಭಕ್ತರಿದ್ದರು.

ಅಂಬೇಡ್ಕರ್ ಪರಿನಿರ್ವಾಣ ದಿನ

ಮಂಡ್ಯ, ನ.30– ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿರ್ವಾಣ ದಿನದ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿಯ ಮುಂಭಾಗದ ಉದ್ಯಾನವನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಡಿ.6 ರಂದು ಬೆಳಗ್ಗೆ 10 ಗಂಟೆಗೆ ಮಾಲಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳ ಮುಖಂಡರು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾತ್ರೋರಾತ್ರಿ ಬಸ್ ತಂಗುದಾಣ ನೆಲಸಮ: ಆಕ್ರೋಶ

ಶ್ರೀರಂಗಪಟ್ಟಣ, ನ.30– ರಾತ್ರೋರಾತ್ರಿ ಬಸ್ ತಂಗುದಾಣ ನೆಲಸಮ ಮಾಡಿರುವ ಘಟನೆ ತಾಲೂಕಿನ ಮೊಗರಹಳ್ಳಿ(ಮಂಟಿ) ಗ್ರಾಮದಲ್ಲಿ ನಡೆದಿದೆ.

ಮೈಸೂರು–ಕೆಆರ್‌ಎಸ್ ಮುಖ್ಯರಸ್ತೆಯ ಗ್ರಾಮದ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ತಾಲೂಕು ಪಂಚಾಯಿತಿ ಅನುದಾನದಲ್ಲಿ ಈ ಹಿಂದೆ ನಿರ್ಮಾಣವಾಗಿದ್ದ ಸಾರ್ವಜನಿಕ ಬಸ್ ತಂಗುದಾಣವನ್ನು ಯಾವುದೇ ಅನುಮತಿ ಪಡೆಯದೇ ಏಕಾಏಕಿ ನೆಲಸಮ ಮಾಡಲಾಗಿದ್ದು, ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯದಿಂದ ಹೊಸ ಆನಂದೂರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮೂಡಾ ಅನುದಾನದಲ್ಲಿ ನಿರ್ಮಾಣವಾಗುತ್ತಿದ್ದು, ಎಂ.ಎಸ್. ರೇವಣ್ಣ ಎಂಬುವರು ಈ ಕಾಮಗಾರಿಯ ಗುತ್ತಿಗೆ ಪಡೆದಿದ್ದಾರೆ. ಆದರೆ ರೇವಣ್ಣ ಅವರು ಯಾವುದೇ ಅನುಮತಿ ಪಡೆಯದೇ ಕಳೆದ 2 ದಿನಗಳ ಹಿಂದೆ ರಾತ್ರೋರಾತ್ರಿ ಬಸ್ ತಂಗುದಾಣವನ್ನು ಜೆಸಿಬಿ ಮೂಲಕ ನೆಲಸವು ಮಾಡಿದ್ದಾರೆ ಎಂದು ಆರೋಪಿಸಿದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಹಳ್ಳಿ ಪೈಮಹದೇವು, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಅಲ್ಲದೇ ಮತ್ತೆ ಬಸ್ ತಂಗುದಾಣ ನಿರ್ಮಿಸಿಕೊಡುವಂತೆ ಆಗ್ರಹಿಸಿದ್ದಾರೆ.

ಪಿಡಿಓ ಚೇಂದಿಲ್ ಮಾತನಾಡಿ, ನಮ್ಮ ಗ್ರಾಪಂನಿಂದ ಬಸ್ ತಂಗುದಾಣ ನೆಲಸಮ ಮಾಡಿಲ್ಲ. ಹೊಸದಾಗಿ ನಿರ್ಮಾಣ ಮಾಡುವ ಯಾವುದೇ ಪ್ರಸ್ತಾವ ನಮ್ಮ ಮುಂದೆ ಇಲ್ಲ. ಯಾವ ಇಲಾಖೆಯಿಂದ ಈ ತಂಗುದಾಣ ನೆಲಸಮ ಮಾಡಲಾಗಿದೆ ಎಂಬ ಬಗ್ಗೆ ನಮಗೆ ಮಾಹಿತಿ. ಈ ಪರಿಶೀಲಿಸಲಾಗುವುದು ಎಂದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಮೀಷನರ್ ದಿನೇಶ್‌ಕುಮಾರ್ ಸೂಚನೆ ಮೇರೆಗೆ ಸ್ಥಳಕ್ಕಾಗಮಿಸಿದ ಸೂಪರ್‌ಡೆಂಟ್ ಇಂಜಿನಿಯರ್ ಚನ್ನಕೇಶವ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಇಲ್ಲಿ ಯಾವುದೇ ಅನುಮತಿ ಇಲ್ಲದೆ ಬಸ್ ತಂಗುದಾಣ ನೆಲಸಮ ಮಾಡಲಾಗಿದೆ. ಇದು ಕಾನೂನು ಬಾಹಿರ. ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಯುವಕ ನೀರು ಪಾಲು

ಮದ್ದೂರು, ನ.30– ಶಿಂಷಾ ನದಿಯಲ್ಲಿ ಈಜಲು ಹೋದ ಯುವಕನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ಪಟ್ಟಣದ ಕೊಲ್ಲಿ ಸರ್ಕಲ್ ಬಳಿ ಮಂಗಳವಾರ ಸಂಜೆ ನಡೆದಿದೆ.

ಪಟ್ಟಣದ ಹೊಳೆ ಬೀದಿಯ ಹಳೇ ಮಸೀದಿ ರಸ್ತೆ ನಿವಾಸಿ ಅಮ್ಜದ್ ಉಲ್ಲಾ ಖಾನ್ ಅವರ ಪುತ್ರ ಮೊಹೀನ್ ಪಾಷಾ (18) ಮೃತಪಟ್ಟ ಯುವಕ. ಮೋಟಾರ್ ಬೈಕ್ ಗ್ಯಾರೇಜ್‌ನಲ್ಲಿ ಕೆಲಸ ಮಾಡುತ್ತಿದ್ದ ಮೊಹೀನ್ ಪಾಷಾ ತನ್ನ ತಂದೆಯೊಂದಿಗೆ ಕೊಲ್ಲಿ ಸರ್ಕಲ್ ಬಳಿಯ ಶಿಂಷಾ ನದಿಯಲ್ಲಿ ಮೀನು ಹಿಡಿಯಲು ಹೋಗಿದ್ದ ಎನ್ನಲಾಗಿದೆ. ಈ ವೇಳೆ ಆತನ ಇಬ್ಬರು ಸ್ನೇಹಿತರು ನದಿಯಲ್ಲಿ ಈಜಾಡುತ್ತಿದ್ದರು. ಮೊಹೀನ್ ಪಾಷಾ ಸಹ ಈಜಲು ನದಿಗೆ ಇಳಿದಿದ್ದು, ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೊಹೀನ್ ಪಾಷಾ ದೇಹವನ್ನು ನದಿಯಿಂದ ಮೇಲೆತ್ತಿದ್ದಾರೆ. ಮದ್ದೂರು ಠಾಣೆ ಎಸ್‌ಐ ಉಮೇಶ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಡಿ.7, ಮಂಡ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಮಂಡ್ಯ, ನ.30– ತಾಲೂಕಿನ ದುದ್ದ ಗ್ರಾಮದಲ್ಲಿ ಡಿ.7ರಂದು 17ನೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ದುದ್ದ ಗ್ರಾಮದ ಸರ್ಕಾರಿ ಶಾಲಾವರಣದಲ್ಲಿ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಸಮ್ಮೇಳನಾಧ್ಯಕ್ಷರಾಗಿ ನಿವೃತ್ತ ಕನ್ನಡ ಪ್ರಾಧ್ಯಾಪಕಿ, ಸಾಹಿತಿ ಡಾ.ಲೀಲಾ ಅಪ್ಪಾಜಿ ಅವರನ್ನು ಆಯ್ಕೆ ಮಾಡಲಾಗಿದೆ. ಶಾಸಕ ಸಿ.ಎಸ್.ಪುಟ್ಟರಾಜು ಗೌರವಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅಂದು ಬೆಳಗ್ಗೆ 8.30ಕ್ಕೆ ಸಮ್ಮೇಳನದ ಧ್ವಜಾರೋಹಣ ನಡೆಯಲಿದೆ ಎಂದರು. 9.30ಕ್ಕೆ ಸಮ್ಮೇಳನಾಧ್ಯಕ್ಷೆ ಡಾ.ಲೀಲಾ ಅಪ್ಪಾಜಿ ಅವರನ್ನು ಮೆರವಣಿಗೆಯಲ್ಲಿ ಸಮ್ಮೇಳನದ ವೇದಿಕೆಗೆ ಕರೆತರಲಾಗುವುದು. 11 ಗಂಟೆಗೆ ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಸಮ್ಮೇಳನ ಉದ್ಘಾಟಿಸಲಿದ್ದು, ಮಧ್ಯಾಹ್ನ 1 ಗಂಟೆಗೆ ವಿಚಾರಗೋಷ್ಠಿ, 2.30ಕ್ಕೆ ಕವಿಗೋಷ್ಠಿ, 3 ಗಂಟೆಗೆ ಸಂವಾದ, 4ಕ್ಕೆ ಸನ್ಮಾನ ಸಮಾರಂಭ ಹಾಗೂ 5 ಗಂಟೆಗೆ ಸಮಾರೋಪ ಸಮಾರಂಭ ಸಮಾರಂಭ ನಡೆಯಲಿದೆ ಎಂದರು.

ಸಂಜೆ 6.30ಕ್ಕೆ ಖ್ಯಾತ ನಟ ಮಂಡ್ಯ ರಮೇಶ್ ನಟನಾ ತಂಡ 'ಚೋರ ಚರಣದಾಸ' ನಾಟಕ ಪ್ರದರ್ಶಿಸಲಿದೆ. ಈ ಸಾಹಿತ್ಯ ಸಮ್ಮೇಳನಕ್ಕೆ ದುದ್ದ ಹೋಬಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು, ಸಾಹಿತಿಗಳು, ಶಾಲಾ ಮಕ್ಕಳು, ರೈತರು, ಕನ್ನಡ ಅಭಿಮಾನಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿ ಸಮ್ಮೇಳನ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.



ಸಮ್ಮೇಳನದಲ್ಲಿ 2500ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದು, ಬೆಳಗಿನ ಉಪಾಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು. ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಪ್ರಥಮ ದರ್ಜೆ ಗುತ್ತಿಗೆದಾರ ಬಾಲರಾಜ್ ಸಹಕಾರದೊಂದಿಗೆ ಈ ಸಮ್ಮೇಳನ ಆಯೋಜಿಸಲಾಗಿದ್ದು, ಖ್ಯಾತ ಸಾಹಿತಿ ಹಿ.ಶಿ.ರಾಮಚಂದ್ರಗೌಡ ಸೇರಿದಂತೆ ಹಲವು ಸಾಹಿತಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಕಸಾಪ ಪದಾಧಿಕಾರಿಗಳಾದ ಬಿ.ಎಂ.ಅಪ್ಪಾಜಪ್ಪ, ಶಿವಲಿಂಗೇಗೌಡ, ಸುಜಾತಕೃಷ್ಣ, ಎಂ.ಆರ್.ಮಂಜು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮಂಡ್ಯ,ನ.30– ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಹಾಗೂ ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ 2022–23ನೇ ಸಾಲಿನ ಅರ್ಹ ಪರಿಶಿಷ್ಟ ಜಾತಿಯ ಪೋಷಕರ ಮಕ್ಕಳಿಗೆ ವಿದ್ಯಾರ್ಥಿವೇತನಕ್ಕಾಗಿ ಆನ್‌ಲೈನ್ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು ಮೂಲ ದಾಖಲಾತಿಗಳೊಂದಿಗೆ ಇಲಾಖೆಯ ವೆಬ್‌ಸೈಟ್ www.sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಮಾಹಿತಿಗಾಗಿ ಕಛೇರಿಯ ದೂ.ಸಂ. 08232–220772 ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಮೂರನೇ ಪುಟದಿಂದ

ರಿಂಗ್ ರೋಡ್ ಎಲ್‌ಇಡಿ ದೀಪಗಳು

ತಲಾ ಎರಡರಂತೆ 4,818 ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಭೂಗತ ಕೇಬಲ್ ಅಳವಡಿಸಿ, ಬಲ್ಬ್ ಅಳವಡಿಕೆ ತೀವ್ರ ಗತಿಯಲ್ಲಿ ನಡೆಯುತ್ತಿತ್ತು. ನವೆಂಬರ್ 19ರವರೆಗೆ ಗರಿಷ್ಠ ಅಂತರದಲ್ಲಿ ಕೇಬಲಿಂಗ್ ಕೆಲಸ ಪೂರ್ಣಗೊಂಡಿದ್ದರಿಂದ ನವೆಂಬರ್ 30ರವರೆಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ನೀಡಿದ ವಾಗ್ದಾನದಂತೆ ಡಿಸೆಂಬರ್ 1ರಂದು ರಿಂಗ್ ರಸ್ತೆ ದೀಪಗಳಿಗೆ ಚಾಲನೆ ನೀಡುತ್ತೇವೆ ಎಂದು ಸಂಸದರು ತಿಳಿಸಿದ್ದಾರೆ.

ಕಂಟ್ರೋಲ್ ಯೂನಿಟ್‌ಗಳು ಪೂನಾದಿಂದ ಬರಬೇಕಾಗಿರುವ ಕಾರಣ, ಬೆಸ್ಕಾಂನಿಂದ ತಾತ್ಕಾಲಿಕವಾಗಿ ಕಂಟ್ರೋಲ್ ಯೂನಿಟ್ ತರಿಸುವ ವ್ಯವಸ್ಥೆ ಮಾಡಿದ್ದೇವೆ. ರಿಂಗ್ ರಸ್ತೆ ದೀಪಗಳನ್ನು ಆನ್ ಮಾಡುವ ಸಂಬಂಧ ನಾಳೆ(ಡಿ.1) ಬೆಳಗ್ಗೆ 11 ಗಂಟೆಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಿದ್ಧತೆ ಬಗ್ಗೆ ಚರ್ಚಿಸುತ್ತೇವೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ರಿಂಗ್ ರಸ್ತೆ ದೀಪಗಳನ್ನು ಬೆಳಗಿಸಲು ಪೂರ್ವ ತಯಾರಿ ಭರದಿಂದ ಸಾಗಿದ್ದು, ಸರ್ಕಲ್‌ಗಳಲ್ಲಿ ರಸ್ತೆ ಕೊರೆದು ವಯರ್‌ಗಳ ಅಳವಡಿಸಬೇಕಿರುವುದರಿಂದ ಕಾಮಗಾರಿ ಸ್ವಲ್ಪ ವಿಳಂಬವಾಯಿತು. ಸಂಸದ ಪ್ರತಾಪ್ ಸಿಂಹ ಅವರ ಆಸ್ಥೆಯಂತೆ ತ್ವರಿತವಾಗಿ ಕೆಲಸ ಮಾಡಲಾಯಿತು. ಡಿಸೆಂಬರ್ 1 ರಿಂದ ರಿಂಗ್ ರಸ್ತೆ ದೀಪಗಳು ಬೆಳಗಲಿವೆ ಎಂದು ಮೈಸೂರು ಮಹಾನಗರ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ತಿಳಿಸಿದ್ದಾರೆ.

42.5 ಕಿ.ಮೀ. ಉದ್ದದ ಮೈಸೂರು ರಿಂಗ್ ರಸ್ತೆಯ ದೀಪಗಳಿಗೆ ಯುಜಿ ಕೇಬಲ್ ಅಳವಡಿಸಿ ಬಲ್ಬ್ ಅಳವಡಿಸುವ ಕಾಮಗಾರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) 12 ಕೋಟಿ ರೂ. ಅನುದಾನ ನೀಡಿದೆ. ದೀಪಗಳ ನಿರ್ವಹಣೆ, ಮಾಸಿಕ ವಿದ್ಯುತ್ ಬಿಲ್ ಪಾವತಿಸುವ ಜವಾಬ್ದಾರಿಯನ್ನು ಮೈಸೂರು ಮಹಾನಗರ ಪಾಲಿಕೆ ವಹಿಸಿಕೊಂಡಿದೆ. ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI)ದ ವ್ಯಾಪ್ತಿಯಲ್ಲಿರುವ ರಿಂಗ್ ರಸ್ತೆಯ ಡಾಂಬರೀಕರಣ, ಸಿವಿಲ್ ಕಾಮಗಾರಿ ನಿರ್ವಹಣೆ ಮಾತ್ರ ಪ್ರಾಧಿಕಾರದ ಜವಾಬ್ದಾರಿಯಾಗಿದೆ.

ಅಪಘಾತ, ಅಪರಾಧಗಳಿಗೆ ಬ್ರೇಕ್!

ಹೀಗೆ ಹಲವೆಡೆ ಅಪಘಾತಗಳು ನಿರಂತರವಾಗಿ ಸಂಭವಿಸುತ್ತಿದ್ದವು. ಜೊತೆಗೆ ಹೆಬ್ಬಾಳು, ಬೋಗಾದಿ, ಹಿನಕಲ್, ದೇವೇಗೌಡ ಸರ್ಕಲ್ ಬಳಿ ಅತೀ ಹೆಚ್ಚು ಬಾರ್ ಅಂಡ್ ರೆಸ್ಟೋರೆಂಟ್‌ಗಳಿರುವುದರಿಂದ ರಿಂಗ್ ರಸ್ತೆಯ ಸರ್ವಿಸ್ ರೋಡ್‌ನಲ್ಲೇ ಕೆಲವರು ಮದ್ಯಪಾನ ಮಾಡಿ ಖಾಲಿ ಬಾಟಲಿಗಳನ್ನು ಬಿಸಾಡುತ್ತಿದ್ದಾರೆ. ಅದೇ ರೀತಿ ಕಟ್ಟಡ ತ್ಯಾಜ್ಯಗಳನ್ನು ರಾತ್ರಿ ವೇಳೆ ರಿಂಗ್ ರಸ್ತೆ ಬದಿಯಲ್ಲೇ ಸುರಿದು ಪರಾರಿಯಾಗುತ್ತಿದ್ದರಿಂದ ಅಲ್ಲಿನ ವಾತಾವರಣ ಹಾಳಾಗುತ್ತಿತ್ತು. ಕೆಲವು ದುಷ್ಕರ್ಮಿಗಳು ಬೀದಿ ದೀಪ ಇಲ್ಲದಿರುವ ಅವಕಾಶ ಪಡೆದುಕೊಂಡು ಮಹಿಳೆಯರ ಚಿನ್ನದ ಸರ ಅಪಹರಣ, ಮೊಬೈಲ್ ಕಿತ್ತುಕೊಂಡು ಪರಾರಿಯಾಗುವುದು, ವಾಹನ ತಡೆದು ದರೋಡೆಯಂತಹ ಕೃತ್ಯಗಳನ್ನೆಸಗುತ್ತಿದ್ದರಿಂದ ತಡರಾತ್ರಿ ರಿಂಗ್ ರಸ್ತೆಯಲ್ಲಿ ಓಡಾಡುವುದು ದುಸ್ತರವಾಗಿತ್ತು. ಅಲ್ಲದೇ ಕತ್ತಲಿನಲ್ಲಿ ರಿಂಗ್ ರಸ್ತೆಯಲ್ಲಿ ಅನೈತಿಕ ಚಟುವಟಿಕೆಗಳು, ಯುವಕ–ಯುವತಿಯರು ಕಂಡಲ್ಲಿ ಅವರನ್ನು ಬೆದರಿಸಿ ತಂದೆ–ತಾಯಿಯರಿಗೆ ಹೇಳುತ್ತೇವೆಂದು ಬ್ಲಾಕ್‌ಮೇಲ್ ಮಾಡಿ ಹಣ, ಚಿನ್ನಾಭರಣ ಕಿತ್ತುಕೊಂಡು ಪರಾರಿಯಾಗುತ್ತಿದ್ದರು. ಒಂದು ವರ್ಷದಲ್ಲಿ ರಿಂಗ್ ರಸ್ತೆಯಲ್ಲಿ 15ಕ್ಕೂ ಹೆಚ್ಚು ಅಪರಾಧ ಪ್ರಕರಣಗಳು ವರದಿಯಾಗುತ್ತಿದ್ದವು. ಬೆಳಕಿಗೆ ಬಾರದ ಇನ್ನೂ ಹಲವು ಘಟನೆಗಳು ನಡೆಯುತ್ತಿದ್ದ ರಿಂಗ್ ರಸ್ತೆಯಲ್ಲಿ ಗುರುವಾರದಿಂದ ಬೀದಿ ದೀಪಗಳು ಬೆಳಗುವ ಕಾರಣ ಅಂತಹ ಕೃತ್ಯಗಳಿಗೆ ಬ್ರೇಕ್ ಬೀಳುವ ಸಾಧ್ಯತೆ ಇದೆ.

ಹೈಕೋರ್ಟ್ ಅಸ್ತು

ಹಲವಾರು ವ್ಯಕ್ತಿಗಳಿಂದ ಅನುಸರಿಸಲ್ಪಟ್ಟ ಮತ್ತು ಪ್ರಯೋಜನವನ್ನು ಪಡೆದಿರುವ ಸಂಸ್ಥೆ ಮೇಲೆ ಯಾವುದೇ ಕಾರಣಗಳನ್ನು ನಿರ್ದಿಷ್ಟಪಡಿಸದೆ ಅನಿಯಂತ್ರಿತ ಮತ್ತು ಕಾನೂನುಬಾಹಿರ ಎಂದು ತಕ್ಷಣವೇ ಜಾರಿಗೆ ಬರುವಂತೆ ಕಾನೂನುಬಾಹಿರ ಸಂಘ ಎಂದು ಘೋಷಿಸಿದೆ ಎಂದು ಮನವಿಯಲ್ಲಿ ಹೇಳಿದೆ.

ಘೋಷಣೆಯ ಅಧಿಸೂಚನೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸುವಂತೆ ಮನವಿ ಮಾಡಿದ್ದರು. ಭಾರತದ ಒಕ್ಕೂಟದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮನವಿಯನ್ನು ವಿರೋಧಿಸಿ, ನಿಷೇಧವನ್ನು ಘೋಷಿಸಲು ಅಧಿಸೂಚನೆಯಲ್ಲಿ ಅಗತ್ಯ ಕಾರಣಗಳನ್ನು ಒದಗಿಸಲಾಗಿದೆ. ಇದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಹೇಳಿದರು. ರಾಜ್ಯದ ಕರಾವಳಿ ತೀರ, ಬೆಂಗಳೂರು, ಮೈಸೂರು, ಕೊಡಗು ಸೇರಿದಂತೆ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಈ ಸಂಘಟನೆ ಕೋಮು ವಿವಾದವನ್ನು ಸೃಷ್ಟಿಸಿ, ಜನಸಾಮಾನ್ಯರ ನೆಮ್ಮದಿ ಕೆಡಿಸಿತ್ತು. ಇತ್ತೀಚೆಗೆ ಶಿವಮೊಗ್ಗ ಮತ್ತು ಮಂಗಳೂರಿನಲ್ಲಿ ಹಿಂದೂಪರ ಸಂಘಟನೆ ಕಾರ್ಯಕರ್ತರು ಹತ್ಯೆಯಾದ ನಂತರ ದೇಶ ವಿರೋಧಿ ಸಂಘಟನೆಯನ್ನು ನಿಷೇಧಿಸುವಂತೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿತ್ತು.

ಎಫ್‌ಎಸ್‌ಎಲ್ ವರದಿ ನಿರೀಕ್ಷೆ

ತನಿಖೆ ನಡೆಯಬೇಕಾಗಿದೆ. ಮತ್ತೊಂದೆಡೆ ಮನಶಾಸ್ತ್ರಜ್ಞರಿಂದ ದಿನೇಶ್‌ಕುಮಾರ್ ಅವರ ಪತ್ನಿ ಮತ್ತು ಪುತ್ರನನ್ನು ಆಪ್ತ ಸಮಾಲೋಚನೆ ನಡೆಸಲು ನಿರ್ಧರಿಸಿರುವ ಪೊಲೀಸರು, ಸೈಕಿಯಾಟ್ರಿ ಒಬ್ಬರನ್ನು ಕಳುಹಿಸಿಕೊಡುವಂತೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕರಿಗೆ ಪತ್ರ ಬರೆದು, ತನಿಖಾಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ.

ಸುಯೋಗ್ ಆಸ್ಪತ್ರೆಯಲ್ಲಿ ದಾಖಲಾಗಿರುವ ದಿನೇಶ್‌ಕುಮಾರ್ ಪತ್ನಿ ಮತ್ತು ಪುತ್ರನಿಂದ ಸೂಕ್ತ ಮಾಹಿತಿ ಲಭ್ಯವಾಗದ ಕಾರಣ ಸೈಕಿಯಾಟ್ರಿ ಅವರಿಂದ ಆಪ್ತ ಸಮಾಲೋಚನೆ ಮಾಡಿಸಲು ಮುಂದಾಗಿರುವ ಪೊಲೀಸರು, ಸಾವನ್ನಪ್ಪಿದ ದಿನ ಮನೆಯಲ್ಲಿ ನಡೆದದ್ದೇನು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ನಡುವೆ ಮನೆ ಕೆಲಸದವರೂ ಘಟನೆ ಕುರಿತು ಸಮಂಜಸ ಮಾಹಿತಿ ನೀಡುತ್ತಿಲ್ಲವಾದ್ದರಿಂದ ದಿನೇಶ್‌ಕುಮಾರ್ ಸಾವಿನ ಪ್ರಕರಣ ಗೊಂದಲದ ಗೂಡಾಗಿದೆ.

ಕುಖ್ಯಾತ ಉಗ್ರಗಾಮಿ ಸಂಘಟನೆ ಐಸಿಸ್‌ನ ಮುಖ್ಯಸ್ಥ ಸಾವು

ಬೈರೂತ್: ಜಾಗತಿಕ ಕುಖ್ಯಾತ ಉಗ್ರಗಾಮಿ ಸಂಘಟನೆ ಐಸಿಸ್ ಮುಖ್ಯಸ್ಥ ಅಬು ಹಸನ್ ಅಲ್–ಹಶಿಮಿ ಅಲ್–ಖುರೇಶಿ ಸತ್ತಿದ್ದಾನೆ ಎಂದು ಎಎಫ್‌ಪಿ ಸುದ್ದಿ ಸಂಸ್ಥೆ ವರದಿ ಮಾಡಿದೆ. ಸ್ವತಃ ಐಸಿಸ್‌ನ ವಕ್ತಾರ ಈ ಸುದ್ದಿಯನ್ನು ಖಚಿತಪಡಿಸಿದ್ದಾನೆ ಎಂದು ತಿಳಿದು ಬಂದಿದೆ. ದೇವರ ಶತ್ರುಗಳೊಂದಿಗಿನ ಸೆಣಸಾಟದಲ್ಲಿ ಅಬು ಹಸನ್ ಅಲ್–ಹಶಿಮಿ ಅಲ್–ಖುರೇಶಿ ಸಾವನ್ನಪ್ಪಿದರು ಎಂದು ಐಸಿಸ್‌ನ ವಕ್ತಾರ ಹಾಶ್ಮಿ ಆಡಿಯೊ ಸಂದೇಶದಲ್ಲಿ ಹೇಳಿದ್ದಾನೆ. ಆದರೆ, ಸಾವು ಹೇಗಾಯಿತು, ಎಲ್ಲಾಯಿತು ಎಂಬುದನ್ನು ಖಚಿತಪಡಿಸಿಲ್ಲ.

ಐಸಿಸ್ ಮುಖ್ಯಸ್ಥ ಸ್ಥಾನಕ್ಕೆ ಹೊಸ ವ್ಯಕ್ತಿಯನ್ನು ಘೋಷಿಸಲಾಗಿದ್ದು, ಅವನ ಹೆಸರು ಅಬು ಅಲ್–ಹುಸೇನ್ ಅಲ್–ಹುಸೇನಿ ಅಲ್–ಖುರೇಶಿ ಎಂದು ಆಡಿಯೊ ಸಂದೇಶದಲ್ಲಿ ಹೇಳಲಾಗಿದೆ. ಐಸಿಎಸ್ ಎಂಬ ಉಗ್ರ ಸಂಘಟನೆಯು ಇರಾಕ್ ಮತ್ತು ಸಿರಿಯಾದಲ್ಲಿ ಸಂಪೂರ್ಣ ಇಸ್ಲಾಂ ಸಾಮ್ರಾಜ್ಯವನ್ನು ಸ್ಥಾಪಿಸುವ ಗುರಿಯೊಂದಿಗೆ ಭಯೋತ್ಪಾದನೆ ನಡೆಸುತ್ತಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಹೇಳಿಕೆ ಖಂಡಿಸಿ ಪ್ರತಿಭಟನೆ

ಕರ್ನಾಟಕ ಸಂಸದರ ಮೌನಕ್ಕೆ ಖಂಡನೆ



ಮೈಸೂರು, ನ.30(ಆರ್‌ಕೆಬಿ)– ಕರ್ನಾಟಕದ ಕೆಲವು ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಹೇಳಿಕೆ ನೀಡಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಈ ದೇಶದ ಒಕ್ಕೂಟ ವ್ಯವಸ್ಥೆಗೆ ಅಗೌರವ ತೋರುತ್ತಿರುವ ಅವರ ಹೇಳಿಕೆಯನ್ನು ಖಂಡಿಸಿದ ಪ್ರತಿಭಟನಾಕಾರರು, ಮಹಾರಾಷ್ಟ್ರ ಮುಖ್ಯಮಂತ್ರಿ ವಿರುದ್ಧ ಘೋಷಣೆಗಳನ್ನು ಕೂಗಿದರು. ಇಂತಹ ಹೇಳಿಕೆಗಳನ್ನು ನೀಡುತ್ತಿದ್ದರೂ ಪ್ರಧಾನಮಂತ್ರಿಯಾಗಲೀ, ಕೇಂದ್ರ ಸರ್ಕಾರವಾಗಲೀ, ರಾಜ್ಯವನ್ನು ಪ್ರತಿನಿಧಿಸುತ್ತಿರುವ ಲೋಕಸಭಾ ಹಾಗೂ ರಾಜ್ಯಸಭಾ ಸದಸ್ಯರು ಮೌನ ವಹಿಸಿರುವುದನ್ನು ಪ್ರಶ್ನಿಸಿದರು.

ಮತ್ತೆ ಮೊನ್ನೆ ಬೆಳಗಾವಿ ಗಡಿ ಭಾಗದಲ್ಲಿ, ಎಂಇಎಸ್ ಪುಂಡರು, ಕರ್ನಾಟಕದ ಬಸ್‌ಗಳ ಮೇಲೆ ಕಲ್ಲು ತೂರಿ, ವಾಹನಗಳಿಗೆ ಮಸಿ ಬಳಿದು, ಬಸ್‌ಗಳ ಮೇಲೆ ಮರಾಠಿ ಅಕ್ಷರಗಳನ್ನು ಬರೆದಿರುವುದು, ಶಾಂತ ಸ್ವಭಾವದ ಕನ್ನಡಿಗರನ್ನು ಕೆರಳುವಂತೆ ಮಾಡಿದೆ. ಕನ್ನಡಿಗ ಪ್ರಯಾಣಿಕರಲ್ಲಿ ತೀವ್ರ ಆತಂಕ ಮೂಡಿಸಿದೆ. ಈ ಘಟನೆಗಳಿಂದ ಎರಡು ರಾಜ್ಯಗಳ ನಡುವೆ ಸಾಮರಸ್ಯ ಕೆಡುತ್ತಿದೆ. ಮಹಾರಾಷ್ಟ್ರ ಸರ್ಕಾರ ಗಡಿ ವಿವಾದವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದೆ. ಅವರಿಗೆ ಮಾಡಲು ಬೇರೆ ಅಭಿವೃದ್ಧಿ ಕೆಲಸಗಳೇ ಇಲ್ಲ. ಪದೇಪದೆ ಗಡಿ ವಿಚಾರದಲ್ಲಿ ಕ್ಯಾತೆ ತೆಗೆದು, ದಬ್ಬಾಳಿಕೆ ಮಾಡಿ, ಅವಿವೇಕದಿಂದ ವರ್ತಿಸುತ್ತಿದೆ. ಎಲ್ಲರಿಗೂ ತಿಳಿದಿರುವಂತೆ ಗಡಿ ವಿಚಾರ ಮುಗಿದ ಅಧ್ಯಾಯವಾಗಿದೆ. ಮಹಾರಾಷ್ಟ್ರ ಸರ್ಕಾರ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಗಡಿ ವಿವಾದವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದೆ ಎಂದು ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಆರೋಪಿಸಿದರು.

ಮಹಾರಾಷ್ಟ್ರ ಸರ್ಕಾರ ಕರ್ನಾಟಕದ ಒಂದು ಇಂಚು ಜಾಗಕ್ಕೆ ಕೈ ಹಾಕುವುದಾದರೆ ಕನ್ನಡಿಗರೇನು ಸುಮ್ಮನೆ ಕುಳಿತಿಲ್ಲ. ಮಹಾಜನ್ ವರದಿಯೇ ಅಂತಿಮ. ಈ ವರದಿ ಪ್ರಕಾರ ಮಹಾರಾಷ್ಟ್ರದ ಸೊಲ್ಲಾಪುರ, ಸಾಂಗ್ಲಿ ಕರ್ನಾಟಕಕ್ಕೇ ಸೇರಬೇಕು. ಆದರೂ ನಾವು ಕನ್ನಡಿಗರು, ನಮ್ಮ ದೇಶದ ಸಂವಿಧಾನಕ್ಕೆ ಗೌರವ ಕೊಟ್ಟು ಸುಮ್ಮನಿದ್ದೇವೆ. ಆದರೆ ಮಹಾರಾಷ್ಟ್ರ ಸರ್ಕಾರ ಇದೇ ರೀತಿ ಉದ್ಧಟತನ ಪ್ರದರ್ಶನಕ್ಕೆ ಮುಂದಾದರೆ ಮಹಾರಾಷ್ಟ್ರದ ಅನೇಕ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳಲು ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರಧಾನಿ ಮತ್ತು ಕೇಂದ್ರ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ಮಹಾರಾಷ್ಟ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಬೇಕು. ಗಡಿ ವಿಚಾರದಲ್ಲಿ ಕ್ಯಾತೆ ತೆಗೆಯದಂತೆ ಬುದ್ಧಿವಾದ ಹೇಳದಿದ್ದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ, ಡಾ.ಶಾಂತರಾಜೇ ಅರಸ್, ಪ್ರಭುಶಂಕರ್ ಎಂ.ಬಿ.ಕೃಷ್ಣಯ್ಯ, ವಿಜಯೇಂದ್ರ, ಕುಮಾರ್ ಗೌಡ, ಎಸ್.ಚಂದ್ರು, ಎಳನೀರು ರಾಮಣ್ಣ, ದರ್ಶನ್‌ಗೌಡ, ಮಲ್ಲೇಶ್ ಗೊರೂರು, ನಾಗಣ್ಣ, ಬಂಗಾರಪ್ಪ, ನಂದಕುಮಾರ್, ಗಣೇಶ ಪ್ರಸಾದ್, ವೈ.ಕೆ.ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಪ್ರಸ್ತಾಪದ ಮೂಲಕ ತಮ್ಮ ಮಂತ್ರಿ ಮಂಡಲದ ಅನೇಕರ ವಿರುದ್ಧ ದಾಖಲಾದ

ಮೊಕದ್ದಮೆ ಮರೆಮಾಚಲು ಯತ್ನ

ಸಿಎಂ ಬೊಮ್ಮಾಯಿ ವಿರುದ್ಧ ಕೆಪಿಸಿಸಿ ಉಪಾಧ್ಯಕ್ಷರೂ ಆದ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ವಾಗ್ದಾಳಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಬಿಜೆಪಿ, ಆರ್‌ಎಸ್‌ಎಸ್ ಮನುವಾದಿಗಳೇ ಹೊರತು ಹಿಂದುತ್ವವಾದಿಗಳಲ್ಲ...

ದೇಶದಲ್ಲಿ ಹಿಂದುತ್ವದ ವಿರೋಧಿಗಳು ಯಾರಾದರೂ ಇದ್ದರೆ ಅದು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು. ಇವರು ಮನುವಾದಿಗಳೇ ಹೊರತು ಹಿಂದುತ್ವವಾದಿಗಳಲ್ಲ. ಇವರು ಡೋಂಗಿ ಹಿಂದುತ್ವವಾದಿಗಳು. ನೈಜ ಹಿಂದುತ್ವದಲ್ಲಿ ನಂಬಿಕೆ ಹೊಂದಿರುವವರು ಈ ದೇಶದಲ್ಲಿ ಇದ್ದರೆ ಅದು ಕಾಂಗ್ರೆಸ್ಸಿಗರು.
–ವಿ.ಎಸ್.ಉಗ್ರಪ್ಪ

ಮೈಸೂರು,ನ.30(ಪಿಎಂ)–ಏಕರೂಪ ನಾಗರಿಕ ಸಂಹಿತೆ ಜಾರಿ ಪ್ರಸ್ತಾಪದ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಂತ್ರಿ ಮಂಡಲದ ಅನೇಕರ ವಿರುದ್ಧ ಕ್ರಿಮಿನಲ್ ಮತ್ತು ಭ್ರಷ್ಟಾಚಾರ ಆರೋಪದಡಿ ದಾಖಲಾಗಿರುವ ಮೊಕದ್ದಮೆಗಳನ್ನು ಮರೆಮಾಚಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ ಕೆಪಿಸಿಸಿ ಉಪಾಧ್ಯಕ್ಷರೂ ಆದ ಮಾಜಿ ಸಂಸದ ವಿ.ಎಸ್.ಉಗ್ರಪ್ಪ, ಜೊತೆಗೆ ಚುನಾವಣೆ ಸಮೀಪದಲ್ಲಿ ಬಿಜೆಪಿಯವರಿಗೆ ಸದರಿ ಸಂಹಿತೆ ನೆನಪಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯವರಿಗೆ ನಿಜಕ್ಕೂ ಬದ್ಧತೆ ಇದ್ದರೆ ಸಂಸತ್ ಮೂಲಕ ಸದರಿ ಸಂಹಿತೆ ಜಾರಿಗೆ ತರಲಿ, ಆಮೇಲೆ ನೋಡೋಣ. ಅದು ಬಿಟ್ಟು ಕೇವಲ ಚುನಾವಣೆ ಬಂದಾಗ ಏಕರೂಪ ನಾಗರಿಕ ಸಂಹಿತೆ ಪ್ರಸ್ತಾಪಿಸುತ್ತಾರೆ ಎಂದು ಕಿಡಿಕಾರಿದರು.

ರಾಜ್ಯದ ಸುಮಾರು 863 ನರ್ಸಿಂಗ್ ಶಾಲಾ–ಕಾಲೇಜು ಶಾಲೆಗಳಿವೆ. ಈ ಪೈಕಿ ಬೆಂಗಳೂರು ನಗರದಲ್ಲೇ 351 ನರ್ಸಿಂಗ್ ಶಾಲಾ–ಕಾಲೇಜುಗಳಿವೆ. ಮೊನ್ನೆ ನರ್ಸಿಂಗ್ ಪರೀಕ್ಷೆಯಲ್ಲಿ ಮಾಸ್ ಕಾಪಿ ನಡೆದಿದೆ ಎಂದು ಒಂದೂವರೆ ಲಕ್ಷ ಅಭ್ಯರ್ಥಿಗಳಿಗೆ ಪರೀಕ್ಷೆ ರದ್ದುಪಡಿಸಲಾಗಿದೆ. ಅಭ್ಯರ್ಥಿಗಳು ಸೇರಿದಂತೆ ಅನೇಕರು ಹೇಳುವಂತೆ ಪರೀಕ್ಷಾ 180 ಕೇಂದ್ರಗಳ ಸಂಬಂಧ ಪ್ರತಿ ಕೇಂದ್ರಕ್ಕೆ ಕನಿಷ್ಠ 25 ಲಕ್ಷ ರೂ. ಸಂಬಂಧಿಸಿದವರಿಗೆ ಹೋಗಿದೆ ಎಂದರು.

ಸಚಿವ ಡಾ.ಕೆ.ಸುಧಾಕರ್ ವಿರುದ್ಧ ಜನಪ್ರತಿನಿಧಿಗಳ ಕೋರ್ಟ್ ನಿರ್ದೇಶನದ ಮೇರೆಗೆ ಪ್ರಕರಣ ದಾಖಲಾಗಿದೆ. ಸಚಿವ ಶ್ರೀರಾಮುಲು ಸುಮಾರು 300 ಕೋಟಿ ಮೌಲ್ಯದ ಭೂ ಕಬಳಿಕೆ ಆರೋಪದಡಿ 6ನೇ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ಶ್ರೀರಾಮುಲು ಜಾಮೀನು ತೆಗೆದುಕೊಂಡಿದ್ದಾರೆ. ಸಚಿವ ಆನಂದಸಿಂಗ್ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ. ರಾಜ್ಯ ಬಿಜೆಪಿ ಸರ್ಕಾರದ ಮಂತ್ರಿ ಮಂಡಲ ಅನೇಕರ ವಿರುದ್ಧ ಕ್ರಿಮಿನಲ್ ಮತ್ತು ಭ್ರಷ್ಟಾಚಾರ ಆರೋಪದಡಿ ಪ್ರಕರಣ ದಾಖಲಾಗಿವೆ. ಇವೆಲ್ಲನ್ನೂ ಮರೆಮಾಚಲು ಬೊಮ್ಮಾಯಿ ಏಕರೂಪ ನಾಗರಿಕ ಸಂಹಿತೆ ಜಪ ಶುರು ಮಾಡಿದ್ದಾರೆ ಎಂದು ದೂರಿದರು.

ವಿಫಲ ಡಬಲ್ ಡೆಕ್ಕರ್ ಸರ್ಕಾರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಡಳಿತ ಮರೆತಿದ್ದಾರೆ. ಅವರು ಮತ್ತು ಅವರ ಮಂತ್ರಿ ಮಂಡಲ ಸಮೀಪದಲ್ಲೇ ಎದುರಾಗುವ ವಿಧಾನಸಭೆ ಚುನಾವಣೆ ಎದುರಿಸುವುದು ಹೇಗೆ ಎಂಬುದರಲ್ಲೇ ತಲ್ಲೀನರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಇವರು ಪ್ರವಾಸ ಕೈಗೊಂಡಿದ್ದಾರೆ. ಜನರ ಎದುರು ಮನಸ್ಸೋಇಚ್ಛೆ ಮಾತನಾಡಲು ಮುಂದಾಗಿದ್ದಾರೆ. ಡಬಲ್ ಡೆಕ್ಕರ್ ಬಿಜೆಪಿ ಸರ್ಕಾರ ಎಲ್ಲದರಲ್ಲೂ ವಿಫಲವಾಗಿದ್ದು, ಕೊಟ್ಟ ಭರವಸೆಗಳನ್ನು ಈಡೇರಿಸದೇ ಹುಸಿಗೊಳಿಸಿದೆ. ಎಲ್ಲಾ ರಂಗಗಳಲ್ಲಿ ವಿಫಲವಾಗಿರುವ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ವಾಮ ಮಾರ್ಗದಲ್ಲಿ ಸಾಗುತ್ತಿದೆ ಎಂದು ಆರೋಪಿಸಿದರು.

ಪ್ರಧಾನಿ ಮೋದಿಯವರು ಪದೇ ಪದೆ ಶ್ರೀರಾಮನ ಹೆಸರು ಹೇಳುತ್ತಾರೆ. ಆದರೆ ಶ್ರೀರಾಮನ ತತ್ವ ಸಿದ್ಧಾಂತಕ್ಕೆ ದ್ರೋಹ ಬಗೆದವರು ಯಾರಾದರೂ ಇದ್ದರೆ ಅದರಲ್ಲಿ ನರೇಂದ್ರ ಮೋದಿ ಮೊದಲನೇಯವರು. ಅವರು 2014ರಲ್ಲಿ ಕೊಟ್ಟ ಎಲ್ಲಾ ಭರವಸೆಗಳನ್ನು ಹುಸಿಗೊಳಿಸಿದ್ದಾರೆ. ನರೇಂದ್ರ ಮೋದಿಯವರು ರಾಮಾಯಣ ಓದಿದ್ದರೋ ಇಲ್ಲವೋ ಗೊತ್ತಿಲ್ಲ ಎಂದು ಕುಟುಕಿದರು.

2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಬಿಜೆಪಿ ಸೋಲುವುದು 100ಕ್ಕೆ 100ರಷ್ಟು ಗ್ಯಾರಂಟಿ. ಅಂತೆಯೇ 2024ರ ಲೋಕಸಭಾ ಚುನಾವಣೆಯಲ್ಲಿಯೂ ಬಿಜೆಪಿ ಸೋಲಲಿದ್ದು, ರಾಜ್ಯ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾಂಗ್ರೆಸ್‌ನಲ್ಲಿ ಗುಂಪು ರಾಜಕಾರಣ ಇಲ್ಲ. ಬದಲಿಗೆ ಆಂತರಿಕ ಪ್ರಜಾಪ್ರಭುತ್ವ ಇದೆ. ಹಾಗಾಗಿ ಯಾವುದಾದರೂ ವಿಚಾರದಲ್ಲಿ ಭಿನ್ನ ಅಭಿಪ್ರಾಯಗಳು ಹೊರಹೊಮ್ಮುತ್ತವೆ. ಅದನ್ನೇ ಗುಂಪುಗಾರಿಕೆ ಎಂದು ವ್ಯಾಖ್ಯಾನಿಸುವುದು ಸಮಂಜಸವಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಭಾಸ್ಕರ್‌ಗೌಡ, ಹುಣಸೂರು ಬಸವಣ್ಣ, ಕೆ.ಮಹೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.



ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ವಿಜಯನಗರ 3ನೇ ಹಂತದ ನಿವಾಸಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಜಿ.ಟಿ.ದೇವೇಗೌಡರು ಕೇಕ್ ಕತ್ತರಿಸಿ, ಪೌರಕಾರ್ಮಿಕರಿಗೆ ಹಾಗೂ ಬಡವರಿಗೆ ಹಾಟ್ ಬಾಕ್ಸ್ ವಿತರಿಸಿದರು. ಈ ವೇಳೆ ವಿಜಯನಗರ ಮಂಜು, ಕುಮಾರ್, ಮಹೇಶ್, ವೇಣು, ಮರೀಗೌಡ, ನಿಂಗೇಗೌಡ, ಮಂಜು, ಅಣ್ಣೇಗೌಡ, ಚಿನ್ನು, ಜಯರಾಂ ಇನ್ನಿತರರಿದ್ದರು.

ಅಂಗಾಂಗ ದಾನ: ಸಾವಿನಲ್ಲೂ ಸಾರ್ಥಕತೆ ಮೆರೆದ ಸಚಿನ್



ಎಸ್.ಎ.ಸಚಿನ್



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಿಂದ ಅಂಗಾಂಗಗಳನ್ನು ಕೊಂಡೊಯ್ದ ದೃಶ್ಯ.

ಮೈಸೂರು,ನ.30(ಆರ್‌ಕೆ)–ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಮೆದುಳು ನಿಷ್ಕ್ರಿಯಗೊಂಡಿದ್ದ ಯುವಕ ತನ್ನ ಅಂಗಾಂಗಗಳ ಮೂಲಕ ಇತರರಿಗೆ ಜೀವದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕಿನ ಸಿಂಗಾಪುರ ಗ್ರಾಮದ ಎಸ್.ಎ.ಸಚಿನ್ (21) ಅಂಗಾಂಗ ದಾನ ಮಾಡಿದ ಯುವಕ. ನವೆಂಬರ್ 28ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಆತನ ಮೆದುಳಿನಲ್ಲಿ ತೀವ್ರ ರಕ್ತಸ್ರಾವವಾಗುತ್ತಿತ್ತು. ತಕ್ಷಣ ಅವರನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಮೆದುಳು ನಿಷ್ಕ್ರಿಯಗೊಂಡಿದ್ದು, ರೋಗಿ ಬದುಕುಳಿಯದಿರುವ ಸಾಧ್ಯತೆ ಬಗ್ಗೆ ವೈದ್ಯರು ಆತನ ಪೋಷಕರಿಗೆ ತಿಳಿಸಿದರು.

ಪೋಷಕರು, ಕುಟುಂಬ ಇನ್ನಿತರೆ ಸದಸ್ಯರೊಂದಿಗೆ ಚರ್ಚಿಸಿ ಸಚಿನ್ ಅಂಗಾಂಗಗಳನ್ನು ದಾನ ಮಾಡಲು ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲು ಕೋರಿದರು. ಅದರನ್ವಯ ಆಸ್ಪತ್ರೆ ವೈದ್ಯರು ನವೆಂಬರ್ 29ರಂದು ಮೆದುಳು ನಿಷ್ಕ್ರಿಯವಾಗಿದೆ ಎಂದು ಘೋಷಿಸಿ, ನಂತರ ರೋಗಿಯ ಹೃದಯ, ಎರಡು ಕಣ್ಣುಗಳು (ಕಾರ್ನಿಯಾ), ಎರಡು ಕಿಡ್ನಿ ಮತ್ತು ಲಿವರ್ ಅನ್ನು ಕೊಯ್ಲು ಮಾಡಿ, ಅವಶ್ಯವಿದ್ದ ರೋಗಿಗಳಿಗೆ ಕಸಿ ಮಾಡುವ ಸಲುವಾಗಿ ಹೃದಯವನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ, 1 ಕಿಡ್ನಿ ಮತ್ತು ಲಿವರ್ ಅನ್ನು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಹಾಗೂ 2 ಕಾರ್ನಿಯಾಗಳನ್ನು ಬೆಂಗಳೂರಿನ ಲಯನ್ಸ್ ಆಸ್ಪತ್ರೆಗೆ ರವಾನಿಸಿದರು.

ಈ ಸಂದರ್ಭ ಮಹಾತ್ಮ ಗಾಂಧಿ ರಸ್ತೆ, ಬನ್ನೂರು ರಸ್ತೆ, ದೇವೇಗೌಡ ಸರ್ಕಲ್, ರಿಂಗ್ ರಸ್ತೆ ಹಾಗೂ ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಸಿಗ್ನಲ್ ಲೈಟ್ ಜಂಕ್ಷನ್‌ಗಳಲ್ಲಿ ಸಂಚಾರ ಪೊಲೀಸರು ಗ್ರೀನ್ ಕಾರಿಡಾರ್ ಮಾಡಿ ಅಂಗಾಂಗಗಳನ್ನು ಕೊಂಡೊಯ್ದ ವಾಹನಕ್ಕೆ ಅವಕಾಶ ಮಾಡಿಕೊಟ್ಟರು. ಸಚಿನ್ ಅಂಗಾಂಗಗಳು ಸಾವು–ಬದುಕಿನ ನಡುವೆ ಹೋರಾಡುತ್ತಿದ್ದ ಹಲವರಿಗೆ ಜೀವ ನೀಡಿದಂತಾಗಿದ್ದು, ಅಂಗಾಂಗ ದಾನ ಮಾಡಲು ನಿರ್ಧರಿಸಿದ ಕುಟುಂಬದವರಿಗೆ ಜೆಎಸ್‌ಎಸ್ ಆಸ್ಪತ್ರೆ ಆಡಳಿತ ಮಂಡಳಿ ಧನ್ಯವಾದ ತಿಳಿಸಿದೆ.

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ



ಮೈಸೂರು, ನ.30– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಕೋಟೆ ಡಿ.1ರಂದು ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅಂದು ಬೆಳಗ್ಗೆ 11 ಗಂಟೆಗೆ ಕುದುರೆಮಾಳದ ಗಂಗೋತ್ರಿ ಬಡಾವಣೆಯಲ್ಲಿ ವಾಸವಾಗಿರುವ ಪೌರ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಜಲದರ್ಶಿನಿ ಅತಿಥಿ ಗೃಹದಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವರು.

ಬ್ರಾಹ್ಮಣ ಸಮುದಾಯ ಕುರಿತ ಹೇಳಿಕೆ ವಿಚಾರ

ಪ.ಮಲ್ಲೇಶ್ ಬಹಿರಂಗ ಕ್ಷಮೆ ಯಾಚನೆಗೆ ಒತ್ತಾಯ



ಮೈಸೂರು,ನ.30(ಪಿಎಂ)–ಚಿಂತಕ ಪ.ಮಲ್ಲೇಶ್ ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಬ್ರಾಹ್ಮಣ ಸಮುದಾಯ ಕುರಿತು ಅವಹೇಳನಕಾರಿ ಹೇಳಿಕೆ ನೀಡಿ, ಬಳಿಕ ಕೇವಲ ವಿಷಾದ ವ್ಯಕ್ತಪಡಿಸಿರುವುದು ಸರಿಯಲ್ಲ. ಅವರು ಈ ಕೂಡಲೇ ಬಹಿರಂಗವಾಗಿ ಬ್ರಾಹ್ಮಣ ಸಮುದಾಯದ ಕ್ಷಮೆ ಯಾಚಿಸಬೇಕೆಂದು ಬಿಜೆಪಿ ಪ್ರಬುದ್ಧರ ಪ್ರಕೋಷ್ಠದ ಮೈಸೂರು (ಗ್ರಾಮಾಂತರ) ಜಿಲ್ಲಾ ಘಟಕ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಕೋಷ್ಠದ ಸಂಚಾಲಕ ಎಸ್.ಕೆ.ರಾಜುಗೌಡ, 'ಬ್ರಾಹ್ಮಣರನ್ನು ನಂಬಬೇಡಿ, ಅವರೊಡನೆ ಸೇರಬೇಡಿ' ಎಂಬರ್ಥದಲ್ಲಿ ಪಮಲ್ಲೇಶ್ ಹೇಳಿಕೆ ನೀಡಿದ್ದು, ಇದು ಖಂಡನೀಯ. ಸಾಮಾಜಿಕ ನ್ಯಾಯಪರ ಹೋರಾಟ ಮಾಡುವುದಾಗಿ ಹೇಳಿಕೊಳ್ಳುವ ವಿಪಕ್ಷ ನಾಯಕ ಸಿದ್ದರಾಮಯ್ಯನವರು ಅದೇ ವೇದಿಕೆಯಲ್ಲಿದ್ದರೂ ಖಂಡಿಸದಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕುದ್ಮುಲ್ ರಂಗರಾವ್ ಅವರಿಂದ ಹಿಡಿದು ಸಾಕಷ್ಟು ಮಂದಿ ಬ್ರಾಹ್ಮಣ ಸಮುದಾಯದವರು ದಲಿತರ ಪರವಾಗಿ ಕೆಲಸ ಮಾಡಿದ್ದಾರೆ. ಇದು ಪ.ಮಲ್ಲೇಶ್ ಅವರ ಅರಿವಿಗೆ ಬರಲಿಲ್ಲವೇ? ಸಮುದಾಯವೊಂದನ್ನು ಗುರಿಯಾಗಿ ಹೀಗೆ ಹೇಳಿಕೆ ನೀಡುವ ಮೂಲಕ ಸಮಾಜದ ಸಾಮರಸ್ಯಕ್ಕೆ ಧಕ್ಕೆ ಉಂಟು ಮಾಡುವವರ ವಿರುದ್ಧ ಪೊಲೀಸ್ ಇಲಾಖೆ ನಿರ್ದಾಕ್ಷಿಣ್ಯ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು. ಮುಖಂಡರಾದ ಮಾಯಿಗೌಡ, ರಾಜಣ್ಣ, ರವಿ, ಮಂಜೇಶ್, ರಾಜಣ್ಣ ಗೋಷ್ಠಿಯಲ್ಲಿದ್ದರು.

ಮೈಸೂರು ಜಿಲ್ಲೆಯಲ್ಲಿ ಅರ್ಹ ಮತದಾರರ ಪಟ್ಟಿಯಿಂದ ಕೈಬಿಟ್ಟಿಲ್ಲ

ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಸ್ಪಷ್ಟನೆ



ಮೈಸೂರು,ನ.30(ಆರ್‌ಕೆ)–ಯಾವೊಬ್ಬ ಅರ್ಹ ಮತದಾರರನ್ನು ಉದ್ದೇಶಪೂರ್ವಕವಾಗಿ ಮತದಾರರ ಪಟ್ಟಿಯಿಂದ ಕೈಬಿಟ್ಟಿಲ್ಲ ಎಂದು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಇಂದಿಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಮಾಹಿತಿ ನೀಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಬೂತ್ ಮಟ್ಟದ ಅಧಿಕಾರಿಗಳು ಮನೆ–ಮನೆಗೆ ತೆರಳಿ ಪರಿಶೀಲನೆ ನಡೆಸಿದಾಗ ನಿಯಮಾನುಸಾರ ಪುನರಾವರ್ತನೆಗೊಂಡಿರುವ ಪ್ರಕರಣಗಳಲ್ಲಿ ಮಾತ್ರ ಹೆಸರನ್ನು ಡಿಲಿಟ್ ಮಾಡಲಾಗಿದೆ ಎಂದರು.

ನಿಗದಿತ ನಮೂನೆ–7 ಅನ್ನು ಪಡೆದು ಪರಿಶೀಲಿಸಿದ ನಂತರವಷ್ಟೇ ಬಿಎಲ್‌ಓಗಳ ವರದಿ ಆಧರಿಸಿ ಮತದಾರರ ಹೆಸರನ್ನು ಕೈಬಿಡಲಾಗಿದ್ದು, ಮತದಾರರ ಪಟ್ಟಿಯಲ್ಲಿ ಒಂದೇ ರೀತಿಯ ಭಾವಚಿತ್ರ ಹಾಗೂ ವಿವರಗಳು ಎರಡೂ ಕಡೆ ಇದ್ದ ಹೆಸರನ್ನು ತೆಗೆದು ಹಾಕಲಾಗಿದೆ. ಮರಣ ಹೊಂದಿದವರು, ಬೇರೆಡೆಗೆ ಸ್ಥಳಾಂತರವಾದವರು ಪಟ್ಟಿಯಲ್ಲಿದ್ದುದರಿಂದ ಕ್ರಮ ವಹಿಸಲಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಲ್ಲಿ ಮರಣ ಹೊಂದಿದ 20,440, ಸ್ಥಳಾಂತರಗೊಂಡ 16,933, ಪುನರಾವರ್ತನೆಯಾಗಿದ್ದ 2,227 ಹಾಗೂ ಒಂದೇ ರೀತಿಯ ಭಾವಚಿತ್ರವಿದ್ದ ಕಾರಣದಿಂದ 80,930 ಪ್ರಕರಣ ಸೇರಿ ಒಟ್ಟು 1,20,786 ಮತದಾರರನ್ನು ಕರಡು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಒಂದು ವೇಳೆ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟಿದ್ದರೆ, ರಾಜಕೀಯ ಪಕ್ಷಗಳ ಬೂತ್ ಲೆವೆಲ್ ಏಜೆಂಟರು ತಹಶೀಲ್ದಾರ್, ಬಿಎಲ್‌ಓಗಳಿಗೆ ಅಥವಾ ತಮಗೆ ಮಾಹಿತಿ ನೀಡಬಹುದು ಎಂದು ರಾಜೇಂದ್ರ ತಿಳಿಸಿದರು.

ಒಂದು ವೇಳೆ ಸಕಾರಣವಿಲ್ಲದೆ ಉದ್ದೇಶಪೂರ್ವಕವಾಗಿ ಹೆಸರು ಕೈಬಿಟ್ಟಿರುವುದು ಕಂಡು ಬಂದಲ್ಲಿ ತನಿಖೆ ನಡೆಸಿ, ಅಂತಹ ಅಧಿಕಾರಿಗಳ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುತ್ತೇನೆ. ತಮ್ಮ ಹೆಸರು ಬೇರೆ ಬೂತ್‌ಗಳಲ್ಲಿ ನಮೂದಾಗಿದ್ದರೆ ನಮೂನೆ–8ರಲ್ಲಿ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳಬಹುದು. ಹೆಸರು ಕೈಬಿಟ್ಟಿದ್ದರೆ ನಮೂನೆ–6ರಲ್ಲಿ ಅರ್ಜಿ ಸಲ್ಲಿಸಬಹುದು ಎಂದರು.

ಅದೇ ರೀತಿ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಂತೆ ನಮ್ಮ ಜಿಲ್ಲೆಗೂ ಹೊಸ ಇವಿಎಂ ಮತಯಂತ್ರಗಳು ಬಂದಿವೆ. ಅವುಗಳ ಕಾರ್ಯವೈಖರಿ ಬಗ್ಗೆ ಗೊಂದಲ ಬೇಡ. ನಿಮಗೆ ಯಾವುದೇ ಸಂಶಯವಿದ್ದರೂ ಚುನಾವಣಾ ಶಾಖೆ, ಅಡಿಷನಲ್ ಡಿಸಿ ಅಥವಾ ತಮ್ಮನ್ನು ಸಂಪರ್ಕಿಸಿ ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಚುನಾವಣಾ ತಹಸೀಲ್ದಾರ್ ರಾಮ್ ಪ್ರಸಾದ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಸಮ್ಮತಿ ಲೇಡಿಸ್ ಫೌಂಡೇಶನ್ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹೆಬ್ಬಾಳಿನಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಈ ವೇಳೆ ಫೌಂಡೇಷನ್‌ನ ಸದಸ್ಯರು ಇದ್ದರು.

ಜಿಲ್ಲಾ ಮಟ್ಟದ ಸಮಿತಿ ಸದಸ್ಯರ ನೇಮಕಕ್ಕೆ ಅರ್ಜಿ ಆಹ್ವಾನ

ಮೈಸೂರು, ನ.30– ಡಾ. ಬಿ.ಆರ್.ಅಂಬೇಡ್ಕರ್, ಅಭಿವೃದ್ಧಿ ನಿಗಮ ನಿಯಮಿತ, ಪರಿಶಿಷ್ಟ ಜಾತಿ, ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ಕೋಶ ವತಿಯಿಂದ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಸಮಿತಿ ಸದಸ್ಯರುಗಳನ್ನು ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ನಾಮ ನಿರ್ದೇಶಕ ಸದಸ್ಯರನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುತ್ತದೆ.

ಸಮುದಾಯದ ಮುಖಂಡರುಗಳು ತಮ್ಮ ಸ್ವ ವಿವರವುಳ್ಳ ಮಾಹಿತಿಯೊಂದಿಗೆ ಡಿ.7ರೊಳಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಮೈಸೂರು ಜಿಲ್ಲಾ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2332480 ಸಂಪರ್ಕಿಸಬಹುದಾಗಿದೆ ಎಂದು ಅಲೆಮಾರಿ ಅಭಿವೃದ್ಧಿ ಕೋಶದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.12ರಂದು ಪಿಂಚಣಿ ಅದಾಲತ್

ಮೈಸೂರು,ನ.30–ಅಂಚೆ ಇಲಾಖೆ ವತಿಯಿಂದ ಡಿ.12ರಂದು ಬೆಳಗ್ಗೆ 11 ಗಂಟೆಗೆ ಅಂಚೆ ಇಲಾಖೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಪಿಂಚಣಿ ಅದಾಲತ್ ಏರ್ಪಡಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಡಿ.7ರೊಳಗೆ ಮೇಲ್ಕಂಡ ಕಚೇರಿಗೆ ಸಲ್ಲಿಸಲು ಅವಕಾಶವಿರುತ್ತದೆ. ಇಚ್ಛೆಯುಳ್ಳ ಪಿಂಚಣಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ಅದಾಲತ್‌ನಲ್ಲಿ ಭಾಗವಹಿಸಬಹುದು.

ನಿಧನ

ಎನ್.ಗಣೇಶ್



ಮೈಸೂರು,ನ.30–ಮೈಸೂರಿನ ಹೆಬ್ಬಾಳು ನಿವಾಸಿ ಮತ್ತು ಪುರೋಹಿತರಾದ ಎನ್.ಗಣೇಶ್(63) ಅವರು ಬುಧವಾರ ಮುಂಜಾನೆ ಹೃದಯಾಘಾತದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ ಶಶಿಕಲಾ, ಪುತ್ರ ಅಕ್ಷಯ್ ಸಾಗರ್, ಪುತ್ರಿ ಅಪೂರ್ವ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಗೋಕುಲಂ ಬಡಾವಣೆಯ ಚಿರಶಾಂತಿಧಾಮದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.12.2022 ಗುರುವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ (ಹೆಲಿಪ್ಯಾಡ್ ಹತ್ತಿರ), ಆಲನಹಳ್ಳಿ, ಬೆಳಗ್ಗೆಯಿಂದ.

■ **ಸೆಂಟ್ ಜೋಸೆಫ್ಸ್ ಕಾಲೇಜು ಫಾರ್ ವುಮನ್** : ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ 'ಭರವಸೆಗಾಗಿ ನಡಿಗೆ' ವಾಕಾಥಾನ್, ಸ್ಥಳ: ಕಾಲೇಜು ಆವರಣ, ರಮ್ಮನಹಳ್ಳಿ, ಬೆಳಗ್ಗೆ 7.30ಕ್ಕೆ.

■ **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರ** : ಮೈಸೂರು, ಬೆಳಗಾವಿ ಹಾಗೂ ಕಲಬುರ್ಗಿ ವಿಭಾಗ ಮಟ್ಟದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಪುರುಷರ ಹಾಗೂ ಮಹಿಳೆಯರ ಚೆಸ್ ಪಂದ್ಯಾವಳಿ, ಮುಖ್ಯ ಅತಿಥಿಗಳು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ. ವಿದ್ಯಾಶಂಕರ, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಶಂಕರನಾರಾಯಣ, ಸ್ಥಳ: ವಿವಿಯ ಆವರಣ, ಸಾತಗಳ್ಳಿ, ಬೆಳಗ್ಗೆ 9 ಗಂಟೆಗೆ.

■ **ಶಾರದಾ ವಿಲಾಸ್ ಕಾಲೇಜ್** : 'ಜೀವ ವಿಜ್ಞಾನದಲ್ಲಿ ಇತ್ತೀಚಿನ ಪ್ರಗತಿಗಳು' ಕುರಿತು ವಿಚಾರ ಸಂಕಿರಣ, ಸ್ಥಳ: ಸೆಂಟನರಿ ಹಾಲ್, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಗೆ.

■ **ಪ್ರೀತಿ ಕ್ಯಾನ್ಸರ್ ಸೆಂಟರ್** : ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಎಂ.ಜಿ. ರಸ್ತೆ, ಲಕ್ಷ್ಮೀಪುರಂ, ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ** : ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಮತ್ತು ಹೊಸದಾಗಿ ಚುನಾಯಿತ ವಿದ್ಯಾರ್ಥಿ ಪರಿಷತ್ತು ಸ್ಥಾಪಿಸಲು ಇಂಡಕ್ಷನ್ ಕಾರ್ಯಕ್ರಮ ಮತ್ತು ವಿದ್ಯಾರ್ಥಿ ಸಂಘದ ಉದ್ಘಾಟನೆ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಪ್ರೊ. ಎಚ್.ಟಿ. ಬಸವರಾಜಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕ ಡಾ. ಎನ್. ಪಿ. ನಟರಾಜ, ಸ್ಥಳ: ಶ್ರೀ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಬಯೋಟೆಕ್ನಾಲಜಿ ಮತ್ತು ಬಯೋ ಇನ್‌ಫರ್ಮ್ಯಾಟಿಕ್ಸ್ ವಿಭಾಗ** : ವಿಶ್ವ ಏಡ್ಸ್ ದಿನ–2022 ಕಾರ್ಯಕ್ರಮ, ಸ್ಥಳ: ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ** : ಭಗವದ್ಗೀತೆಯ 2ನೇ ಅಧ್ಯಾಯದ ಪ್ರವಚನ, ಪಂಡಿತ್ ರಘೋತ್ತಮಚಾರ್ ನಾಗಸಂಪಿಗೆ ಬಾಗಲಕೋಟೆ ಅವರಿಂದ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸಂಜೆ 5 ಗಂಟೆಗೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ** : ದತ್ತಿ ಕಾರ್ಯಕ್ರಮ, ವೀರಶೈವ ಅನಾಥಾಲಯ ವಿದ್ಯಾರ್ಥಿಗಳಿಂದ ಭಾಷಣ ಸ್ಪರ್ಧೆ, ಉದ್ಘಾಟನೆ ಹಾಗೂ ಉಪನ್ಯಾಸ: ಮಹಾರಾಜ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕ ಡಾ. ಟಿ.ಕೆ. ಕೆಂಪೇಗೌಡ, ವಿಷಯ: ವಚನ ಸಾಹಿತ್ಯದಲ್ಲಿ ಜ್ಞಾನದ ಪರಿಕಲ್ಪನೆ, ಸ್ಥಳ: ವೀರಶೈವ ಅನಾಥಾಲಯ, ರಾಜೇಂದ್ರ ಕಲ್ಯಾಣ ಮಂಟಪದ ಎದುರು, ರಾಮಾನುಜ ರಸ್ತೆ, ಸಂಜೆ 5 ಗಂಟೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಆಧ್ಯಾತ್ಮ ರಾಮಾಯಣ ಕುರಿತು ಸ್ವಾಮಿ ಜ್ಞಾನ ಯೋಗಾನಂದ ಅವರಿಂದ ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸಭಾಂಗಣ, ಆಶ್ರಮದ ಆವರಣ, ಸಂಜೆ 6 ಗಂಟೆಗೆ.

■ **ರಂಗಾಯಣ** : ರೆಪರ್ಟರಿ ಕಲಾವಿದರಿಂದ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ, ರಚನೆ, ನಿರ್ದೇಶನ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಕಲಾಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಉತ್ತರಾಧಿ ಮಠ** : ಶ್ರೀ ಭಗವದ್ಗೀತಾ ಅಭಿಮಾನ, 2ನೇ ತಿಂಗಳ ಪ್ರವಚನ, ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ, ಸ್ಥಳ: ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಡಿ.3ರಿಂದ ಮಡಿಕೇರಿಯಲ್ಲಿ ರೋಟರಿ ಜಿಲ್ಲಾ ಕ್ರೀಡಾಕೂಟ

ಕೊಡಗು, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ ಜಿಲ್ಲೆಯ 500ಕ್ಕೂ ಹೆಚ್ಚು ರೋಟರಿ ಸದಸ್ಯರು, ಕುಟುಂಬಸ್ಥರು ಭಾಗಿ

ಮಡಿಕೇರಿ,ನ.30– ಮಡಿಕೇರಿ ರೋಟರಿ ಮಿಸ್ಟಿಹಿಲ್ಸ್ ವತಿಯಿಂದ ಡಿ.3 ಮತ್ತು 4ರಂದು ರೋಟರಿ ಜಿಲ್ಲಾ ಕ್ರೀಡಾಕೂಟವನ್ನು ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ರೋಟರಿ ಸೇವಾ ಸಂಸ್ಥೆಯ ಪದಾಧಿಕಾರಿಗಳು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸದೃಢ ಆರೋಗ್ಯದೊಂದಿಗೆ ಸೇವೆ' ಎಂಬ ಧ್ಯೇಯವಾಕ್ಯದೊಂದಿಗೆ ಕೊಡಗು, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ಮೈಸೂರು ಜಿಲ್ಲೆಗಳನ್ನು ಒಳಗೊಂಡ ರೋಟರಿ ಜಿಲ್ಲೆಯ ರೋಟರಿ ಸದಸ್ಯರು ಮತ್ತು ಅವರ ಕುಟುಂಬಸ್ಥರು ಒಟ್ಟಾಗಿ 500 ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇರುವುದಾಗಿ ತಿಳಿಸಿದರು.

ಆರಂಭದ ದಿನವಾದ ಡಿ.3ರಂದು ಬೆಳಗ್ಗೆ 9 ಗಂಟೆಗೆ ಕ್ರೀಡಾಕೂಟವನ್ನು ವಿರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ. ಬೋಪಯ್ಯ ಉದ್ಘಾಟಿಸಲಿದ್ದು, ಅಂತಾರಾಷ್ಟ್ರೀಯ ಹಾಕಿಪಟು ಎಸ್.ವಿ. ಸುನಿಲ್ ಪಾಲ್ಗೊಳ್ಳಲಿದ್ದಾರೆ. ಅಂದು ಹೊರಾಂಗಣ ಕ್ರೀಡೆಗಳಾಗಿ ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್, ಒಳಾಂಗಣದಲ್ಲಿ ಬ್ಯಾಡ್ಮಿಂಟನ್, ಕೇರಂ, ಟೇಬಲ್ ಟೆನ್ನಿಸ್ ಪಂದ್ಯಾವಳಿ ನಡೆಯಲಿದೆ. ಗಾಲ್ಫ್ ಕ್ರೀಡೆಯನ್ನು ಅಂದು ಮಧ್ಯಾಹ್ನ 3 ಗಂಟೆಗೆ ನಗರದ ಗಾಲ್ಫ್ ಮೈದಾನದಲ್ಲಿ ಆಯೋಜಿಸಿರುವುದಾಗಿ ಮಾಹಿತಿ ನೀಡಿದರು.

ಕ್ರೀಡಾಕೂಟದ ದ್ವಿತೀಯ ದಿನವಾದ ಡಿ.4ರಂದು 100 ಮೀ., 200ಮೀ., ಓಟದ ಸ್ಪರ್ಧೆ, ರಿಲೇ, ನಡಿಗೆ ಸ್ಪರ್ಧೆ, ಶಾಟ್ ಪುಟ್, ಉದ್ದ ಜಿಗಿತ, ಡಿಸ್ಕಸ್ ಥ್ರೋ, ಟಗ್ ಆಫ್ ವಾರ್ ಮತ್ತು ಚೆಸ್ ಪಂದ್ಯಾವಳಿ ನಡೆಯಲಿದೆ. ಅಂದಿನ ಕ್ರೀಡಾ ಚಟುವಟಿಕೆಗಳನ್ನು ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಉದ್ಘಾಟಿಸಲಿದ್ದಾರೆ. ಬಹುಮಾನ ವಿತರಣೆಯನ್ನು ಡಾ.ಮಂಥರ್‌ಗೌಡ ನೆರವೇರಿಸಲಿದ್ದಾರೆ. ಸಮಾರೋಪದ ಬಳಿಕ ಮಡಿಕೇರಿ ಗೌಡ ಸಮಾಜದಲ್ಲಿ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೋಟರಿ ಕ್ರೀಡಾ ಸಮಿತಿ ಅಧ್ಯಕ್ಷ ರವೀಂದ್ರ ರೈ, ರೋಟರಿ ಮಿಸ್ಟಿಹಿಲ್ಸ್ ಸ್ಥಾಪಕ ಅಧ್ಯಕ್ಷ ಬಿ.ಜಿ. ಅನಂತಶಯನ, ಹಾಲಿ ಅಧ್ಯಕ್ಷ ಪ್ರಸಾದ್ ಗೌಡ, ಕಾರ್ಯದರ್ಶಿ ಪ್ರಮೋದ್ ಕುಮಾರ್ ರೈ, ಕ್ರೀಡಾಕೂಟ ಆಯೋಜನಾ ಸಮಿತಿ ಅಧ್ಯಕ್ಷ ದೇವಣಿರ ತಿಲಕ್, ಉಪಾಧ್ಯಕ್ಷ ಮೋಹನ್ ಪ್ರಭು ಉಪಸ್ಥಿತರಿದ್ದರು.

ಜ.18ರಿಂದ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ

ಮಡಿಕೇರಿಯಲ್ಲಿ ಪೂರ್ವಭಾವಿ ಸಭೆ, ಲಾಂಛನ ಬಿಡುಗಡೆ



ಮಡಿಕೇರಿ,ನ.30– ಸೆಂಟರ್ ಇಂಡಿಯನ್ ಟ್ರೇಡ್ ಯೂನಿಯನ್‌ನ 17ನೇ ಅಖಿಲ ಭಾರತ ಸಮ್ಮೇಳನದ ಹಿನ್ನೆಲೆ ಸಿಐಟಿಯು ಕೊಡಗು ಜಿಲ್ಲಾ ಸಮಿತಿ ವತಿಯಿಂದ ಪೂರ್ವಭಾವಿ ಸಭೆ ಮತ್ತು ಲಾಂಛನ ಬಿಡುಗಡೆ ಕಾರ್ಯಕ್ರಮ ನಡೆಯಿತು.

ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ನಡೆದ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ಧರ್ಮೇಶ್ ಜ.18ರಿಂದ 22ರವರೆಗೆ ಬೆಂಗಳೂರಿನಲ್ಲಿ ನಡೆಯುವ ಸಮ್ಮೇಳನದಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಯಶಸ್ವಿಗೊಳಿಸುವಂತೆ ಕರೆ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಕೇಂದ್ರ ಸರ್ಕಾರದ ಬಂಡವಾಳಶಾಹಿ ಪರ ಆರ್ಥಿಕ ನೀತಿಯ ಪರಿಣಾಮ ದೇಶದ ರೈತರು, ಕಾರ್ಮಿಕರು, ಸಣ್ಣಪುಟ್ಟ ವ್ಯಾಪಾರಿಗಳು, ಉದ್ದಿಮೆದಾರರು ಸಂಕಷ್ಟದಲ್ಲಿದ್ದು, ನಿರುದ್ಯೋಗ, ಬಡತನ ಹಾಗೂ ಹಸಿವು ಹೆಚ್ಚಾಗುತ್ತಿದೆ ಎಂದು ಟೀಕಿಸಿದರು.

ದೇಶದ ಜನರು ಎದುರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ಹೋರಾಡಲು ಒಂದು ಪ್ರಬಲವಾದ ಐಕ್ಯ ಚಳುವಳಿಯ ಅಗತ್ಯವಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಮ್ಮೇಳನದ ಸ್ವಾಗತ ಸಮಿತಿಗಳನ್ನು ರಚಿಸಿ ಆ ಸಮಿತಿಗಳ ಮೂಲಕ ಆರ್ಥಿಕ, ಸಾಮಾಜಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ವಿಷಯಗಳ ಆಧಾರದ ವಿಚಾರ ಸಂಕಿರಣಗಳು, ಜಾಥಾಗಳು ಮತ್ತಿತರ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ಭರತ್ ತಿಳಿಸಿದರು.

ಇದೇ ಸಂದರ್ಭ 17ನೇ ಅಖಿಲ ಭಾರತ ಸಮ್ಮೇಳನದ ಲಾಂಛನವನ್ನು ಪ್ರಮುಖರು ಬಿಡುಗಡೆಗೊಳಿಸಿದರು.

ಸಭೆಯಲ್ಲಿ ಹಿರಿಯ ವಕೀಲ ಕುಂಞಬ್ದುಲ್ಲ, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಲಕ್ಷ್ಮಣ್, ಎಐಟಿಯುಸಿ ಜಿಲ್ಲಾಧ್ಯಕ್ಷ ಸೋಮಪ್ಪ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ತೋಟ ಕಾರ್ಮಿಕರ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಎನ್.ಡಿ.ಕುಟ್ಟಪ್ಪನ್, ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ ಎನ್.ಡಿ. ಕುಟ್ಟಪ್ಪ, ಸಿಐಟಿಯು ಪದಾಧಿಕಾರಿ ಕೆ.ಎಸ್. ರತೀಶ್, ಗ್ರಾಮ ಪಂಚಾಯಿತಿ ನೌಕರರ ಸಂಘದ ಕಾರ್ಯದರ್ಶಿ ನವೀನ್ ಕುಮಾರ್, ಅಂಗನವಾಡಿ ಸಂಘದ ಪ್ರಮುಖರಾದ ಭಗೀರಥಿ, ಬಿಸಿಯೂಟ ನೌಕರರ ಸಂಘದ ಪ್ರಮುಖರಾದ ಕುಸುಮ, ಕೊಡಗು ಜಿಲ್ಲಾ ಜನರಲ್ ವರ್ಕರ್ ಯೂನಿಯನ್ ಜಿಲ್ಲಾಧ್ಯಕ್ಷ ಹೆಚ್.ಬಿ.ರಮೇಶ್ ಉಪಸ್ಥಿತರಿದ್ದರು.

ಕೃಷ್ಣ ಮೃಗದ ಚರ್ಮ ಮಾರಾಟಕ್ಕೆ ಯತ್ನ: ಇಬ್ಬರ ಬಂಧನ



ಮಡಿಕೇರಿ,ನ.30– ಕೃಷ್ಣ ಮೃಗದ ಚರ್ಮವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಚಿತ್ರದುರ್ಗದ ನಿವಾಸಿಗಳಾದ ನರಸಿಂಹ ಮೂರ್ತಿ ಹಾಗೂ ನಾಗರಾಜು ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ.

ನ.30ರಂದು ಕುಶಾಲನಗರದ ಕಾರ್ಯಪ್ಪ ವೃತ್ತದಿಂದ ಅಯ್ಯಪ್ಪ ಸ್ವಾಮಿ ದೇವಾಲಯಕ್ಕೆ ತೆರಳುವ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಕೃಷ್ಣ ಮೃಗದ ಚರ್ಮವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಬಗ್ಗೆ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಖಚಿತ ಮಾಹಿತಿ ಲಭಿಸಿತ್ತು ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ದಾಳಿ ಸಂಘಟಿಸಿದ ಪೊಲೀಸರು ಚಿತ್ರದುರ್ಗ ಮೂಲದ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳಿಂದ 1 ಕೃಷ್ಣ ಮೃಗದ ಚರ್ಮವನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಗಳ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಮೂಲಗಳು ಮಾಹಿತಿ ನೀಡಿವೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್ ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ. ವಿಶ್ವನಾಥ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ ಸಿಬ್ಬಂದಿಗಳಾದ ಶೇಖರ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ, ಮಂಜುನಾಥ ಪಾಲ್ಗೊಂಡಿದ್ದರು.

ಗೋ ಸದನ ಜಾಗ ಅಭಿವೃದ್ಧಿಗೆ ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ,ನ.30– ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುದುಗೂರು ಗ್ರಾಮದಲ್ಲಿ ಬ್ರಿಟಿಷರ ಕಾಲದಲ್ಲಿ ಸ್ಥಾಪನೆಯಾದ ಗೋ ಸದನ ಜಾಗವನ್ನು ಪಶು ಪಾಲನಾ ಕೇಂದ್ರಕ್ಕೆ ವರ್ಗಾಯಿಸಿ ಕೇಂದ್ರವನ್ನು ಮೇಲ್ದರ್ಜೆಗೇರಿಸಬೇಕೆಂದು ಒತ್ತಾಯಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಹುದುಗೂರು ಗ್ರಾಮದಲ್ಲಿರುವ ಸಾಮಾಜಿಕ ಅರಣ್ಯ ಸಸ್ಯ ಕ್ಷೇತ್ರದ ಕಚೇರಿ ಎದುರು ಪ್ರತಿಭಟನೆ ನಡೆಸಿದ ಹುದುಗೂರು, ಕಾಳೀದೇವರ ಹೊಸೂರು, ಮಾವಿನಹಳ್ಳ, ಮದಲಾಪುರ, ಯಡವನಾಡು ವ್ಯಾಪ್ತಿಯ ಗ್ರಾಮಸ್ಥರು, ಅರಣ್ಯ ಇಲಾಖೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಕೂಡಿಗೆ ಗ್ರಾಮ ಪಂಚಾಯಿತಿ ಸದಸ್ಯ ಎಚ್.ಎಸ್. ರವಿ ಮಾತನಾಡಿ, ದಶಕದ ಹಿಂದೆ ನಿರ್ಮಾಣಗೊಂಡ ಗೋ ಸದನ ಹಾಗೂ ಪಶುಪಾಲನಾ ಇಲಾಖೆಗೆ ಜಾಗವನ್ನು ವರ್ಗಾಯಿಸದೇ, ಇತ್ತೀಚೆಗೆ ಆರಂಭಗೊಂಡ ಸಾಮಾಜಿಕ ಅರಣ್ಯ ಇಲಾಖೆ ಹೆಸರಿಗೆ ಜಾಗವನ್ನು ವರ್ಗಾಯಿಸಲಾಗಿದೆ ಎಂದು ಆರೋಪಿಸಿದರು. ಪಶುಪಾಲನಾ ಇಲಾಖೆಯ ಹೆಸರಿಗೆ ಕನಿಷ್ಠ 75 ಸೆಂಟ್ ಜಾಗವನ್ನು ವರ್ಗಾಯಿಸಿ, ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕೆಂದು ಒತ್ತಾಯಿಸಿದರು.

ರೈತ ಮುಖಂಡ ಟಿ.ಎಂ.ಚಿಣ್ಣಪ್ಪ ಮಾತನಾಡಿ, ನಮ್ಮ ಮನವಿಗೆ ಸ್ಪಂದನೆ ದೊರೆಯದಿದ್ದಲ್ಲಿ ಜಾನುವಾರುಗಳ ಸಹಿತ ಸೋಮವಾರಪೇಟೆ ರಸ್ತೆ ತಡೆದು ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ರೈತ ಸಂಘದ ಅಧ್ಯಕ್ಷೆ ಸುಶೀಲ, ರೈತ ಮುಖಂಡ ಟಿ.ಎಂ.ಮಲ್ಲಪ್ಪ, ಐ.ಎಸ್. ಗಣೇಶ್ ಮಾತನಾಡಿದರು.

ಗ್ರಾಮದ ರೈತ ಮುಖಂಡರಾದ ಟಿ.ಎಂ.ಚಾಮಿ, ಮಲ್ಲಪ್ಪ, ಕೂಡಿಗೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶೋಭಾಪುಟ್ಟಪ್ಪ, ಸದಸ್ಯೆ ರತ್ನಮ್ಮ, ಗ್ರಾಮದ ಮುಖಂಡರಾದ ವಿಮಲಾ, ಗಿರೀಶ್, ನಾಣಯ್ಯ,ನಾಗರಾಜು, ಅಣಯ್ಯ, ಮುತ್ತಪ್ಪ, ರವಿಣ್ಣ, ಬಸವರಾಜು, ಮಹಮ್ಮದ್, ಶಾಂತಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವಿಶೇಷ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮಡಿಕೇರಿ, ನ.30– ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ವತಿಯಿಂದ 2022–23 ನೇ ಸಾಲಿನಲ್ಲಿ ಬಿಎಡ್ ಹಾಗೂ ಡಿಎಡ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಪಾರ್ಸಿ, ಜೈನ್, ಬೌದ್ಧ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾಸಿಂಧು ಪೋರ್ಟಲ್‌ನ ಆನ್‌ಲೈನ್‌ನಲ್ಲಿ (https://sevasindhu.karnataka.gov.in) ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಡಿ.10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಮೌಲಾನಾ ಆಜಾದ್ ಭವನ, ಎಫ್‌ಎಂಸಿ ಕಾಲೇಜು ಹತ್ತಿರ, ಮಡಿಕೇರಿ, ಇವರನ್ನು ಹಾಗೂ ಕಚೇರಿ ದೂ.ಸಂ.08272–225528, ಮಾಹಿತಿ ಕೇಂದ್ರ, ಮಡಿಕೇರಿ 08272–220214 ಅನ್ನು ಸಂಪರ್ಕಿಸಬಹುದು.

ಹೆಗ್ಗಳ ಗ್ರಾಮದಲ್ಲಿ ಶಾಲಾ ಪ್ರವೇಶದ್ವಾರ ಉದ್ಘಾಟನೆ

ಏಕ ರೂಪದ ಶಿಕ್ಷಣದ ಉದ್ದೇಶದಿಂದ ನೂತನ ಶಿಕ್ಷಣ ನೀತಿ ಜಾರಿ



ವಿರಾಜಪೇಟೆ, ನ.30– ಸರ್ಕಾರಿ ಶಾಲೆ ಎಂದರೆ ಏನೂ ಇಲ್ಲ ಎಂದು ತಿಳಿದುಕೊಳ್ಳಬೇಡಿ. ದೇಶದ ಎಲ್ಲಾ ಮಹನೀಯರು ಶಿಕ್ಷಣ ಪಡೆದಿರುವುದೇ ಸರ್ಕಾರಿ ಶಾಲೆಗಳಲ್ಲಿ. ಗ್ರಾಮೀಣ ಪ್ರದೇಶದ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಎಲ್ಲಾ ರೀತಿಯ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಸರ್ಕಾರ ಮುಂದಾಗಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದರು.

ವಿರಾಜಪೇಟೆ ಬಳಿಯ ಹೆಗ್ಗಳ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ 37 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸಿದ್ದ ಎರಡು ನೂತನ ಕೊಠಡಿ ಉದ್ಘಾಟನೆ ಹಾಗೂ ದಾನಿಗಳಾದ ಗೋಲ್ಡನ್ ರಾಕ್ಸ್ ಮಾಲೀಕರಿಂದ ನಿರ್ಮಿಸಿದ್ದ ಶಾಲಾ ಪ್ರವೇಶದ್ವಾರ ಉದ್ಘಾಟಿಸಿ ನಂತರ ಕಂಪ್ಯೂಟರ್ ಕೇಂದ್ರ ಉದ್ಘಾಟಿಸಿದ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿ, ದೇಶದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ವರ್ಗದ ಜನರ ಅಭಿಪ್ರಾಯ ಪಡೆದು ಒಂದೇ ರೀತಿ ಶಿಕ್ಷಣ ನೀತಿ ಇರಬೇಕೆಂದು ದೇಶದಲ್ಲಿ ನೂತನ ಶಿಕ್ಷಣ ನೀತಿ ಜಾರಿಗೆ ತಂದಿರುವುದಾಗಿ ತಿಳಿಸಿದರು.

ಈ ಹಿಂದೆ ಜಿಲ್ಲಾ ಪಂಚಾಯಿತಿ ಸದಸ್ಯ ಮಹೇಶ್ ಈ ಶಾಲಾ ಕಟ್ಟಡ ನಿರ್ಮಿಸಲು ಬೇಡಿಕೆ ಇಟ್ಟಿದ್ದರು. ಶಾಲೆಗಳು ಅಭಿವೃದ್ಧಿ ಹೊಂದಲು ಗ್ರಾಮದ ಎಲ್ಲರ ಸಹಕಾರವು ಅಗತ್ಯ. ವಿದ್ಯಾರ್ಥಿಗಳು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಶಿಕ್ಷಣ ಪಡೆಯುವಂತಾಗಬೇಕು ಎಂದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಕನ್ನಡ ಭಾಷೆಗೆ ಮೊದಲ ಆದ್ಯತೆ ನೀಡಲಾಗಿದೆ. ಹಾಗೆಯೇ ಇಂಗ್ಲಿಷ್ ಭಾಷೆಯು ಬೇಕಾಗಿದೆ. ಶಿಕ್ಷಕರು ಮಕ್ಕಳ ಮನಸನ್ನು ಅರಿತುಕೊಂಡು ಅವರಿಗೆ ಪ್ರೋತ್ಸಾಹಿಸುವ ಮೂಲಕ ಸಹಕಾರ ನೀಡುತ್ತಿರುವುದು ಶ್ಲಾಘನೀಯ. ಗ್ರಾಮೀಣ ಪ್ರದೇಶದ ಮಕ್ಕಳು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುವಂತಾಗಲಿ ಎಂದು ಆಶಿಸಿದರು.

ಶಾಲಾ ಪ್ರವೇಶದ್ವಾರಕ್ಕೆ ಸಹಕಾರ ನೀಡಿದ ದಾನಿಗಳಾದ ಸಜೇಶ್ ಭರತನ್ ಹಾಗೂ ಪೂಜಾ ಸಜೇಶ್ ಮತ್ತು ಶಾಲೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು, ಕ್ರೀಡಾಪಟುಗಳಿಗೆ ಈ ಸಂದರ್ಭ ಅತಿಥಿಗಳು ಗೌರವಿಸಿದರು.

ವೇದಿಕೆಯಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ, ಶಿಕ್ಷಣ ಇಲಾಖೆಯ ವೇಧಮೂರ್ತಿ, ತಾಲೂಕು ಅಧಿಕಾರಿ ಶ್ರೀಶೈಲ ಬಿಳಗಿ, ವನಜಾಕ್ಷಿ, ಉತ್ತಪ್ಪ, ಬೆಟೋಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಬಿ.ಜಿ. ಯಶೋದ, ಸದಸ್ಯರಾದ ವಸಂತ್ ಕಟ್ಟಿ, ಬೋಪಣ್ಣ, ಮಾಜಿ ಅಧ್ಯಕ್ಷೆ ಚೋಂದಮ್ಮ, ಆರ್ಜಿ ಗ್ರಾಪಂ ಉಪಾಧ್ಯಕ್ಷ ಉಪೇಂದ್ರ, ಹೆಗ್ಗಳ ಗ್ರಾಮದ ಫರ್ಲಿಅಬ್ರಾಹ್ಮ, ಹಾಗೂ ಶಾಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶಾಲಾ ಮುಖ್ಯ ಶಿಕ್ಷಕಿ ಹೆಚ್.ಎಂ.ಸುನೀತಾ ಸ್ವಾಗತಿಸಿದರು. ಉಷರಾಣಿ ಮತ್ತು ಜ್ಯೋತಿ ನಿರೂಪಿಸಿದರೆ, ಸವಿತಾ ವಂದಿಸಿದರು.

ಕಾಂಗ್ರೆಸ್ ಹೆಚ್ಚಿನ ಮತ ಹಾಕಿಸುವಲ್ಲಿ ಶ್ರಮಿಸಿ

ಚಾಮರಾಜನಗರ, ನ.30– ಮುಂಬರುವ ಜಿಲ್ಲಾ ಹಾಗೂ ತಾಲೂಕು ಪಂಚಾಯತ್, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಮತಗಳು ಚಲಾವಣೆಯಾಗುವಂತೆ ಪಕ್ಷದ ಮುಂಚೂಣಿ ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು ಶ್ರಮಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಬೂತ್ ಮಟ್ಟದ ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಮತದಾರರ ಪಟ್ಟಿಯಲ್ಲಿ 6 ಸಾವಿರಕ್ಕೂ ಹೆಚ್ಚು ಮತದಾರರು ಕೈಬಿಟ್ಟು ಹೋಗಿದೆ ಎಂದು ಕೆಪಿಸಿಸಿಯಿಂದ ಮಾಹಿತಿ ಬಂದಿದೆ. ಕೆಲ ಮತದಾರರು ಮರಣ ಹೊಂದಿರಬಹುದು. ಜಿಲ್ಲೆಯಿಂದ ಜಿಲ್ಲೆಗೆ ಉದ್ಯೋಗದ ನಿಮಿತ್ತ ವಲಸೆ ಹೋಗಿರಬಹುದು, ಅಂತಹವರ ಬಗ್ಗೆ ಮಾಹಿತಿ ಕಲೆ ಹಾಕಿ ಮತಪಟ್ಟಿಗೆ ಸೇರ್ಪಡೆ ಮಾಡಬೇಕು. 18 ವರ್ಷ ಮೇಲ್ಪಟ್ಟ ಯುವಕ, ಯುವತಿಯರನ್ನು ಮತದಾನ ಮಾಡುವ ಸಂಬಂಧ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಇನ್ನು ಐದಾರು ತಿಂಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಿಲ್ಲೆಯ ನಾಲ್ಕು ವಿಧಾನಸಭೆ ಕ್ಷೇತ್ರಗಳಲ್ಲೂ ಗೆಲ್ಲುವಂತೆ ಮಾಡಬೇಕು. ಆ ಮೂಲಕ ಚಾಮರಾಜನಗರವನ್ನು ಕಾಂಗ್ರೆಸ್ ಭದ್ರಕೋಟೆಯಾಗಿ ಸಾಬೀತು ಮಾಡಬೇಕು ಎಂದರು.

ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಣೆ


ಇದೇ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ 68ನೇ ಹುಟ್ಟುಹಬ್ಬವನ್ನು ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಿದರು.

ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮದ್ ಅಸ್ಗರ್, ಎ.ಎಸ್.ಗುರುಸ್ವಾಮಿ, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ ಬಿಕಾಂ ಮಹದೇವ ನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಪಿ. ಸದಾಶಿವಮೂರ್ತಿ, ರಮೇಶ್, ಎಪಿಎಂಸಿ ಸದಸ್ಯ ಆಲೂರು ಪ್ರದೀಪ್, ನಗರಸಭೆ ಸದಸ್ಯರಾದ ಚಿನ್ನಮ್ಮ, ನೀಲಮ್ಮ, ಭಾಗ್ಯಮ್ಮ, ಮಹಿಳಾ ಘಟಕದ ಅಧ್ಯಕ್ಷೆ ಲತಾ ರಾಜಶೇಖರ್, ಗ್ರಾಮಾಂತರ ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ, ಶಾಂತಲ, ಪದ್ಮ ಪುರುಷೋತ್ತಮ್, ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಅಲಿಖಾನ್, ಮುಖಂಡರಾದ ನಸ್ರುಲ್ಲಖಾನ್, ರಿಯಾಜ್‌ಪಾಷಾ, ಅಯುಬ್ ಖಾನ್, ಕಾಗಲವಾಡಿ ಶಿವಸ್ವಾಮಿ, ನಾಗಯ್ಯ, ವೀರಭದ್ರ, ಬಸವಣ್ಣ, ರೂಪೇಶ್ ಅರಕಲವಾಡಿ ಸೋಮನಾಯ್ಕ, ಸಿ.ಎ.ಮಹದೇವಶೆಟ್ಟಿ ಎನ್.ಮಹದೇವಸ್ವಾಮಿ ಪುಟ್ಟಸ್ವಾಮಿ ಶಿವಕುಮಾರ್ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಡಿ.12, ಚಾ.ನಗರ ಜಿಲ್ಲೆಗೆ ಸಿಎಂ ಭೇಟಿ?

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ, ಉದ್ಘಾಟನೆ, ಸವಲತ್ತು ವಿತರಣೆ

ಸಿದ್ದಲಿಂಗಸ್ವಾಮಿ



ಚಾಮರಾಜನಗರ, ನ.30– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಡಿ.12 ರಂದು ಜಿಲ್ಲೆಗೆ ಎರಡನೇ ಬಾರಿ ಭೇಟಿ ನೀಡುತ್ತಿದ್ದಾರೆ.

ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯಾದ ಬಿ.ವಿ. ಚನ್ನಬಸವೇಶ ಅವರು ಈ ಬಗ್ಗೆ ನ.29 ರಂದು ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರ ಕೋರಿಕೆಯಂತೆ ಮುಖ್ಯಮಂತ್ರಿಗಳು ಡಿ.12 ರಂದು ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಲು ತಾತ್ಕಾಲಿಕವಾಗಿ ಒಪ್ಪಿದ್ದಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಕಾರ್ಯಕ್ರಮ ಆಯೋಜಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಅದೇ ದಿನ ಮಧ್ಯಾಹ್ನ 1 ಗಂಟೆಗೆ ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ. ಮಧ್ಯಾಹ್ನ 3 ಗಂಟೆಗೆ ಶ್ರೀ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಸಭೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.



ಇದು ಎರಡನೇ ಭೇಟಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲೆಗೆ ಭೇಟಿ ನೀಡುತ್ತಿರುವುದು ಇದು ಎರಡನೇ ಬಾರಿ. ಈ ಮೊದಲು 2021ರಂದು ಅ.7 ರಂದು ನಗರದ ಹೊರವಲಯದಲ್ಲಿರುವ ಯಡಬೆಟ್ಟದ ತಪ್ಪಲಿನಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 450 ಹಾಸಿಗೆಗಳ ನೂತನ ಬೋಧನಾ ಆಸ್ಪತ್ರೆ (ಸಿಮ್ಸ್ ಆಸ್ಪತ್ರೆ)ಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರಪತಿಗಳು ಹಾಗೂ ರಾಜ್ಯಪಾಲರು ಪಾಲ್ಗೊಂಡಿದ್ದರು.

ಪ್ಯಾಕೇಜ್ ನಿರೀಕ್ಷೆಯಲ್ಲಿ ಜನತೆ: ಮುಖ್ಯಮಂತ್ರಿಗಳು ಜಿಲ್ಲೆಗೆ ಎರಡನೇ ಬಾರಿಗೆ ಭೇಟಿ ನೀಡುತ್ತಿರುವುದರಿಂದ ಜಿಲ್ಲೆಯ ಜನರು ಅಪಾರ ನಿರೀಕ್ಷೆಯನ್ನು ಹೊಂದಿದ್ದಾರೆ. ಮುಖ್ಯಮಂತ್ರಿಗಳು ಜಿಲ್ಲೆಯ ಅಭಿವೃದ್ಧಿಗೆ ಅನುದಾನ ಘೋಷಿಸಬಹುದು. ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ನಾಂದಿ ಹಾಡಬಹುದು ಎಂಬ ಆಶಾಭಾವನೆಯನ್ನು ಜಿಲ್ಲೆಯ ಜನತೆ ಹೊಂದಿದ್ದಾರೆ.

ಸಿದ್ಧತೆ: ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಡಿಸೆಂಬರ್‌ನಲ್ಲಿ ಜಿಲ್ಲೆಗೆ ಮುಖ್ಯಮಂತ್ರಿಗಳು ಭೇಟಿ ನೀಡುತ್ತಾರೆ. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದರು. ಇದಲ್ಲದೇ ಎರಡು ಮೂರು ಬಾರಿ ಅಧಿಕಾರಿಗಳ ಸಭೆ ನಡೆಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದ್ದರು. ಹಾಗೂ ಮುಖ್ಯಮಂತ್ರಿಗಳ ವೇದಿಕೆ ಕಾರ್ಯಕ್ರಮಕ್ಕೆ ಸ್ಥಳ ಪರಿಶೀಲನೆ ನಡೆಸಿದ್ದರು. ಅಂತಿಮವಾಗಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಗಿದೆ. ಅದರಂತೆ ಕ್ರೀಡಾಂಗಣದಲ್ಲಿ ನಾನಾ ಸಿದ್ಧತಾ ಕಾರ್ಯಗಳು ಪ್ರಗತಿಯಲ್ಲಿವೆ. ಈ ನಡುವೆ ವಿ.ಸೋಮಣ್ಣ ಅವರು ಡಿ.3 ರಂದು ಜಿಲ್ಲೆಗೆ ಭೇಟಿ ನೀಡಿ ಅಧಿಕಾರಿಗಳು ಹಾಗೂ ಪಕ್ಷದ ಮುಖಂಡರ ಸಭೆ ನಡೆಸಲಿದ್ದಾರೆ.

ಇದೀಗ ಮುಖ್ಯಮಂತ್ರಿಗಳ ಜಿಲ್ಲೆಯ ಭೇಟಿ ದಿನಾಂಕ ತಾತ್ಕಾಲಿಕವಾಗಿ ಸಿದ್ಧಗೊಂಡಿರುವುದರಿಂದ ಸಿದ್ಧತಾ ಕಾರ್ಯಗಳು ಮತ್ತಷ್ಟು ಬಿರುಸುಗೊಳ್ಳಲಿವೆ.

> "ಮುಖ್ಯಮಂತ್ರಿಗಳು ಸಿಮ್ಸ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭಕ್ಕೆ ನಗರಕ್ಕೆ ಬಂದಿದ್ದ ವೇಳೆಯಲ್ಲಿಯೇ ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕಾಗಿತ್ತು. ಚುನಾವಣಾ ಸಂದರ್ಭದಲ್ಲಿ ಈಗ ಮುಖ್ಯಮಂತ್ರಿಗಳು ಬರುತ್ತಿರುವುದರಿಂದ ಏನೂ ಪ್ರಯೋಜನ ಆಗದು. ಅಭಿವೃದ್ಧಿ ಕಾರ್ಯಗಳು ಸಹ ಚುನಾವಣಾ ವೇಳೆವರೆಗೆ ಮುಗಿಯುವುದಿಲ್ಲ. ಮುಖ್ಯಮಂತ್ರಿಗಳು ಬಂದಾಗ ಹಳೇ ಕಾಮಗಾರಿಗಳನ್ನು ಉದ್ಘಾಟಿಸಬೇಕಷ್ಟೆ.
> –ಸಿ.ಪುಟ್ಟರಂಗಶೆಟ್ಟಿ, ಶಾಸಕರು.

ಜೀಪಿನಿಂದ ತಳ್ಳಿ ಕೊಲೆ ಎಂದು ಆರೋಪಿಸಿ ಪೋಷಕರು, ಗ್ರಾಮಸ್ಥರ ಪ್ರತಿಭಟನೆ



ಚಾಮರಾಜನಗರ, ನ.30– ಪೊಲೀಸ್ ವಶದಲ್ಲಿದ್ದ ವ್ಯಕ್ತಿ ಜೀಪಿನಲ್ಲಿ ಕರೆದೊಯ್ಯುತ್ತಿದ್ದಾಗ ಹಾರಿ ಸಾವನ್ನಪ್ಪಿರುವ ಬಗ್ಗೆ ಹಲವು ಅನುಮಾನಗಳಿದ್ದು ಪೊಲೀಸರೇ ಹೊಡೆದು ಜೀಪಿನಿಂದ ಕೆಳಗೆ ತಳ್ಳಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಪೋಷಕರು ಮತ್ತು ಗ್ರಾಮಸ್ಥರು ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿದರು.

ಕೊಳ್ಳೇಗಾಲ ತಾಲೂಕಿನ ಕುಂತೂರು ಮೋಳೆ ಗ್ರಾಮದ ಉಪ್ಪಾರ ಬಡಾವಣೆಯ ನಂಜುಂಡಶೆಟ್ಟಿ ಎಂಬುವರ ಮಗ ನಿಂಗರಾಜು ಇದೇ ಗ್ರಾಮದ ಇದೇ ಸಮುದಾಯದ 16 ವರ್ಷದ ಯುವತಿಯನ್ನು ಪ್ರೀತಿಸುತ್ತಿದ್ದು, ನಾಪತ್ತೆಯಾಗಿದ್ದರು. ಈ ಬಗ್ಗೆ ತಾಲೂಕಿನ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ನಿಂಗರಾಜು ನನ್ನ ಮಗಳನ್ನು ಕರೆದೊಯ್ದಿದ್ದಾನೆ ಎಂದು ಅನುಮಾನವಿದೆ ಎಂದು ಯುವತಿಯ ತಂದೆ ಮಾದೇಶ್ ದೂರು ನೀಡಿದ್ದರು.

ಈ ಬಗ್ಗೆ ತನಿಖೆ ಆರಂಭಿಸಿದ ಪೊಲೀಸರು ನಿಂಗರಾಜುವನ್ನು ಪತ್ತೆ ಹಚ್ಚಿದ್ದಾರೆ. ನಂತರ ಇವರ ಜೀಪಿನಲ್ಲಿ ಯಳಂದೂರು ಪೊಲೀಸ್ ಠಾಣೆಗೆ ಕರೆತಂದಿದ್ದಾರೆ. ಇಲ್ಲಿ ವಿಚಾರಣೆ ನಡೆಸಿ ಮಾಂಬಳ್ಳಿ ಪೊಲೀಸ್ ಠಾಣೆಗೆ ಪೊಲೀಸ್ ಜೀಪಿನಲ್ಲಿ ಕರೆದೊಯ್ಯುತ್ತಿದ್ದ ವೇಳೆ ಈತ ಯರಿಯೂರು ಗ್ರಾಮದ ಬಳಿ ಜೀಪಿನಿಂದ ನೆಗೆದಿದ್ದು ಈತನ ತಲೆ ಸೇರಿದಂತೆ ದೇಹದ ಇತರ ಭಾಗಗಳಿಗೆ ಪೆಟ್ಟಾಗಿತ್ತು. ಕೂಡಲೇ ಪೊಲೀಸರು ಜೀಪಿನಲ್ಲಿ ಯಳಂದೂರಿನ ಸಾರ್ವಜನಿಕ ಆಸ್ಪತ್ರೆಗೆ ಕರೆತಂದಿದ್ದಾರೆ. ಆದರೆ ಇಷ್ಟೊತ್ತಿಗಾಗಲೇ ನಿಂಗರಾಜು ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ತಿಳಿಸಿದ್ದಾರೆ.

ಪೊಲೀಸರು ಕೊಲೆ ಮಾಡಿದ್ದಾರೆ : ನಿಂಗರಾಜು ಜೀಪಿನಿಂದ ಹಾರಿ ಮೃತಪಟ್ಟಿಲ್ಲ. ಈತನಿಗೆ ಯಳಂದೂರು ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಕರೆತಂದು ಚಿತ್ರಹಿಂಸೆ ನೀಡಿದ್ದು ಅಲ್ಲೇ ಈತನ ಪ್ರಾಣಪಕ್ಷಿ ಹಾರಿ ಹೋಗಿದೆ. ನಂತರ ಮಾಂಬಳ್ಳಿ ಪೊಲೀಸ್ ಠಾಣೆಗೆ ಈತನನ್ನು ಜೀಪಿನಲ್ಲಿ ಕುಳ್ಳಿರಿಸಿ ಇವರೇ ಬೇಕಂತಲೇ ಜೀಪಿನಿಂದ ತಳ್ಳಿದ್ದಾರೆ ಎಂದು ಗ್ರಾಮಸ್ಥರು ಹಾಗೂ ಉಪ್ಪಾರ ಮುಖಂಡರು ಆರೋಪಿಸಿ ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಅಲ್ಲದೆ, ವಿಚಾರಣೆ ವೇಳೆಯಲ್ಲಿ ಒಬ್ಬ ವ್ಯಕ್ತಿಯ ಪ್ರಾಣ ಹೋಗಿರುವುದು ಹಲವು ಅನುಮಾನಗಳಿಗೆ ಆಸ್ಪದ ನೀಡುವಂತಿದೆ. ಇದರ ಬಗ್ಗೆ ತನಿಖೆಯಾಗಬೇಕು. ಈ ಸಾವು ಹಲವು ಅನುಮಾನಗಳಿಗೆ ಆಸ್ಪದ ನೀಡುವಂತಿದೆ. ಹಾಗಾಗಿ ಮೃತನ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕು, ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟಿಸಿದರು.

ಸಿಪಿಐ ಶಿವಮಾದಯ್ಯ ಅಮಾನತು ರದ್ದುಪಡಿಸಲು ಆಗ್ರಹಿಸಿ ದಲಿತ ಸಂಘಟನೆ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ

ಚಾಮರಾಜನಗರ, ನ.30– ಪೊಲೀಸ್ ವಾಹನದಿಂದ ಜಿಗಿದು ಕುಂತೂರು ಮೋಳೆ ನಿವಾಸಿ ಲಿಂಗರಾಜು ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಮಾನತುಗೊಂಡಿರುವ ಯಳಂದೂರು ಪೊಲೀಸ್ ಠಾಣೆ ಸಿಪಿಐ ಶಿವಮಾದಯ್ಯ ಅವರ ಅಮಾನತು ಆದೇಶವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿ ದಲಿತ ಮತ್ತು ಪ್ರಗತಿ ಪರ ಸಂಘಟನೆಗಳು ಯಳಂದೂರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪತ್ರಿಭಟನೆ ನಡೆಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಿಂದ ದಲಿತ ಸಂಘಟನೆಗಳು ಮೌನ ಮೆರವಣಿಗೆ ಹೊರಟು ಯಳಂದೂರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಅಮಾನತುಗೊಂಡಿರುವ ಸಿಪಿಐ ಶಿವಮಾದಯ್ಯ ಅವರ ಅಮಾನತು ಆದೇಶ ಮತ್ತು ಕೊಲೆ ಪ್ರಕರಣದ ದೂರನ್ನು ಸಂಬಂಧಿಕರು ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯ ಮಾಡಿದರು.

ನಂತರ ಮಾತನಾಡಿದ ಶಾಸಕ ಎನ್.ಮಹೇಶ್ ಬೆಂಬಲಿಗ ಮಾಂಬಳ್ಳಿ ರಾಮಣ್ಣ ಒಬ್ಬ ದಲಿತ ಪೊಲೀಸ್ ಅಧಿಕಾರಿಗೆ ರಕ್ಷಣೆ ಇಲ್ಲವಾಗಿದೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ, ಆದರೆ ಪ್ರಕರಣದಲ್ಲಿ ಯಾವುದೇ ಪಾತ್ರವಿಲ್ಲದ ಸಿಪಿಐ ಶಿವಮಾದಯ್ಯ ಅವರು ಒಬ್ಬ ದಲಿತ ಅಧಿಕಾರಿ ಎಂದು ಏಕಾಏಕಿ ಅಮಾನತು ಮಾಡಿರುವುದು ಸರಿಯಲ್ಲ ಎಂದರು.

ಹೋರಾಟ ತೀವ್ರ : ದಲಿತರ ಮೇಲೆ ಈ ರೀತಿ ಅನಗತ್ಯವಾಗಿ ಅನ್ಯಾಯವಾಗುತ್ತಿರುವುದರಿಂದ ರಾಜ್ಯವ್ಯಾಪ್ತಿ ಪ್ರತಿ ತಾಲೂಕು ಕೇಂದ್ರಗಳಲ್ಲೂ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಮುಖಂಡ ಮದ್ದೂರು ಸಾಂಗ್ಲಿಯಾನ ಎಚ್ಚರಿಕೆ ನೀಡಿದರು.

ಎಸ್ಪಿ ಬರಬೇಕು: ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಬೇಕು ಮತ್ತು ಶಿವಮಾದಯ್ಯ ಅವರ ಅಮಾನತು ಆದೇಶ ರದ್ದು ಪಡಿಸಬೇಕೆಂದು ಆಗ್ರಹಿಸಿದರು.



ಶಾಸಕ ಪುಟ್ಟರಂಗಶೆಟ್ಟಿ ಅವರ ಹುಟ್ಟುಹಬ್ಬದ ಅಂಗವಾಗಿ ಚಾಮರಾಜನಗರ ಎಪಿಎಂಸಿ ಸದಸ್ಯ ಆಲೂರು ಪ್ರದೀಪ್ ಅವರು ತಮ್ಮ ಬೆಂಬಲಿಗರು ಮತ್ತು ಕಾಂಗ್ರೆಸ್ ಮುಖಂಡರೊಂದಿಗೆ ಶಾಸಕರನ್ನು ಅಭಿನಂದಿಸಿದರು



ಶಾಸಕ ಪುಟ್ಟರಂಗ ಶೆಟ್ಟಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ರಾಜ್ಯ ಕನಿಷ್ಠ ವೇತನ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ ಅವರು ಪುಟ್ಟರಂಗಶೆಟ್ಟಿಯವರನ್ನು ಅಭಿನಂದಿಸಿದರು.

ಇಂದಿನಿಂದ ಎಪಿಎಂಸಿಯಲ್ಲಿ ತರಕಾರಿ ವ್ಯಾಪಾರ ವಹಿವಾಟು ಆರಂಭ

ಚಾಮರಾಜನಗರ, ನ.30– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ರೈತರು, ಪೇಟೆ ಕಾರ್ಯಕರ್ತರು ಸಾರ್ವಜನಿಕರ ಅನುಕೂಲಕ್ಕಾಗಿ ಡಿ.1 ರಿಂದ ಪ್ರತಿ ದಿನ ಬೆಳಿಗ್ಗೆ 7 ಗಂಟೆಯಿಂದ ತರಕಾರಿ ವ್ಯಾಪಾರ ವಹಿವಾಟು ಪ್ರಾರಂಭಿಸಲಾಗುತ್ತಿದ್ದು, ರೈತರು, ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಮನೋಜ್ ಪಟೇಲ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಹರ್ಷಿ ವಾಲ್ಮೀಕಿ ನಾಯಕರ ಮಹಾವೇದಿಕೆಗೆ ನೇಮಕ



ಚಾಮರಾಜನಗರ, ನ.30– ಮಹರ್ಷಿ ವಾಲ್ಮೀಕಿ ನಾಯಕರ ಮಹಾವೇದಿಕೆಯ ನೂತನ ಜಿಲ್ಲಾಧ್ಯಕ್ಷರಾಗಿ ಕೆ.ಪರಶಿವಮೂರ್ತಿ ನೇಮಕಗೊಂಡಿದ್ದಾರೆ.

ಮಹರ್ಷಿ ವಾಲ್ಮೀಕಿ ನಾಯಕರ ಮಹಾವೇದಿಕೆಯು ಪರಶಿವಮೂರ್ತಿ ಅವರ ಕ್ರಿಯಾಶೀಲ ಸಂಘಟನಾ ಸಾಮರ್ಥ್ಯ, ಸಮಾಜದ ಬಗ್ಗೆ ಇರುವ ಕಳಕಳಿ ಸಂಘಟನಾ ಮನೋಭಾವನೆಗಳನ್ನು ಗುರುತಿಸಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಹಾವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಹೆಚ್. ಚಂದ್ರಪ್ಪ ಸೂಚನೆ ಮೇರೆಗೆ ಈ ನೇಮಕ ಮಾಡಲಾಗಿದೆ.

ಮೂರನೇ ಪುಟದಿಂದ

ನನ್ನ ಹೋರಾಟವೇ ಕಾರಣವಾಯ್ತು....

ಹಂಚುವ ಕೆಲಸ ಮಾಡಿದೆ. ಆಗ ವಿಶ್ರಾಂತ ಕುಲಪತಿ ದೇಜಗೌ ಅವರ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ವಿ. ಕನಕದಾಸರ ಕುರಿತು ಸಣ್ಣ ಕೈಪಿಡಿ ಮಾಡಿ ಹಂಚಲಾಯಿತು.

ಅದಾದ ನಂತರ ಕನಕ ಜಯಂತಿಯನ್ನು ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ಆಚರಿಸಲು ಶುರು ಮಾಡಿದರು. ಅಲ್ಲಿಯವರೆಗೆ ಕನಕದಾಸರಿಗೆ ಅಷ್ಟು ಪ್ರಾಮುಖ್ಯತೆ ಸಿಕ್ಕಿರಲಿಲ್ಲ. ನಾನು 1989ರಲ್ಲಿ ಸೋತೆ. 89ರಿಂದ 94ರವರೆಗೆ ಫ್ರೀಯಾಗಿದ್ದೆ. ಆಗ ಇಡೀ ರಾಜ್ಯದಲ್ಲಿ ಸುತ್ತಾಡಿ, ಎಲ್ಲ ಕಡೆ ಕನಕ ಜಯಂತಿ ಆಚರಣೆ ಮಾಡುವಂತೆ ಮಾಡಿದೆ. ಅದಾದ ಬಳಿಕ ನಮ್ಮ ಸಮಾಜದಲ್ಲಿ ಜಾಗೃತಿ ಮೂಡಲು ಶುರುವಾಯಿತು. ಕುರುಬರು ಎಂದು ಹೇಳಿಕೊಳ್ಳಲು ನಾಚಿಕೆಪಡುತ್ತಿದ್ದ ಕಾಲವದು. ಎಲ್ಲೆಡೆ ಕನಕ ಜಯಂತಿ ಮಾಡಿದ ನಂತರ ಕುರುಬರಲ್ಲಿದ್ದ ಭಯ ಹೋಗಿ, ನಾನು ಕುರುಬ ಎಂದು ಎದೆ ತಟ್ಟಿಕೊಂಡು ಹೇಳಿಕೊಳ್ಳುವಂತಾಯಿತು ಎಂದು ಸಿದ್ದರಾಮಯ್ಯ ಹೇಳಿದರು.

ಅಂಬೇಡ್ಕರ್ ಸಂವಿಧಾನದಿಂದ ನಾವಿಂದು ವಿದ್ಯೆ ಕಲಿಯುತ್ತಿದ್ದೇವೆ: ಯಾರಿಗೆ ಇತಿಹಾಸ ಗೊತ್ತಿಲ್ಲವೋ ಅವರು ಭವಿಷ್ಯ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, ನೋವು ಅನುಭವಿಸದವರಿಗೆ ಏನು ಗೊತ್ತಾಗುತ್ತದೆ. ನೋವು ಗೊತ್ತಿದ್ದವರು, ಅನುಭವಿಸಿದವರು ಸಮಾಜ ಬದಲಾವಣೆ ಹೇಗೆ ಮಾಡುತ್ತಾರೆ. ಹೆಜ್ಜೆ ಹೆಜ್ಜೆಗೂ ಅವಮಾನ ಉಂಡವರು ಕನಕದಾಸರು. ಮಂತ್ರ ಕಲಿಯಲೆಂದು ವ್ಯಾಸರಾಜರ ಬಳಿ ಕನಕದಾಸರು ಹೋದಾಗ, ನೀನು ಕುರುಬ, ನಿನಗೇಕೆ ಮಂತ್ರ ಎಂದು ಹಿಯ್ಯಾಳಿಸಿದ್ದರು. ಬರೀ ಮಂತ್ರ ಅಷ್ಟೇ ಅಲ್ಲ, ವಿದ್ಯೆ ಕಲಿಯಲೂ ಅಂದು ಅವಕಾಶ ಇರಲಿಲ್ಲ. ಆದರೆ ಇಂದು ನಾವು ವಿದ್ಯೆ ಕಲಿಯುತ್ತಿದ್ದೇವೆ ಎಂದರೆ ಅದಕ್ಕೆ ಕನಕದಾಸರ ಹೋರಾಟ ಹಾಗೂ ಡಾ.ಅಂಬೇಡ್ಕರ್ ಅವರ ಸಂವಿಧಾನದಿಂದ ಸಾಧ್ಯವಾಗಿದೆ ಎಂದರು.

ಇಂದಿಗೂ ಉಳಿದಿರುವ ಜಾತಿ ವ್ಯವಸ್ಥೆ: ಜಾತಿ ವ್ಯವಸ್ಥೆ ಹೋಗಲಾಡಿಸಲು ಅನೇಕ ಸುಧಾರಣಾವಾದಿಗಳು ಪ್ರಯತ್ನ ಮಾಡಿದ್ದರೂ ಕೂಡ ಇಂದಿಗೂ ಅದು ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದ ಸಿದ್ದರಾಮಯ್ಯ, ವ್ಯವಸ್ಥೆ ವಿರುದ್ಧ ದನಿ ಎತ್ತಿದವರು ಬುದ್ಧ, ಬಸವ, ಕನಕದಾಸ, ಬಸವಣ್ಣ, ಮಹಾತ್ಮ ಗಾಂಧಿ, ಅಂಬೇಡ್ಕರ್. ಜಾತ್ಯತೀತ ಸಮಾಜ ನಿರ್ಮಾಣದ ಕನಸು ಕಂಡಿದ್ದವರು. ಯಾವ ವ್ಯವಸ್ಥೆಗೆ ಚಲನೆ ಇಲ್ಲವೋ ಅಲ್ಲಿ ಬದಲಾವಣೆ ಸಾಧ್ಯವಿಲ್ಲ. ಎಲ್ಲಿ ಚಲನೆ ಇರುತ್ತದೆಯೋ ಅಲ್ಲಿ ಬದಲಾವಣೆ ಸಾಧ್ಯ. ಅದಕ್ಕಾಗಿ ಎಲ್ಲರೂ ಸಾಮಾಜಿಕವಾಗಿ, ಆರ್ಥಿಕವಾಗಿ ಶಕ್ತಿವಂತರಾಗಬೇಕು. ನೀವೆಲ್ಲರೂ ಬದಲಾವಣೆಗೆ ಪ್ರಯತ್ನ ಮಾಡಬೇಕು ಎಂದು ಸಿದ್ದರಾಮಯ್ಯ ಕರೆ ನೀಡಿದರು.

ಶೋಷಣೆ ಮಾಡುತ್ತಲೇ ಇರುತ್ತಾರೆ: ಪಟ್ಟಭದ್ರ ಹಿತಾಸಕ್ತಿಗಳು, ಬದಲಾವಣೆ ಬೇಡ ಎನ್ನುವವರು ಆರ್‌ಎಸ್‌ಎಸ್‌ನವರು. ಅವರಿಗೆ ಬದಲಾವಣೆ ಬೇಕಾಗಿಲ್ಲ. ಸಂಘ ಪರಿವಾರದವರಿಗೂ ಬದಲಾವಣೆ ಬೇಕಿಲ್ಲ. ಅವರಿಗೆ ಅಸಮಾನತೆ ಉಳಿಯಬೇಕು. ಅದರ ಮೂಲಕ ಜನರನ್ನು ತುಳಿದು, ಶೋಷಣೆ ಮಾಡುತ್ತಲೇ ಇರುತ್ತಾರೆ ಎಂದರು.

ಸಾಮಾಜಿಕ ಅವ್ಯವಸ್ಥೆಯ ವಿರುದ್ಧ ಮಾತನಾಡಬೇಕು: ನಾನು ಶಾಸಕರ ಭವನದ ಎದುರು ಮಹರ್ಷಿ ವಾಲ್ಮೀಕಿ, ಕನಕದಾಸರ ಪ್ರತಿಮೆ ಹಾಕಿಸಿದೆ. ಅದರ ಅದರ ಲಾಭ ಪಡೆಯುತ್ತಿದ್ದಾರೆ. ಸಮಾಜಕ್ಕೆ ಬುದ್ಧ, ಬಸವ, ಅಂಬೇಡ್ಕರ್, ಕನಕ, ಗಾಂಧೀಜಿಯವರ ಕೊಡುಗೆ ಏನು? ಕನಕದಾಸರ ಜಯಂತಿ ಏಕೆ ಮಾಡುತ್ತಿದ್ದೇವೆ ಎಂಬುದರ ಬಗ್ಗೆ ಎಲ್ಲರೂ ಚಿಂತಿಸಬೇಕು. ಎಲ್ಲರೂ ವಿಚಾರಶೀಲರಾಗಿ ಇದರ ಬಗ್ಗೆ ಹೆಚ್ಚು ಚರ್ಚೆಗಳಾಗಬೇಕು. ಕುಲಕುಲವೆಂದು ಹೊಡೆದಾಡದಿರಿ ಎಂದ ಕನಕದಾಸರ ಬಗ್ಗೆ ಹಾಗೂ ಇವನಾರವ...ಇವನಾರವ... ಇವ ನಮ್ಮವ, ಇವ ನಮ್ಮವ ಎಂದ ಬಸವಣ್ಣನವರ ವಿಚಾರಗಳನ್ನು ಅರಿಯಬೇಕು. ಇಂದಿನ ಸಾಮಾಜಿಕ ಅವ್ಯವಸ್ಥೆಯ ವಿರುದ್ಧ ಮಾತನಾಡುವ ಕೆಲಸ ಆಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಮುದಾಯದ ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಿದ್ದರಾಮಯ್ಯ ಪುರಸ್ಕರಿಸಿದರು.

ಕಾರ್ಯಕ್ರಮದಲ್ಲಿ ಕಾಗಿನೆಲೆ ಕನಕಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಕೆ.ಆರ್.ನಗರ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮುಖ್ಯ ಭಾಷಣ ಮಾಡಿದರು. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕರ್ನಾಟಕ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪದಾಧಿಕಾರಿಗಳಾದ ದೇವರಾಜ ಸುಬ್ಬರಾಯಪ್ಪ, ಪ್ರಭಾವತಿ, ಭಗವಂತರಾಯ ಪಾಟೀಲ್, ಜಿಲ್ಲಾಧ್ಯಕ್ಷ ಕೋಟೆ ಶಿವಪ್ಪ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ರವಿಶಂಕರ್, ರಾಕೇಶ್ ಪಾಪಣ್ಣ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಭಾಷಣಗಳು ಸಂಪುಟಗಳಲ್ಲಿ ಹೊರ ಬರಲಿ: ಪ್ರೊ.ಅರವಿಂದ ಮಾಲಗತ್ತಿ

ಸಿದ್ದರಾಮಯ್ಯ ಭಾಷಣಗಳು ಸಂಪುಟಗಳಲ್ಲಿ ಹೊರ ಬರಲಿ ಎಂದು ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು. ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಕನಕದಾಸರ 535ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಅವರು, ಕನಕದಾಸರು ಪ್ರೀತಿಯಿಂದ ಜಗತ್ತನ್ನು ಗೆಲ್ಲಬಹುದು. ಪ್ರೀತಿ ಇಲ್ಲದೆ ಏನು ಮಾಡಲು ಸಾಧ್ಯವಿಲ್ಲ ಎಂಬುದನ್ನು ಕನಕದಾಸರು ತಮ್ಮ ಕಾವ್ಯದ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರು ಸ್ವಾಭಿಮಾನದ ಪ್ರತೀಕ. ಅದೇ ಹಾದಿಯಲ್ಲಿ ಸಿದ್ದರಾಮಯ್ಯ ನಡೆಯುತ್ತಿದ್ದು, ಸ್ವಾಭಿಮಾನಿಯಾಗಿ, ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಎಂದರು.

ಅದ್ದೂರಿ ಕನಕ ಜಯಂತಿ ಮೆರವಣಿಗೆ

ನಾನಾ ಜಾನಪದ ಕಲಾತಂಡಗಳು ಭಾಗಿ




ಮೈಸೂರು, ನ.30(ಆರ್‌ಕೆ.ಬಿ)– ಕನಕ ಜಯಂತಿ ಅಂಗವಾಗಿ ಮೈಸೂರಿನಲ್ಲಿ ಬುಧವಾರ ಕನಕದಾಸರ ಪ್ರತಿಮೆಯ ಬೃಹತ್ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಮೈಸೂರು ಜಿಲ್ಲಾ ಮತ್ತು ತಾಲೂಕು ಘಟಕಗಳು ಆಯೋಜಿಸಿದ್ದ ಕನಕದಾಸರ 535ನೇ ಜಯಂತ್ಯೋತ್ಸವದ ಅಂಗವಾಗಿ ವರ್ಣರಂಜಿತ ಮೆರವಣಿಗೆ ನಡೆಸಲಾಯಿತು. ಮೈಸೂರಿನ ವಿನೋಬ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದಿಂದ ಆರಂಭವಾದ ಮೆರವಣಿಗೆಗೆ ಕಾಗಿನೆಲೆ ಕನಕಗುರು ಪೀಠದ ಶ್ರೀ ನಿರಂಜನಾನಂದಪುರ ಸ್ವಾಮೀಜಿ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ 108 ಮಹಿಳೆಯರು ಕಲಶ ಹೊತ್ತು ಸಾಗಿದರು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಕಂಸಾಳೆ ನೃತ್ಯ, ಗೊರವರ ಕುಣಿತ, ಪೂಜಾ ಕುಣಿತ, ಗಾರುಡಿ ಗೊಂಬೆ, ವಿವಿಧ ವಾದ್ಯ ಮೇಳ ಸೇರಿದಂತೆ ನಾನಾ ಜಾನಪದ ಕಲಾತಂಡಗಳು ಗಮನ ಸೆಳೆದವು. ಮೆರವಣಿಗೆಯ ಮುಂಚೂಣಿಯಲ್ಲಿ ಶ್ರೀ ನಿರಂಜನಾನಂದ ಸ್ವಾಮೀಜಿ ಅವರು ಅಲಂಕೃತ ಬೆಳ್ಳಿ ರಥದಲ್ಲಿ ಕುಳಿತು ಬಿಜಯಂಗೈದರೆ, ಮತ್ತೆರಡು ಬೆಳ್ಳಿ ರಥದಲ್ಲಿ ಕನಕದಾಸರು ಹಾಗೂ ಸಂಗೊಳ್ಳಿ ರಾಯಣ್ಣರ ಪ್ರತಿಮೆಗಳಿದ್ದವು. ಮೆರವಣಿಗೆ ವೇಳೆ ಸಂಘದ ವತಿಯಿಂದ ಹಣ್ಣು, ನೀರು, ಮಜ್ಜಿಗೆ ವಿತರಿಸಲಾಯಿತು. ಕರ್ನಾಟಕ ಕುರುಬರ ಸಂಘ ಮತ್ತು ಜಿಲ್ಲಾ ಹಾಗೂ ತಾಲೂಕು ಸಂಘಗಳ ಪದಾಧಿಕಾರಿಗಳು, ಕುರುಬ ಸಮಾಜದ ರಾಜಕೀಯ ಮುಖಂಡರು, ಇನ್ನಿತರರು ಉಪಸ್ಥಿತರಿದ್ದರು. ಮೆರವಣಿಗೆ ಹುಣಸೂರು ರಸ್ತೆ ಮೂಲಕ ವೇದಿಕೆ ಕಾರ್ಯಕ್ರಮ ಆಯೋಜಿಸಿದ್ದ ಕಲಾಮಂದಿರ ಆವರಣ ತಲುಪಿತು.

75 ಕೆಜಿ ಕೇಕ್ ಕತ್ತರಿಸಿದ ಸಿದ್ದರಾಮಯ್ಯ



ಮೈಸೂರು, ನ.30(ಆರ್‌ಕೆಬಿ)– ಕಳೆದ ಆಗಸ್ಟ್ ತಿಂಗಳಲ್ಲಿ ತಮ್ಮ 75ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಸಿದ್ಧರಾಮಯ್ಯ ಅವರಿಗೆ ಬುಧವಾರ ಮೈಸೂರಿನ ಕಲಾಮಂದಿರದಲ್ಲಿ ಅಚ್ಚರಿ ಕಾದಿತ್ತು. ಕುರುಬರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಕನಕ ಜಯಂತಿ ಕಾರ್ಯಕ್ರಮದಲ್ಲಿ 75 ಕೆಜಿ ತೂಕದ ಬೃಹತ್ ಕೇಕ್ ಸಿದ್ದರಾಮಯ್ಯರಿಗಾಗಿ ಶುಭ ಕೋರಲು ಇಡಲಾಗಿತ್ತು. ಅದರ ಮೇಲೆ ಮುಂದಿನ ಮುಖ್ಯಮಂತ್ರಿ ಸನ್ಮಾನ್ಯ ಸಿದ್ದರಾಮಯ್ಯ ವರವ 75ನೇ ವರ್ಷದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು ಎಂದು ಬರೆಯಲಾಗಿತ್ತು.

ಸಿದ್ದರಾಮಯ್ಯ ಅವರು, ಸಮುದಾಯದ ಸ್ವಾಮೀಜಿಗಳು, ಮುಖಂಡರ ಸಮ್ಮುಖದಲ್ಲಿ 7X4 ಅಡಿ ಅಳತೆಯ ಈ ಬೃಹತ್ ಕೇಕ್ ಅನ್ನು ಕತ್ತರಿಸಿದರು.

ನರೇಗಾ ಯೋಜನೆಯಡಿ ಅಧಿಕ ಜನರಿಗೆ ಉದ್ಯೋಗ

ಅಧಿಕಾರಿಗಳಿಗೆ ಜಿಪಂ ಸಿಇಓ ಪೂರ್ಣಿಮಾ ಸಲಹೆ



ಮೈಸೂರು, ನ.30(ಎಂಕೆ)– ನರೇಗಾ ಯೋಜನೆಯಡಿ ಹೆಚ್ಚಿನ ಜನರಿಗೆ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ ಸೂಚಿಸಿದರು.

ಪಿರಿಯಾಪಟ್ಟಣ ತಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ 'ಪ್ರಗತಿ ಪರಿಶೀಲನೆ ಸಭೆ' ನಡೆಸಿದ ಅವರು, ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಲು ನರೇಗಾ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ಜನರಿಗೆ ಉದ್ಯೋಗ ಒದಗಿಸಿಕೊಡಬೇಕು. ಇದರ ಜೊತೆಗೆ ದೀರ್ಘಕಾಲ ಬಾಳಿಕೆ ಬರುವಂತಹ ಸಾರ್ವಜನಿಕ ಆಸ್ತಿಗಳನ್ನು ನಿರ್ಮಾಣ ಮಾಡಬೇಕು ಎಂದು ಹೇಳಿದರು.

ನಿಗದಿತ ಸಮಯಕ್ಕೆ ಕೂಲಿ ಪಾವತಿ, ಜಾಬ್‌ಕಾರ್ಡ್ ಪರಿಶೀಲಿಸಿ, ಮೃತಪಟ್ಟವರ ಹೆಸರನ್ನು ಜಾಬ್ ಕಾರ್ಡ್‌ನಿಂದ ತೆಗೆಯುವುದು ಹಾಗೂ ಕಾಮಗಾರಿಯ ಗುಣಮಟ್ಟದ ಫೋಟೊಗಳ ಜೊತೆಗೆ ಅಗತ್ಯ ದಾಖಲೆಗಳನ್ನು ಕಡತಗಳಲ್ಲಿ ದಾಖಲಿಸಿ. ನಿಗದಿತ ಸಮಯದಲ್ಲಿ ಸಕಾಲ ಅರ್ಜಿಗಳನ್ನು ವಿಲೇವಾರಿ ಮಾಡಬೇಕು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಯುವಕರು ಮಾತ್ರವಲ್ಲದೇ ವೃದ್ಧರು ಗ್ರಂಥಾಲಯದಲ್ಲಿ ದಿನಪತ್ರಿಕೆಗಳನ್ನು ಓದುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧರಾಗುತ್ತಿರುವವರಿಗೂ ಗ್ರಂಥಾಲಯ ಅನುಕೂಲವಾಗಿದೆ. ಈ ನಿಟ್ಟಿನಲ್ಲಿ ಡಿಜಿಟಲ್ ಗ್ರಂಥಾಲಯಕ್ಕೆ ಹೆಚ್ಚಿನ ಒತ್ತು ನೀಡಿ. ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ಉತ್ತಮ ಪುಸ್ತಕಗಳು, ದಿನಪತ್ರಿಕೆಗಳು, ನಿಯತಕಾಲಿಕೆಗಳನ್ನು ಒದಗಿಸುವಂತೆ ಸಲಹೆ ನೀಡಿದರು. ಸಭೆಯಲ್ಲಿ ತಾಪಂ ಅಧಿಕಾರಿಗಳಾದ ಸಿ.ಆರ್.ಕೃಷ್ಣಕುಮಾರ್, ಸಹಾಯಕ ನಿರ್ದೇಶಕ ಕರುಣಾಕರ್ ಸೇರಿದಂತೆ ಅನುಷ್ಠಾನ ಇಲಾಖೆ ಅಧಿಕಾರಿಗಳು, ಪಿಡಿಓಗಳು, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕ ಅಭಿಯಂತರರು, ಡಿಇಓಗಳು, ಬಿಎಫ್‌ಟಿಗಳು ಉಪಸ್ಥಿತರಿದ್ದರು.

ಕಾಮಗಾರಿ ಪರಿಶೀಲನೆ: ಸಭೆ ಬಳಿಕ ನರೇಗಾ ಯೋಜನೆಯಡಿ ಕಂಪಲಾಪುರ ಗ್ರಾಪಂ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಕಾಂಪೌಂಡ್, ಬೋಜನಾಲಯ, ಬ್ಯಾಡ್ಮಿಂಟನ್ ಕೋರ್ಟ್, ಶೌಚಾಲಯ ನಿರ್ಮಾಣ ಕಾಮಗಾರಿ ಹಾಗೂ ಅತ್ತಿಗೋಡು ಗ್ರಾಪಂನ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು.

ಮೈಸೂರು ಅಭಿವೃದ್ಧಿಗೆ ಶ್ರಮಿಸುವ ಜನಪ್ರತಿನಿಧಿಗಳ ಪಕ್ಷಾತೀತವಾಗಿ ಗೆಲ್ಲಿಸಿ

ಮಾಜಿ ಶಾಸಕ ವಾಸು ಮನವಿ



ಮೈಸೂರು, ನ.30(ಎಸ್‌ಪಿಎನ್)– ವಿಧಾನಸಭೆ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ಮೈಸೂರು ಅಭಿವೃದ್ಧಿಗೆ ಚಿಂತಿಸುವ, ಶ್ರಮಿಸುವ ಜನಪ್ರತಿನಿಧಿಗಳನ್ನು ಗೆಲ್ಲಿಸಿಕೊಳ್ಳಲು ಪಕ್ಷಾತೀತವಾಗಿ ಮೈಸೂರಿನ ಮತದಾರರು ಆಲೋಚಿಸಬೇಕು ಎಂದು ಮಾಜಿ ಶಾಸಕ ವಾಸು ಮತದಾರರಲ್ಲಿ ಮನವಿ ಮಾಡಿದರು.

ಮೈಸೂರು ಸರಸ್ವತಿಪುರಂ ಬಡಾವಣೆಯಲ್ಲಿರುವ ಕೆ.ಜವರೇಗೌಡ ಉದ್ಯಾನವನದಲ್ಲಿ ಸರಸ್ವತಿಪುರಂ ಕನ್ನಡ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ಮುಕ್ತಾಯ ಸಮಾರಂಭದಲ್ಲಿ ಅವರು, ಮಾತನಾಡಿದರು.

ನಾನು ಶಾಸಕನಾಗಿ ಆಯ್ಕೆಯಾಗಿದ್ದಾಗ, ಅಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರ ಮನವೊಲಿಸಿ ಜಯದೇವ ಆಸ್ಪತ್ರೆ, ಆಯುರ್ವೇದ ಪಂಚಕರ್ಮ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಮಹಾರಾಣಿ ಪದವಿ ಕಾಲೇಜು ಕಟ್ಟಡ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಶ್ರಮಿಸಿದ್ದೆ. ಅಲ್ಲದೆ, ಕಿದ್ವಾಯಿ, ನಿಮ್ಹಾನ್ಸ್ ಆಸ್ಪತ್ರೆ ಘಟಕ ತೆರೆಯಲು ಕಸರತ್ತು ಆರಂಭಿಸುವ ಮೊದಲೇ ನನ್ನ ಅಧಿಕಾರಾವಧಿ ಮುಕ್ತಾಯಗೊಂಡು, ಮುಂದಿನ ಚುನಾವಣೆಯಲ್ಲಿ ನಾನು ಗೆಲ್ಲಲಿಲ್ಲ. ಮೈಸೂರಿನ ಅಭಿವೃದ್ಧಿ ಕುರಿತು ಮಾತನಾಡುವಾಗ ನಾವು, ಮೈಸೂರು ಮಹಾರಾಜರ ಹೆಸರನ್ನು ಜ್ಞಾಪಿಸಿಕೊಂಡೇ ಮುಂದಿನ ಅಭಿವೃದ್ಧಿ ಕುರಿತು ಮಾತನಾಡಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿ ಸರಸ್ವತಿಪುರಂ ಬಡಾವಣೆ ಇತರೆ ಬಡಾವಣೆಗಳಿಗೆ ಮಾದರಿಯಾಗಿರಲು ಮಾಜಿ ಮೇಯರ್ ಆರ್.ಲಿಂಗಪ್ಪ ಅವರ ಹಲವು ವರ್ಷದ ಶ್ರಮವೇ ಕಾರಣ. ಹಾಗಾಗಿ ಅವರನ್ನು ಈ ಬಡಾವಣೆ ಮತದಾರರು 1994ರಿಂದ 2018ರವರೆಗೂ ಗೆಲ್ಲಿಸಿದ್ದಾರೆ. ಅಲ್ಲದೆ, ಕೆ.ಜವರೇಗೌಡ ಪಾರ್ಕ್‌ನಲ್ಲೇ ಅನೇಕ ವರ್ಷಗಳಿಂದ ಕನ್ನಡ ರಾಜ್ಯೋತ್ಸವವನ್ನು ಆಯೋಜಿಸಿ, ಅವರ ಇತಿಮಿತಿಯಲ್ಲಿ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ಒದಗಿಸಿ, ಕನ್ನಡ ಭಾಷೆ ಬೆಳವಣಿಗೆಗೂ ಕಾರಣಕರ್ತರಾಗಿದ್ದಾರೆ ಎಂದು ಬಣ್ಣಿಸಿದರು.

ಈ ವೇಳೆ ಕೆ.ಜಿ.ಕೊಪ್ಪಲು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿ ಎಂ.ದೇಶೀಗೌಡ, ಸಾರಿಗೆ ಇಲಾಖೆ ನಿವೃತ್ತ ಅಧಿಕಾರಿ ಅಶೋಕ್‌ಕುಮಾರ್, ಸುನೀಲ್ ಕುಮಾರ್, ನಗೆಕೂಟದ ಅಧ್ಯಕ್ಷ ನಟರಾಜಪ್ಪ, ಶಂಕರಜಯಂತಿ ಸಭಾದ ಲಲಿತಾ ಸುಂದರೇಶನ್, ಪರಿಸರವಾದಿ ಕೆ.ಆರ್.ಗುರಿಕಾರ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಟನ ತಂಡದ ಕಲಾವಿದರ ಅಭಿನಯದ ಹಿರಿಯ ರಂಗಕರ್ಮಿ ನಿರ್ದೇಶನದ 'ಚೋರ ಚರಣದಾಸ' ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿತು.

ಈ ವೇಳೆ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ, ಉದ್ಯಮಿ ಸೇಫ್‌ವ್ಹೀಲ್ ಪ್ರಶಾಂತ್, ನಗರಪಾಲಿಕೆ ಸದಸ್ಯರಾದ ವೇದಾವತಿ, ಶಿವಕುಮಾರ್, ಉದ್ಯಮಿ ಸತೀಶ್, ಸರಸ್ವತಿಪುರಂ ಕನ್ನಡ ಗೆಳೆಯರ ಬಳಗದ ಗೌರವಾಧ್ಯಕ್ಷ ಮಾಜಿ ಮೇಯರ್ ಆರ್.ಲಿಂಗಪ್ಪ, ರಾಜೇಶ್ ಬೋರೆ, ಆರ್.ಶಿವಲಿಂಗು, ಎಲ್.ಭಾಸ್ಕರ್, ಆರ್.ಮಹದೇವು, ಜಯಲಿಂಗು, ಎಲ್.ಪ್ರಜ್ವಲ್, ವೈ.ಎಸ್.ಸಂತಸ್, ನಾಗೇಂದ್ರ, ಸುಮಂತ್, ಉಮಾಶಂಕರ್, ಶ್ರೀನಿವಾಸಗೌಡ, ಪಿ.ಭಾರತಿ, ತೇಜಸ್ವಿನಿ, ಚಂದ್ರಶೇಖರ್, ಸುನೀಲ್ ಕುಮಾರ್, ರವಿ ಪ್ರಭಾಕರ್, ದೇವರಾಜು, ರಾಜಪ್ಪ, ರಾಮಕೃಷ್ಣ, ರವಿ, ಧನುಷ್, ಸುರೇಶ್, ದೀಪಕ್, ಸತೀಶ್‌ಚಂದ್ರ, ಸುರೇಶ್ ಪುರೋಹಿತ್, ರಾಜು, ಗುಂಡೂರಾವ್, ಮಹದೇವು, ಬಾಬು, ರಮೇಶ್, ಗಿರೀಶ್, ಮಂಜುನಾಥ್, ಮೋಹನ್, ಕೃಷ್ಣ, ಗೋವಿಂದ, ಗಂಗಾಧರ್, ಮಂಜುನಾಥ್, ಕಿಟ್ಟಿ ಇನ್ನಿತರರಿದ್ದರು.

ಕನ್ನಡ ಭಾಷೆ ಎಂದಿಗೂ ಹಾಳಾಗದು

ದಾವಣಗೆರೆ ವಿವಿ ಕನ್ನಡ ಪ್ರಾಧ್ಯಾಪಕ ಡಾ.ವಿ.ಜಯರಾಮಯ್ಯ ಅಭಿಮತ



ಮೈಸೂರು, ನ.30(ಎಂಕೆ)– ನೂರಾರು ಸಾಮಾಜಿಕ ಉಪಭಾಷೆಗಳನ್ನೊಳಗೊಂಡ ಕನ್ನಡ ಭಾಷೆಯ ಸೊಗಡನ್ನು ಇಂಗ್ಲಿಷ್‌ಗೆ ಭಾಷಾಂತರಿಸುವುದು ಕಷ್ಟ, ಎಷ್ಟೇ ಶತಮಾನಗಳು ಕಳೆದರು ಕನ್ನಡ ಭಾಷೆ ಹಾಳಾಗದು ಎಂದು ದಾವಣಗೆರೆ ವಿವಿ ಕನ್ನಡ ಪ್ರಾಧ್ಯಾಪಕ ಡಾ.ವಿ.ಜಯರಾಮಯ್ಯ ಅಭಿಪ್ರಾಯಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕಕ್ಕೆ ತನ್ನದೇ ಆದ ಭಾಷೆ, ಸಾಹಿತ್ಯ, ಜನಪದ ಕಲೆ, ವಾಸ್ತುಶಿಲ್ಪವಿದೆ. ಈ ನಾಡನ್ನು ಬಹು ಸಂಸ್ಕೃತಿಯ ನಾಡು ಎಂತಲೂ ಕರೆಯಲಾಗುತ್ತದೆ ಎಂದು ಹೇಳಿದರು. ಕನ್ನಡ ಮೊಟ್ಟಮೊದಲ ಕೃತಿಯಾದ 'ಕವಿರಾಜಮಾರ್ಗ'ದಲ್ಲಿ ಕನ್ನಡ ಭಾಷೆ ಬೆಳವಣಿಗೆ ಕುರಿತು ತಿಳಿಸಲಾಗಿದೆ. ಅಂದು ಸಂಸ್ಕೃತದಿಂದ ಕನ್ನಡಕ್ಕೆ ಪೆಟ್ಟು ಬಿದ್ದರೆ, ಇಂದು ಇಂಗ್ಲಿಷ್‌ನಿಂದ ತೊಂದರೆಯಾಗುತ್ತದೆ. ಮೂಲ ರಾಮಾಯಣ–ಮಹಾಭಾರತ ಕಾವ್ಯಗಳಲ್ಲಿ ನಾಯಕನ ವಿರುದ್ಧ ಇರುವವನನ್ನು ಖಳನಾಯಕ ಎಂದು ಕರೆಯಲಾಗಿದೆ. ಆದರೆ ಕನ್ನಡದ ಕವಿಗಳು ಖಳನಾಯಕ ಎನ್ನುವ ಬದಲು ಪ್ರತಿನಾಯಕ ಎಂದು ಕರೆದಿದ್ದಾರೆ. ಇದಕ್ಕೆ ರನ್ನನ 'ಗದಾಯುದ್ಧ' ಉದಾಹರಣೆಯಾಗಿದೆ. ಖಳನಾಯಕನಲ್ಲಿರುವ ಒಳ್ಳೆಯ ಗುಣಗಳನ್ನು ತಿಳಿಸುವ ಮೂಲಕ ಆತನನ್ನು ಖಳನಾಯಕನನ್ನಾಗಿಸದೆ ಪ್ರತಿನಾಯಕನೆಂದು ಗುರ್ತಿಸುವುದು ಕನ್ನಡ ಭಾಷೆಯಲ್ಲಿ ಎಂದು ತಿಳಿಸಿದರು.

ಕನ್ನಡ ಭಾಷೆಗೆ 2300 ವರ್ಷಗಳ ಇತಿಹಾಸವಿದೆ ಎಂಬುದನ್ನು ಆಧಾರ ಸಮೇತ ತಿಳಿಯಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಶಾಸನದಲ್ಲಿ 'ಇಸಿಲ' ಎಂಬ ಮೊದಲ ಪದ ಕನ್ನಡ ಪತ್ತೆಯಾಗಿದ್ದು, ನಂತರ ಹಲ್ಮಿಡಿ ಶಾಸನದಲ್ಲಿ 25 ಕನ್ನಡ ಶಬ್ದಗಳು ದೊರೆತವು. ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಸೇರಿದಂತೆ ಹಲವು ರಾಜ ಮನೆತನಗಳು ಕನ್ನಡ ಭಾಷೆ ಉಳಿವಿಗೆ ಕೊಡುಗೆ ನೀಡಿವೆ. ಕರ್ನಾಟಕ ಸಂಸ್ಕೃತಿಯನ್ನು ಎತ್ತಿಹಿಡಿಯುವುದಕ್ಕಾಗಿಯೇ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯದ ನಂತರ ಪಾಳೇಗಾರರ ಆಳ್ವಿಕೆ, ಬ್ರಿಟಿಷರ ಪಾರುಪತ್ಯದ ನಡುವೆ ಕನ್ನಡ ಭಾಷೆ ಉಳಿದು–ಬೆಳೆದು ಬಂದಿದೆ ಎಂದು ವಿವರಿಸಿದರು. ಮುಕ್ತ ವಿವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಡಾ.ಕೆ.ಎಲ್.ಎನ್.ಮೂರ್ತಿ, ಪ್ರೊ.ಪ್ರವೀಣ್, ಸಂಯೋಜನಾಧಿಕಾರಿ ಡಾ.ಎನ್.ಆರ್.ಚಂದ್ರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮುಂದುವರೆದ ಸಂಚಾರಿ ಪೊಲೀಸರ ತಪಾಸಣೆ

ಮೈಸೂರು, ನ.30(ಜಿಎ)– ಸಂಚಾರ ನಿಯಮಗಳ ಜಾರಿ ಹಾಗೂ ಅಪರಾಧ ಪಕರಣಗಳಿಗೆ ಕಡಿವಾಣ ಹಾಕುವ ಹಿನ್ನೆಲೆಯಲ್ಲಿ ಮೈಸೂರು ನಗರದ ಎಲ್ಲಾ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರಿಂದ ಬುಧವಾರವು ವಾಹನಗಳ ಕಟ್ಟುನಿಟ್ಟಿನ ತಪಾಸಣಾ ಕಾರ್ಯಾಚರಣೆ ಮುಂದುವರೆಸಲಾಯಿತು.



ಜಂಟಿ ತಪಾಸಣಾ ಕಾರ್ಯಾಚರಣೆಯೂ ನಗರದ ಸಯ್ಯಾಜಿರಾವ್‌ರಸ್ತೆ, ಹುಣಸೂರು ಮುಖ್ಯರಸ್ತೆ, ಬನ್ನೂರುಮುಖ್ಯರಸ್ತೆ, ಮಹದೇವಪುರ ಮುಖ್ಯರಸ್ತೆ ಸೇರಿದಂತೆ ನಗರದ 25ಕ್ಕೂ ಹೆಚ್ಚು ಸ್ಥಳಗಳಲ್ಲಿ ನಡೆಯಿತು. ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಅವರು ನಗರದ ಎಲ್ಲಾ ತಪಾಸಣಾ ಸ್ಥಳಗಳಿಗೆ ಭೇಟಿ ನೀಡಿ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡದುಕೊಂಡರು. ನಗರದ ಮೈಸೂರು– ಬೆಂಗಳೂರು ರಸ್ತೆಯ (ಬೀಸಿಲು ಮಾರಮ್ಮ ದೇವಾಲಯ) ಇಎಸ್‌ಐ ಜಂಕ್ಷನ್ ಬಳಿ ಖುದ್ದು ವಾಹನಗಳ ದಾಖಲೆಗಳನ್ನು ಪರಿಶಿಲನೆ ಮಾಡಿದರು. ಅವರಿಗೆ ಡಿಸಿಪಿ ಗೀತ ಪ್ರಸನ್ನ ಸಾಥ್ ನೀಡಿದರು.

ಮೈಸೂರು– ಬೆಂಗಳೂರು ರಸ್ತೆಯ (ಬೀಸಿಲು ಮಾರಮ್ಮ ದೇವಾಲಯ) ಇಎಸ್‌ಐ ಜಂಕ್ಷನ್ ಬಳಿ ನರಸಿಂಹರಾಜ ಸಂಚಾರಿ ಪೊಲೀಸರು ಹಾಗೂ ಹೆಬ್ಬಾಳ್ ಪೊಲೀಸ್ ಠಾಣೆಯ ಸಿಬ್ಬಂದಿ, ಸಂಜೆ 6ರಿಂದ ರಾತ್ರಿ9ರವರೆಗೆ ಜಂಟಿ ಕಾರ್ಯಾಚರಣೆ ನಡೆಸಿ, ಗೂಡ್ಸ್ ವಾಹನಗಳು, ಕಾರು, ಮಿನಿ ವ್ಯಾನ್,ತ್ರಿಬಲ್ ರೈಡಿಂಗ್ ಸೇರಿದಂತೆ ಅನುಮಾನಾಸ್ಪದವಾಗಿ ಕಂಡುಬರುವ ವಾಹನಗಳನ್ನು ನಿಲ್ಲಿಸಿ, ತಪಾಸಣೆ ನಡೆಸಿದರು. ಸವಾರರಿಂದ ಖಚಿತ ಮಾಹಿತಿ ಪಡೆದ ನಂತರವೇ ಬಿಟ್ಟು ಕಳುಹಿಸುತ್ತಿದ್ದರು. ಈ ವೇಳೆ ವಾಹನ ಸವಾರರು ಮತ್ತು ಪೊಲೀಸರ ನಡುವೆ ಕೆಲವೆಡೆ ಮಾತಿನ ಚಕಮಕಿಯೂ ನಡೆಯಿತು. ಕಾರ್ಯಾಚರಣೆಯಲ್ಲಿ ನರಸಿಂಹರಾಜ ಸಂಚಾರಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ನಟರಾಜು, ಹೆಬ್ಬಾಳ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಸನ್ನ, ಸಿಬ್ಬಂದಿ ಪಾಲ್ಗೊಂಡಿದ್ದರು.

3.22 ಲಕ್ಷ ರೂ. ದಂಡ ವಸೂಲಿ: ನಗರದಾದ್ಯಂತ ಸಂಚಾರ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರಿಂದ ನಡೆದ ಜಂಟಿ ಕಾರ್ಯಾಚರಣೆಯಲ್ಲಿ 2448 ವಾಹನಗಳನ್ನು ತಪಾಸಣೆ ನಡೆಸಿದ ಪೊಲೀಸರು, 688 ಪ್ರಕರಣ ದಾಖಲಿಸಿ 3,22,200 ರೂ. ದಂಡ ವಸೂಲಿ ಮಾಡಿ 47 ವಾಹನಗಳನ್ನು ವಶಕ್ಕೆ ಪಡೆಸಿಕೊಂಡಿದ್ದಾರೆ.

ವೇತನ ಪರಿಷ್ಕರಣೆಗೆ ವಿಳಂಬ ಧೋರಣೆ

ಸರ್ಕಾರ, ಕೆಎಸ್‌ಆರ್‌ಟಿಸಿ ವಿರುದ್ಧ ನೌಕರರ ಜಂಟಿ ಕ್ರಿಯಾ ಸಮಿತಿ ಆಕ್ರೋಶ

ಮೈಸೂರು, ನ.30(ಎಸ್‌ಪಿಎನ್)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರಿಗೆ ರಾಜ್ಯ ಸರ್ಕಾರ 01.01.2020ರಿಂದ ವೇತನ ಪರಿಷ್ಕರಣೆ ಮಾಡದೇ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕೆಎಸ್‌ಆರ್‌ಟಿಸಿ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಸದಸ್ಯರು ಹಾಗೂ ಕೆಎಸ್‌ಆರ್‌ಟಿಸಿ ನೌಕರರ ಕೂಟದ ಸದಸ್ಯರು, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.





ಮೈಸೂರಿನ ಟೌನ್‌ಹಾಲ್‌ನಲ್ಲಿ ಕರಾರ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳಾದ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳ, ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್, ಕರಾರಸಾ ಸಂಸ್ಥೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಕೆಎಸ್‌ಆರ್‌ಟಿಸಿ ಎಸ್ಸಿ–ಎಸ್ಟಿ ಎಂಪ್ಲಾಯಿಸ್ ಯೂನಿಯನ್, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಯುನೈಟೆಡ್ ಎಂಪ್ಲಾಯಿಸ್ ಯೂನಿಯನ್ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ ಸಹಯೋಗದೊಂದಿಗೆ ರಚಿತವಾಗಿರುವ ಜಂಟಿ ಕ್ರಿಯಾ ಸಮಿತಿ(ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ ವಿಭಾಗ) ವತಿಯಿಂದ ಆಯೋಜಿಸಿದ್ದ 'ಸಾರಿಗೆ ನೌಕರರ ಜಾಗೃತಿ' ಸಮಾವೇಶದಲ್ಲಿ ಕಾರ್ಮಿಕ ಮುಖಂಡರು ಮಾತನಾಡಿದರು.

ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಡಿ.ಎ.ವಿಜಯ ಭಾಸ್ಕರ್ ಮಾತನಾಡಿ, ರಾಜ್ಯದಲ್ಲಿ ಎಲ್ಲಾ ವಸ್ತುಗಳ ಬೆಲೆ ಗಗನಮುಖಿಯಾಗಿವೆ. ಆದರೆ, ರಾಜ್ಯ ಸರ್ಕಾರ ಕೆಎಸ್‌ಆರ್‌ಟಿಸಿ ನೌಕರರಿಗೆ 01.01.2020ರಿಂದ ವೇತನ ಪರಿಷ್ಕರಣೆ ಮಾಡದೇ ಕಾಲಹರಣ ಮಾಡಿದೆ. ಈ ಹಿಂದೆ ವೇತನ ಪರಿಷ್ಕರಣೆ ಸಂಬಂಧ ಸರ್ಕಾರದ ಮುಂದೆ ಬೇಡಿಕೆ ಪಟ್ಟಿಯಿಟ್ಟು ಮುಷ್ಕರ ಮಾಡಿದ್ದಕ್ಕೆ ಬೇಕಾಬಿಟ್ಟಿ ಅಮಾನತು, ವಜಾ, ಎಫ್‌ಐಆರ್ ನೀತಿ ಅನುಸರಿಸಿ ಕಾರ್ಮಿಕರನ್ನು ಬೆದರಿಸುವ ತಂತ್ರ ಅನುಸರಿಸಿದ್ದಾರೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ಸಣ್ಣಪುಟ್ಟ ವಿಚಾರಗಳಿಗೆ ಹಿರಿಯ ಅಧಿಕಾರಿಗಳು, ಚಾಲಕರು ಮತ್ತು ನಿರ್ವಾಹಕರಿಗೆ ಫಾರಂ–4 ನೀಡಿ ಕಿರುಕುಳ ನೀಡುತ್ತಿದ್ದು, ಇದರಿಂದ ಬಿಎಂಟಿಸಿಯಲ್ಲಿ 3 ಮಂದಿ ಕಾರ್ಮಿಕರು ಡಿಪೋ ಆವರಣದಲ್ಲೇ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡರು. ಆದರೆ, ಅಧಿಕಾರಿಗಳು ಇದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ವೇತನ ಪರಿಷ್ಕರಣೆ ಆಗದೇ ನೌಕರರ ಕುಟುಂಬಗಳು ಆರ್ಥಿಕವಾಗಿ ದಿವಾಳಿಯಾಗುತ್ತಿವೆ. ನೌಕರರ ವೇತನ ಪರಿಷ್ಕರಣೆ ವಿಚಾರದಲ್ಲಿ ಸರ್ಕಾರ ಅಮಾನವೀಯವಾಗಿದೆ ಎಂದು ತೀವ್ರವಾಗಿ ಖಂಡಿಸಿದರು.

ಕೆಎಸ್‌ಆರ್‌ಟಿಸಿ ನೌಕರರ ಕೂಟದ ಸದಸ್ಯರು ಸಾರಿಗೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ 2020ರ ಡಿಸೆಂಬರ್‌ನಲ್ಲಿ ನಾಲ್ಕು ಪ್ರತಿಭಟನೆ ನಡೆಸಿದರು. ನಂತರ 2021ರ ಏಪ್ರಿಲ್‌ನಲ್ಲಿ 15 ದಿನ ಪ್ರತಿಭಟನೆ ನಡೆಸಿದರು. ಈ ಮುಷ್ಕರಕ್ಕೆ ಕರ್ನಾಟಕ ಜನತೆ, ನೌಕರರ ಮುಷ್ಕರದಿಂದ ತಮಗೆ ಕಷ್ಟವಾದರೂ ಸಹಕರಿಸಿದರು. ಈ ಜನ ಬೆಂಬಲವನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಕೂಟದ ಸದಸ್ಯರು ವಿಫಲರಾದರಲ್ಲದೆ, ಈ ಮುಷ್ಕರದಿಂದ 5 ಸಾವಿರ ಕಾರ್ಮಿಕ ಕುಟುಂಬಗಳು ಬೀದಿಪಾಲಾಗಿವೆ. ಆ ದಿನದ ಪ್ರತಿಭಟನೆ ಹಿಂಪಡೆಯಲು ಯಾವ ಯಾವ ಮಾರ್ಗ ಅನುಸರಿಸಿದರು ಎಂಬುದು ಇಡೀ ಲೋಕಕ್ಕೆ ತಿಳಿದ ವಿಷಯ ಎಂದು ಕಟು ಶಬ್ದಗಳಲ್ಲಿ ಟೀಕಿಸಿದರು.


ಕೂಟದ ಸದಸ್ಯರು, ಸಾರಿಗೆ ನೌಕರರ ಒಳಿತಿಗಾಗಿ ಎಲ್ಲಾ ಸಂಘದ ಸದಸ್ಯರ ಜೊತೆ ಒಂದಾಗಿ ಜಂಟಿ ಕ್ರಿಯಾ ಸಮಿತಿ ರಚಿಸಿ, ಹೋರಾಟದಲ್ಲಿ ಪಾಲ್ಗೊಳ್ಳದೆ, ಕಾರ್ಮಿಕ ಮುಖಂಡರ ವಿರುದ್ಧವೇ ಟೀಕೆ ಮಾಡಿಕೊಂಡು ಅಡ್ಡಾಡುತ್ತಿದ್ದಾರೆ. ಇದರಿಂದ 1.10 ಲಕ್ಷ ಸಾರಿಗೆ ನೌಕರರ ವೇತನ ಪರಿಷ್ಕರಣೆ ಯಾಗದೇ ಪರಿತಪಿಸುವಂತಾಗಿದೆ. ಇಂತಹ ಸುಳ್ಳು ಹೇಳುವ ಮುಖಂಡರ ಮಾತನ್ನು ಸಾರಿಗೆ ನೌಕರರು ನಿರ್ಲಕ್ಷಿಸಿ, ಜಂಟಿ ಕ್ರಿಯಾ ಸಮಿತಿ ಹೋರಾಟಕ್ಕೆ ಬೆಂಬಲ ಸೂಚಿಸುವಂತೆ ಮನವಿ ಮಾಡಿದರಲ್ಲದೆ, ಈಗಾಗಲೇ ಜಂಟಿ ಕ್ರಿಯಾ ಸಮಿತಿಯಿಂದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ವೇತನ ಪರಿಷ್ಕರಣೆ ಸೇರಿದಂತೆ 13 ಬೇಡಿಕೆಗಳ ಪಟ್ಟಿಯನ್ನು ನೀಡಿದ್ದು, ಈ ಬೇಡಿಕೆಯನ್ನು ಈಡೇರಿಸುವಂತೆ ಮನವಿ ಮಾಡಿದರು. 2020ರ ವೇತನ ಪರಿಷ್ಕರಣೆ ಆಗದಿದ್ದರೆ, ಕೆಎಸ್‌ಆರ್‌ಟಿಸಿ ನೌಕರರ ವೇತನದಲ್ಲಿ ಭಾರೀ ವ್ಯತ್ಯಾಸವಾಗಲಿದೆ. ಇದರಿಂದ ವಿವಿಧ ಸವಲತ್ತುಗಳು ಕೈಬಿಡಲಿವೆ. ಇಂತಹ ಸಂಕಷ್ಟ ಸಂದರ್ಭದಲ್ಲಿ ನೌಕರರು ಮತ್ತು ವಿವಿಧ ಕಾರ್ಮಿಕ ಮುಖಂಡರು ಸಣ್ಣಪುಟ್ಟ ವೈಮನಸ್ಸುಗಳನ್ನು ಬದಿಗೊತ್ತಿ, ಸರ್ಕಾರದ ಮೇಲೆ ಒಗ್ಗಟ್ಟಿನಿಂದ ಒತ್ತಡ ತರಬೇಕೆಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳದ ಪ್ರಧಾನ ಕಾರ್ಯದರ್ಶಿ ಜಯದೇವರಾಜೇ ಅರಸ್, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಯುನೈಟೆಡ್ ಎಂಪ್ಲಾಯಿಸ್ ಯೂನಿಯನ್ ಮುಖಂಡ ಕೆ.ಆರ್.ವಿಜಯಕುಮಾರ್, ವೆಂಕಟರಮಣಪ್ಪ, ಸಿಐಟಿಯು ಮಂಜುನಾಥ್ ಮಾತನಾಡಿ, ರಾಜ್ಯ ಸರ್ಕಾರ ಮತ್ತು ಕೂಟದ ಸದಸ್ಯರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರಲ್ಲದೆ, ಕಾರ್ಯಕ್ರಮ ಮುಗಿದ ನಂತರ ವೇತನ ಪರಿಷ್ಕರಣೆ ಕುರಿತು ರಾಜ್ಯ ಸರ್ಕಾರದ ನಿಲುವು ಖಂಡಿಸಿ ವಿವಿಧ ಘೋಷಣೆಗಳನ್ನು ಕೂಗಿ ಮುಖಂಡರು ತಮ್ಮ ಆಕ್ರೋಶ ಹೊರಹಾಕಿದರು. ಈ ವೇಳೆ ಕಾರ್ಮಿಕ ಮುಖಂಡರಾದ ಎಂ.ಪಿ.ನಾಗಪ್ರಸಾದ್, ಬಿ.ದೇವರಾಜೇ ಅರಸ್, ಮಲ್ಲಿಕಾರ್ಜುನ ಮೂರ್ತಿ, ಎಂ.ವಿ.ಶಿವಕುಮಾರ್, ಮಹದೇವಸ್ವಾಮಿ, ಎಂ.ವಿಜಯಕುಮಾರ್ ಇತರೆ ಮುಖಂಡರಿದ್ದರು.

ಬಿಜೆಪಿಯಲ್ಲಿ ಉದ್ಯೋಗ ಪಡೆದು ಕಾಂಗ್ರೆಸ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ

● ಎಂಎಲ್‌ಸಿ ವಿಶ್ವನಾಥ್ ಬಗ್ಗೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಲೇವಡಿ ● ಹಳ್ಳಿಹಕ್ಕಿ ಬಿಜೆಪಿಯಿಂದ ಕಾಂಗ್ರೆಸ್‌ಗೆ, ಸಾಧ್ಯವಾದರೆ ಕೈನಿಂದ ಆಮ್‌ಆದ್ಮಿಗೂ ಹಾರಬಹುದು

ಮೈಸೂರು, ನ.30(ಎಂಕೆ)– ಬಿಜೆಪಿಯಿಂದ ಉದ್ಯೋಗ ಪಡೆದು, ಕಾಂಗ್ರೆಸ್ ಚಾಕರಿ ಮಾಡುತ್ತಿರುವ ಅಡಗೂರು ಹೆಚ್.ವಿಶ್ವನಾಥ್ ಅವರಿಗೆ ನನ್ನ ಭೂತ ಕಾಡುತ್ತಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಲೇವಡಿ ಮಾಡಿದ್ದಾರೆ.




ಅಡ್ಡಂಡ ಕಾರ್ಯಪ್ಪ

ನವೆಂಬರ್ 26ರಂದು ಕಾಡಾ ಕಚೇರಿಯಲ್ಲಿ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದ ವಿಧಾನಪರಿಷತ್ ಎ.ಹೆಚ್.ವಿಶ್ವನಾಥ್, ಅಡ್ಡಂಡ ಕಾರ್ಯಪ್ಪಗೆ ಎಂಎಲ್‌ಸಿ ಆಗುವ ಆತುರ. ಅದಕ್ಕಾಗಿ ಒಂದು ಧರ್ಮದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಇವರ ಬೆನ್ನ ಹಿಂದೆ ಇರುವ ಭೈರಪ್ಪನವರಿಗೂ ತುರ್ತಾಗಿ ಜ್ಞಾನಪೀಠ ಬೇಕಾಗಿದೆ ಎಂಬ ಹೇಳಿಕೆ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ನಾನು ಕನಸು–ಮನಸಿನಲ್ಲಿಯೂ ಎಂಎಲ್‌ಸಿಗಾಗಿ ಬಯಸಿಲ್ಲ. ಅವರ ಬಾಯಿ ಚಪಲಕ್ಕೆ ಹೇಳಿಕೊಳ್ಳಬಹುದಷ್ಟೇ. ನನ್ನನ್ನು ನೇಮಿಸಿರುವುದು ರಂಗಾಯಣ ನಿರ್ದೇಶಕನಾಗಿ. ಆ ಕಾರ್ಯವನ್ನು ನಾನು ಭರ್ಜರಿಯಾಗಿಯೇ ಮಾಡುತ್ತಿದ್ದೇನೆ. ಆದರೆ ಅವರು, ಬಿಜೆಪಿ ಕಚೇರಿಯಲ್ಲಿ ಉದ್ಯೋಗ ಪಡೆದು, ಕಾಂಗ್ರೆಸ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಅಡ್ಡಂಡ ಕಾರ್ಯಪ್ಪ ವ್ಯಂಗ್ಯವಾಡಿದ್ದಾರೆ.

ನಾಡಿನ ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಅವರ ಬಗ್ಗೆ ಮಾತನಾಡುವ ಯೋಗ್ಯತೆ ಅವರಿಗಿಲ್ಲ. ಅವರೊಬ್ಬ ವಿಶ್ವಮಾನ್ಯ ಕಾದಂಬರಿಕಾರರಾಗಿದ್ದು, ಅವರ ಕಾದಂಬರಿಗಳು ಪ್ರಪಂಚದ ನಾನಾ ಭಾಷೆಗಳಿಗೆ ಭಾಷಾಂತರಗೊಂಡಿವೆ. ಜ್ಞಾನಪೀಠ ಪ್ರಶಸ್ತಿ ನೀಡುವುದು ಸರ್ಕಾರವಲ್ಲ. ಅದೊಂದು ಖಾಸಗಿ ಸಂಸ್ಥೆ ನೀಡುವ ಪ್ರಶಸ್ತಿ. ಭೈರಪ್ಪನವರು ಜ್ಞಾನಪೀಠ ಪ್ರಶಸ್ತಿಗೂ ಮೀರಿ ಬೆಳೆದಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು. ಡಾ.ಭೈರಪ್ಪ ಎಂದು ಬರೆಸಿಕೊಳ್ಳುವ ಹಂಬಲವೂ ಅವರಿಗಿಲ್ಲ ಎಂದರು. 'ಹಳ್ಳಿಹಕ್ಕಿ' ಪುಸ್ತಕ ಬರೆದುಬಿಟ್ಟರೇ ಅವರೇನು ದೊಡ್ಡ ಸಾಹಿತಿಯಾ? ಅವರ ಮೇಲೆ ಗೌರವವಿದೆ. ಆದರೆ ಸುಮ್ಮನೇ ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ. ಹಳ್ಳಿಹಕ್ಕಿ ಬಿಜೆಪಿಗೆ ಹಾರಿ ಬಂದು ಈಗ ಮತ್ತೆ ಕಾಂಗ್ರೆಸ್‌ಗೆ ಹಾರುತ್ತಿದೆ. ಅಲ್ಲಿಂದ ಜೆಡಿಎಸ್‌ಗೆ ಹಾರಿ ಅವಕಾಶ ಸಿಗದಿದ್ದರೇ ಆಮ್‌ಆದ್ಮಿಗೂ ಹಾರುವ ಸಾಧ್ಯತೆಯಿದೆ ಎಂದು ಅಡ್ಡಂಡ ಕಾರ್ಯಪ್ಪ ಟೀಕಿಸಿದರು.

ಭಾರತದ ಜಾಹೀರಾತು ಸಂಸ್ಥೆಗಳ ಸಂಘದ ಆಡಳಿತ ಮಂಡಳಿಗೆ ಆಯ್ಕೆ

ಮೈಸೂರು, ನ.30(ಎಂಕೆ)– ಸ್ಲೋಕ ಅಡ್ವರ್ಟೈಸಿಂಗ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಹಾಗೂ ಸಿಇಓ ಕೆ.ಶ್ರೀನಿವಾಸ್, ಭಾರತದ ಜಾಹೀರಾತು ಸಂಸ್ಥೆಗಳ ಸಂಘದ ಆಡಳಿತ ಮಂಡಳಿ(ಬೋರ್ಡ್ ಆಫ್ ಡೈರೆಕ್ಟರ್ಸ್ ಫಾರ್ ಅಡ್ವರ್ಟೈಸಿಂಗ್ ಅಸೋಸಿಯೇಷನ್ ಏಜೆನ್ಸಿ ಆಫ್ ಇಂಡಿಯಾ–ಎಎಎಐ)ಗೆ ಆಯ್ಕೆಯಾಗಿದ್ದಾರೆ.



ಕೆ.ಶ್ರೀನಿವಾಸ್

ಜಾಹೀರಾತು ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ 30 ವರ್ಷಗಳ ಅನುಭವ ಹೊಂದಿರುವ ಅವರು, ದಕ್ಷಿಣ ಭಾರತದಲ್ಲಿ ಸ್ಲೋಕಾ ಅಡ್ವರ್ಟೈಸಿಂಗ್ ಪ್ರೈವೇಟ್ ಲಿಮಿಟೆಡ್ ಅಸಾಧಾರಣವಾಗಿ ಬೆಳೆಯಲು ಕಾರ್ಯತಂತ್ರ ರೂಪಿಸಿ, ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಎಎಎಐಗೆ ಆಯ್ಕೆಯಾದ ಬಳಿಕ ಪ್ರತಿಕ್ರಿಯಿಸಿರುವ ಅವರು, ಈ ಪ್ರತಿಷ್ಠಿತ ಅಸೋಸಿಯೇಷನ್‌ನ ಮಂಡಳಿಗೆ ಆಯ್ಕೆಯಾಗಿರುವುದು ನನಗೆ ತುಂಬಾ ಸಂತೋಷವಾಗಿದೆ. ವಿವಿಧ ಮಾಧ್ಯಮಗಳು ಮತ್ತು ಜಾಹೀರಾತುದಾರರ ನಡುವೆ ಉತ್ತಮ ವ್ಯವಹಾರ ಕಲ್ಪಿಸುವ ನಿಟ್ಟಿನಲ್ಲಿ ಮಂಡಳಿಯ ಇತರ ಸದಸ್ಯರೊಂದಿಗೆ ಒಡಗೂಡಿ ಶ್ರಮಿಸುತ್ತೇನೆ ಎಂದು ತಿಳಿಸಿದ್ದಾರೆ.

ಸೌತ್ ಏಷ್ಯಾ ಆಫ್ ಗ್ರೂಪ್ ಎಂ ಮಿಡಿಯಾ ಸಿಇಓ ಪ್ರಶಾಂತ್ ಎಎಎಐನ ಅಧ್ಯಕ್ಷರಾಗಿ ಆಯ್ಕೆಯಾದರೆ, ನಿಕಟಪೂರ್ವ ಅಧ್ಯಕ್ಷೆ ಅನುಪ್ರಿಯಾ ಆಚಾರ್ಯ ಪದ ನಿಮಿತ್ತ ಸದಸ್ಯರಾಗಿದ್ದಾರೆ. ಉಪಾಧ್ಯಕ್ಷರಾಗಿ ರಾಣಾ ಬರುವಾ ಆಯ್ಕೆಯಾಗಿದ್ದಾರೆ.

1945ರಲ್ಲಿ ಸ್ಥಾಪನೆಯಾದ ಎಎಎಐ ಸಂಸ್ಥೆ ದೊಡ್ಡ ಸಂಖ್ಯೆಯಲ್ಲಿ ಸಣ್ಣ, ಮಧ್ಯಮ ಮತ್ತು ದೊಡ್ಡ–ಗಾತ್ರದ ಏಜೆನ್ಸಿಗಳನ್ನು ಅದರ ಸದಸ್ಯರನ್ನಾಗಿ ಹೊಂದಿರುವ ಪ್ರತಿನಿಧಿ ಯಾಗಿದೆ. ಒಟ್ಟಾರೆ ದೇಶದಲ್ಲಿ ಶೇ.80 ಜಾಹೀರಾತು ವ್ಯವಹಾರ ಹೊಂದಿರುವ ಸಂಸ್ಥೆ ಇದಾಗಿದೆ.

ನೀಟ್ ಪರೀಕ್ಷೆ ಮೂಲಕವೇ ಕಿಮ್ಸ್‌ನ ವೈದ್ಯಕೀಯ ಸೀಟುಗಳು ಲಭ್ಯ

ಒಕ್ಕಲಿಗರ ಸಂಘದ ಅಧ್ಯಕ್ಷರಾದಿಯಾಗಿ ಯಾರಿಗೂ ಸೀಟು ಕೊಡಿಸುವ ಅಧಿಕಾರವಿಲ್ಲ

ಮೈಸೂರು, ನ.30(ಪಿಎಂ)–ವೈದ್ಯಕೀಯ ಸೀಟು ಕೊಡಿಸುವುದಾಗಿ ಹಣ ಪಡೆದು ವಂಚಿಸಿರುವುದಾಗಿ ತಮ್ಮ ಮೇಲಿನ ಆರೋಪವನ್ನು ಸ್ಪಷ್ಟವಾಗಿ ತಳ್ಳಿ ಹಾಕಿರುವ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ವೈದ್ಯಕೀಯ ಸೀಟು ಕೊಡಿಸುವ ಅಧಿಕಾರ ಯಾರಿಗೂ ಇಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.


ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ ಸ್ಪಷ್ಟನೆ



ನನ್ನ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ರಾಜ್ಯದ ಪ್ರತಿಷ್ಠಿತ ವೈದ್ಯಕೀಯ ಕಾಲೇಜುಗಳ ಪೈಕಿ ಕಿಮ್ಸ್ ಒಂದಾಗಿದ್ದು, ಇಲ್ಲಿ (ಕೆಂಪೇಗೌಡ ವೈದ್ಯಕೀಯ ಕಾಲೇಜು) ವೈದ್ಯಕೀಯ ಪದವಿಗೆ ಸೀಟು ಕೊಡಿಸುವ ಅಧಿಕಾರ ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾದಿಯಾಗಿ ಯಾವುದೇ ನಿರ್ದೇಶಕರಿಗೂ ಇಲ್ಲ. ಕಿಮ್ಸ್ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ನಂಬಿಸಿ ಮೋಸ ಮಾಡ ಲಾಗುತ್ತಿದೆ ಎಂಬ ವಿಚಾರ ವ್ಯಾಪಕವಾಗಿ ಹರಡಿದ್ದು, ಸಂಘದ ಯಾವುದೇ ನಿರ್ದೇಶಕರು, ಅಧ್ಯಕ್ಷರು, ಕಾರ್ಯದರ್ಶಿಗಳಿಗೆ ಆ ರೀತಿಯ ಅಧಿಕಾರ ಇಲ್ಲ. ಕಿಮ್ಸ್ ಕಾಲೇಜಿನಲ್ಲಿರುವ ವೈದ್ಯಕೀಯ ಪದವಿಯ ಎಲ್ಲಾ ಸೀಟುಗಳನ್ನು ನೀಟ್ ಪರೀಕ್ಷೆ (ರಾಷ್ಟ್ರೀಯ ಪ್ರವೇಶ ಅರ್ಹತಾ ಪರೀಕ್ಷೆ) ಮೂಲಕವೇ ಭರ್ತಿ ಮಾಡಲಾಗುತ್ತದೆ. ಆದ್ದರಿಂದ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಿಗೆ ಸೀಟು ಕೊಡಿಸುವ ಅಧಿಕಾರ ಇಲ್ಲ.

ಕೆಲವರು ಕಿಮ್ಸ್‌ನಲ್ಲಿ ವೈದ್ಯಕೀಯ ಪದವಿಗೆ ಸೀಟು ಕೊಡಿಸುತ್ತೇವೆಂದು ಮಧ್ಯವರ್ತಿಗಳಂತೆ ಕೆಲಸ ಮಾಡಿರುವ ಬಗ್ಗೆ ಮಾಹಿತಿ ಹರಿದಾಡುತ್ತಿದ್ದು, ಅಂತಹವರನ್ನು ನಂಬಿ ಯಾರೂ ಮೋಸ ಹೋಗಬಾರದು. ಹಾಗೊಂದು ವೇಳೆ ನಿಮಗೆ ಸೀಟು ಕೊಡಿಸುತ್ತೇವೆಂದು ಯಾರಾದರೂ ಹೇಳಿದ್ದಲ್ಲಿ ಅಂತಹವರೊಂದಿಗೆ ಹಣದ ವ್ಯವಹಾರ ಮಾಡದೇ ಸಂಘದ ಕಚೇರಿಗೆ ಮಾಹಿತಿ ನೀಡಬಹುದು.

ಕಿಮ್ಸ್‌ನಲ್ಲಿ ವೈದ್ಯಕೀಯ ಸೀಟು ಕೊಡಿಸುತ್ತೇವೆಂಬುದು ಸತ್ಯಕ್ಕೆ ದೂರವಾದ ಸಂಗತಿ. ಕೆಲವರ ಈ ರೀತಿಯ ವ್ಯವಹಾರಕ್ಕೂ, ರಾಜ್ಯ ಒಕ್ಕಲಿಗರ ಸಂಘದ ಅಧೀನದ ಕಿಮ್ಸ್ ಕಾಲೇಜಿಗೂ ಯಾವುದೇ ಸಂಬಂಧ ಇಲ್ಲ. ಆ ರೀತಿಯ ಅಧಿಕಾರವನ್ನು ಸಂಘದ ಯಾವುದೇ ವ್ಯಕ್ತಿಗೂ ನೀಡಿಲ್ಲ. ಅಂತಹ ವ್ಯವಸ್ಥೆ ಸಂಘದಲ್ಲಿ ಇಲ್ಲ. ಸಂಘದ ಶ್ರೇಯೋಭಿವೃದ್ಧಿಯೇ ನಮ್ಮ ಗುರಿಯಾಗಿದ್ದು, ಯಾವುದೇ ವಿವಾದಗಳಿಗೆ ಆಸ್ಪದವಿಲ್ಲದಂತೆ ಸಂಘ ನಡೆಯುತ್ತಿದೆ. ನನ್ನ ಮೇಲೆ ಸುಳ್ಳು ಆರೋಪ ಮತ್ತು ಅಪಪ್ರಚಾರ ಮಾಡಲಾಗುತ್ತಿದೆ. ಇದಕ್ಕೆ ಯಾರೂ ಕಿವಿಗೊಡಬಾರದೆಂದು ಪ್ರಕಟಣೆಯಲ್ಲಿ ಮಂಜೇಗೌಡರು ಮನವಿ ಮಾಡಿದ್ದಾರೆ.



ಮೈಸೂರು ನಗರ ಪಾಲಿಕೆ ವಾರ್ಡ್ ನಂ.24ರ ಮಂಡಿಮೊಹಲ್ಲಾದಲ್ಲಿ ರಸ್ತೆ, ದೇವಸ್ಥಾನ ಇನ್ನಿತರೆ 40 ಲಕ್ಷ ರೂ. ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಬುಧವಾರ ಚಾಲನೆ ನೀಡಿದರು. ಈ ವೇಳೆ ಕಾರ್ಪೊರೇಟರ್ ಎಂ.ಡಿ.ನಾಗರಾಜು ಇತರರು ಉಪಸ್ಥಿತರಿದ್ದರು.

ನವಾಬ್ ಮಲಿಕ್ ಜಾಮೀನು ಅರ್ಜಿ ವಜಾ

ಮುಂಬೈ: ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು ಆತನ ಸಹಚರರ ಚಟುವಟಿಕೆಗಳಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಮಹಾರಾಷ್ಟ್ರದ ಮಾಜಿ ಸಚಿವ ನವಾಬ್ ಮಲಿಕ್ ಅವರ ಜಾಮೀನು ಅರ್ಜಿಯನ್ನು ಮುಂಬೈ ವಿಶೇಷ ನ್ಯಾಯಾಲಯ ಬುಧವಾರ ವಜಾಗೊಳಿಸಿದೆ.



ಮಲಿಕ್ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಆರ್.ಎನ್.ರೋಕಡೆ ಅವರು, ಆರೋಪಿಗೆ ಜಾಮೀನು ನಿರಾಕರಿಸಿದ್ದಾರೆ. ಎರಡೂ ಕಡೆಯ ಸುದೀರ್ಘ ವಾದಗಳನ್ನು ಆಲಿಸಿದ ನಂತರ ವಿಶೇಷ ನ್ಯಾಯಾಲಯವು ನವೆಂಬರ್ 14ರಂದು ಮಲಿಕ್ ಜಾಮೀನು ಅರ್ಜಿಯ ಆದೇಶವನ್ನು ಕಾಯ್ದಿರಿಸಿತ್ತು. ಇಂದು ಅರ್ಜಿ ವಜಾಗೊಳಿಸಿ ತೀರ್ಪು ನೀಡಿದೆ.



ಕಾಡಾ ಕಚೇರಿ ಕಟ್ಟಡಕ್ಕೆ ಕಾಯಕಲ್ಪ

ಭರದಿಂದ ಸಾಗಿದೆ ಪಾರಂಪರಿಕ ಕಟ್ಟಡಕ್ಕೆ ಪಾರಂಪರಿಕ ಮೆರುಗು ನೀಡುವ ಕಾರ್ಯ

ಕಾಡಾ ಕಚೇರಿ ದುರಸ್ತಿ ಕಾಮಗಾರಿ ಉತ್ತಮವಾಗಿ ನಡೆಯುತ್ತಿದೆ. ಪಾರಂಪರಿಕ ಸಮಿತಿಯವರು ಸದ್ಯದಲ್ಲಿಯೇ ಭೇಟಿ ನೀಡಿ ಪರಿಶೀಲನೆ ಮಾಡಲಿದ್ದೇವೆ. ಮೈಸೂರಿನಲ್ಲಿ ಅನೇಕ ಕಟ್ಟಡಗಳು ತಕ್ಷಣ ದುರಸ್ತಿಯಾಗಬೇಕಿದೆ. ಈ ಸಂಬಂಧ ಸಮಿತಿಯೊಂದಿಗೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಅವರು ಒಂದು ಸುತ್ತಿನ ಸಭೆ ಮಾಡಿದ್ದಾರೆ. ಮೈಸೂರು ಹೆಸರಿಗೆ ಮಾತ್ರ ಪಾರಂಪರಿಕ ನಗರಿಯಾಗಿದೆ. ಸರ್ಕಾರ ಪಾರಂಪರಿಕ ಕಟ್ಟಡದ ನಿರ್ವಹಣೆ ಮತ್ತು ಸಂರಕ್ಷಣೆಗೆ ಯಾವುದೇ ಅನುದಾನ ಮೀಸಲಿಟ್ಟಿಲ್ಲ. **–ಪ್ರೊ.ರಂಗರಾಜು, ಪಾರಂಪರಿಕ ತಜ್ಞ**

ಮೈಸೂರು,ನ.30(ಜಿಎ)–ಕಾಡಾ(ಕಾವೇರಿ) ಕಚೇರಿ ಕಟ್ಟಡ ದುರಸ್ತಿ ಕಾಮಗಾರಿ ತ್ವರಿತವಾಗಿ ನಡೆಯುತ್ತಿದ್ದು, ಪಾರಂಪರಿಕ ತಜ್ಞರ ಸಲಹೆಯಂತೆ ಮೂಲ ಕಟ್ಟಡಕ್ಕೆ ಯಾವುದೇ ಚ್ಯುತಿ ಬಾರದಂತೆ ಹಿಂದೆ ಬಳಸಿದ್ದ ಪರಿಕರಗಳನ್ನೇ ಬಳಸಲಾಗುತ್ತಿದೆ.

ಮೈಸೂರಿನ ಅನೇಕ ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಅದೇ ಪಟ್ಟಿಯಲ್ಲಿ ಕಾಡಾ ಕಚೇರಿಯು ಇದೆ. ಮಾರ್ಚ್‌ನಿಂದ ಆರಂಭವಾಗಿದ್ದ ದುರಸ್ತಿ ಕಾರ್ಯ, ನಿರಂತರ ಮಳೆಯಿಂದ ಸ್ಥಗಿತಗೊಂಡಿತ್ತು. ಈಗ ತ್ವರಿತವಾಗಿ ಕೆಲಸಗಳು ನಡೆಯುತ್ತಿವೆ.

ಮೈಸೂರು ಎಂದರೆ ಎಲ್ಲರಿಗೂ ನೆನಪಾಗುವುದು ಇಲ್ಲಿನ ಸಂಸ್ಕೃತಿ, ಕಲೆ, ಆಚಾರ–ವಿಚಾರಗಳೊಂದಿಗೆ ಇಲ್ಲಿನ ಪಾರಂಪರಿಕ ಕಟ್ಟಡಗಳು. ಇದರ ಸೊಬಗನ್ನು ಸವಿಯಲು ದೇಶ ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಆದರೆ, ಸೂಕ್ತ ನಿರ್ವಹಣೆ ಇಲ್ಲದ ಕಾರಣದಿಂದ ಶಿಥಿಲಗೊಂಡಿರುವ ಅನೇಕ ಕಟ್ಟಡಗಳು ಇತ್ತೀಚೆಗೆ ಕುಸಿದಿವೆ. ಅದಕ್ಕೆ ಉದಾಹರಣೆಯಾಗಿ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ, ಮಹಾರಾಣಿ ಕಾಲೇಜಿನ ಲ್ಯಾಬ್ ವಿಭಾಗ, ಜಯಲಕ್ಷ್ಮೀ ವಿಲಾಸ ಅರಮನೆ.

ಕಾಡಾ ಕಚೇರಿಯನ್ನು ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಅವರು 1921ರಲ್ಲಿ ಅರಮನೆ ಆಡಳಿತ ಕಚೇರಿಗಾಗಿ ನಿರ್ಮಾಣ ಮಾಡಿದ್ದರು. ತದನಂತರ ಕಾಡಾ ಕಚೇರಿಯಾಗಿ ಮಾಡಿಕೊಳ್ಳಲಾಗಿದೆ. ಇಂದು ಇದೇ ಕಟ್ಟಡದಲ್ಲಿ ಚಾಮರಾಜನಗರ ಸಂಸದರಾದ ವಿ.ಶ್ರೀನಿವಾಸ್‌ಪ್ರಸಾದ್ ಕಚೇರಿ, ಎಂಎಲ್‌ಸಿ ಎಚ್.ವಿಶ್ವನಾಥ್ ಕಚೇರಿ, ಕೃಷಿ ಇಲಾಖೆ ಸೇರಿದಂತೆ ಅನೇಕ ಕಚೇರಿಗಳಿದ್ದು ನಿತ್ಯವು ಸಾವಿರಾರು ಮಂದಿ ಭೇಟಿ ನೀಡುತ್ತಾರೆ. ಇಂತಹ ಕಟ್ಟಡ ಸೂಕ್ತ ನಿರ್ವಹಣೆ ಇಲ್ಲದೆ. ತನ್ನ ಸೊಬಗನ್ನು ಕಳೆದುಕೊಂಡಿತ್ತು. ಈಗ 1.65 ಕೋಟಿ ರೂ. ವೆಚ್ಚದಲ್ಲಿ ದುರಸ್ತಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆ ಮುಂದಾಗಿದ್ದು, ಮೈಸೂರು ಮೂಲದವರಿಗೆ ಟೆಂಡರ್ ನೀಡಲಾಗಿದೆ. ಈ ಹಿಂದೆ ಕಟ್ಟಡವನ್ನು ಯಾವ ರೀತಿಯ ಪರಿಕರಗಳನ್ನು ಬಳಸಿ ನಿರ್ಮಾಣ ಮಾಡಲಾಗಿತ್ತೊ ಅದೇ ರೀತಿಯ ಪರಿಕರಗಳನ್ನು ಬಳಸುತ್ತಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ಕಾಮಗಾರಿ ಆರಂಭವಾಗಿದ್ದು, ಮೊದಲು ಕಟ್ಟಡದ ತಾರಸಿಯಿಂದ ಸೋರುತ್ತಿದ್ದ ನೀರನ್ನು ತಪ್ಪಿಸಲು ಪ್ಲಾಸ್ಟಿಂಗ್ ಮಾಡಲು ಆರಂಭಿಸಿದ್ದರು. ಆದರೆ, ನಿರಂತರ ಮಳೆಯಿಂದ ಕಾಮಗಾರಿಗೆ ಬ್ರೇಕ್ ಬಿದ್ದಿತ್ತು.

ಕಟ್ಟಡ ದುರಸ್ತಿಗೆ 1.65 ಕೋಟಿ ರೂ ಅನುದಾನ ಹಂತ ಹಂತವಾಗಿ ಬಿಡುಗಡೆಯಾಗುತ್ತಿದೆ. ನೂರು ವರ್ಷದ ಹಳೆ ಕಟ್ಟಡವಾಗಿರುವುದರಿಂದ ಆತುರ ಮಾಡಿಕೊಳ್ಳದೆ ಪಾರಂಪರಿಕ ತಜ್ಞರ ಸಲಹೆಯೊಂದಿಗೆ ದುರಸ್ತಿ ಕಾಮಗಾರಿ ಮಾಡುತ್ತಿದ್ದೇವೆ. ಮುಂದಿನ ವರ್ಷ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಮುಗಿಯುವ ಸಂಭವವಿದೆ. **–ಹರೀಶ್‌ಕುಮಾರ್, ಎಇ, ಪಿಡಬ್ಲ್ಯೂಡಿ ಇಲಾಖೆ**

ಮಳೆ ಬಿಡುವು ಕೊಟ್ಟ ನಂತರ ಸಂಪೂರ್ಣ ಕಟ್ಟಡದ ತಾರಸಿಗೆ ಪ್ಲಾಸ್ಟಿಂಗ್ ಕಾರ್ಯ ಮುಗಿಸಿದ್ದಾರೆ. ಈಗ ಕಟ್ಟಡದ ಗೋಡೆಗಳಿಗೆ ಪ್ಲಾಸ್ಟಿಂಗ್ ಕಾಮಗಾರಿ ಆರಂಭಿಸಿದ್ದು, ಪಾರಂಪರಿಕ ಕಟ್ಟಡಗಳು ಎಂದರೆ ಸೂಕ್ಷ್ಮವಾಗಿ ಕಾಮಗಾರಿ ಮಾಡಬೇಕು ಎಂಬ ಕಾರಣದಿಂದ ಈ ಹಿಂದೆ ಕಟ್ಟಡ ನಿರ್ಮಾಣಕ್ಕೆ ಬಳಸಿದ್ದ ಬೆಲ್ಲದ ಪಾಕ, ಸುಣ್ಣ, ಅಂಟುವಾಳ ಕಾಯಿ, ಎಂ ಸ್ಯಾಂಡ್, ಇಟ್ಟಿಗೆ ಪುಡಿಯನ್ನೇ ಬಳಸಿ ದುರಸ್ತಿ ಮಾಡುತ್ತಿದ್ದಾರೆ. ಸುಣ್ಣವನ್ನು ಮಿಶ್ರಣ ಮಾಡಿಕೊಳ್ಳಲು ಪ್ರತ್ಯೇಕವಾಗಿ ನಾಲ್ಕು ತೊಟ್ಟಿಗಳನ್ನು ನಿರ್ಮಿಸಿಕೊಂಡಿದ್ದು, ನೀರಿನೊಂದಿಗೆ ಸುಣ್ಣವನ್ನು ನೆನೆಸಿಕೊಂಡಿದ್ದಾರೆ. ಮತ್ತೊಂದೆಡೆ ಅಂಟುವಾಳ ಕಾಯಿ ಒಣಗಿಸಿದ ನಂತರ ಬೆಲ್ಲದ ಪಾಕವನ್ನು ತಯಾರಿಕೊಂಡು ಪ್ಲಾಸ್ಟಿಂಗ್ ಮಾಡುವ ಎರಡು ದಿನದ ಹಿಂದೆಯೇ ಈ ಎಲ್ಲಾ ಪರಿಕರಗಳನ್ನು ಬೆರೆಸಿ ನೆನಸಿಕೊಳ್ಳುತ್ತಿದ್ದಾರೆ.

ಎರಡು ದಿನ ಎಲ್ಲಾ ಮಿಶ್ರಣ ಹದಗೊಂಡ ನಂತರ ಅದನ್ನು ಸ್ವಚ್ಛಗೊಳಿಸಿದ ಗೋಡೆಗಳಿಗೆ ಪ್ಲಾಸ್ಟಿಂಗ್ ಮಾಡಲಾಗುತ್ತಿದೆ. ಇಡೀ ದುರಸ್ತಿಗೆ ಸೀಮೆಂಟ್ ಬಳಸುತ್ತಿಲ್ಲ ಎಂಬುದು ಒಂದು ವಿಶೇಷವಾಗಿದೆ. ಕಟ್ಟಡಕ್ಕೆ ಶತಮಾನವಾಗಿರುವುದರಿಂದ ಮೂಲ ಕಟ್ಟಡಕ್ಕೆ ಚ್ಯುತಿ ಬಾರದಂತೆ ಪಾರಂಪರಿಕ ತಜ್ಞರ ಸಲಹೆ ಪಡೆದುಕೊಂಡು ಸೂಕ್ಷ್ಮವಾಗಿ ದುರಸ್ತಿ ಕಾಮಗಾರಿ ಮಾಡುತ್ತಿದ್ದಾರೆ.

ಡಾ. ಎಸ್.ಪಿ. ಯೋಗಣ್ಣ ರಚಿತ 'ಆರೋಗ್ಯ ಮಿತ್ರ' ಲೇಖನ ಸಂಗ್ರಹ ಕೃತಿ ಬಿಡುಗಡೆ

ಆರೋಗ್ಯವಿದ್ದರಷ್ಟೇ ಮನುಷ್ಯ ಯೋಗಿಯಾಗಲು ಸಾಧ್ಯ

ಹೃದ್ರೋಗ ತಜ್ಞೆ, ಲೇಖಕಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ ಅಭಿಮತ

ಮೈಸೂರು, ನ.30(ಎಂಕೆ)– 'ಚಾಂಡಾಲಾ ಚೌಕುಡಿ' ಗಳೆಂದು ಕರೆಯುವ ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ, ಹೈ ಕೊಲೆಸ್ಟ್ರಾಲ್ ಹಾಗೂ ಸ್ಥೂಲಕಾಯ ಹೃದಯಾಘಾತಕ್ಕೆ ಮುಖ್ಯ ಕಾರಣಗಳಾಗಿವೆ ಎಂದು ಖ್ಯಾತ ಹೃದ್ರೋಗ ತಜ್ಞೆಯೂ ಆದ ವೈದ್ಯ ಲೇಖಕಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ ತಿಳಿಸಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ ರಚಿತ 'ಆರೋಗ್ಯ ಮಿತ್ರ' ಲೇಖನಗಳ ಸಂಗ್ರಹ ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಆರೋಗ್ಯ–ಆಧ್ಯಾತ್ಮ ಒಂದೇ ನಾಣ್ಯದ ಎರಡು ಮುಖಗಳು. ಆರೋಗ್ಯ ಇದ್ದರೆ ಆಧ್ಯಾತ್ಮದ ಸಾಧನೆಯಾಗುತ್ತದೆ. ಆರೋಗ್ಯವಿದ್ದರಷ್ಟೇ ನಾವು ಯೋಗಿಗಳಾಗಲು ಸಾಧ್ಯ. ಕಾಮ, ಕ್ರೋಧ, ಮದ, ಮೋಹ, ಲೋಭ ಮತ್ತು ಮತ್ಸರ ಎಂಬ 'ಆರ'ನ್ನು ಯೋಗ್ಯವಾಗಿಟ್ಟುಕೊಂಡರೆ ಆರೋಗ್ಯವಾಗಿರುತ್ತೇವೆ. ಅಹಂಕಾರ ತ್ಯಜಿಸಿದರೆ ಎಲ್ಲರೂ ನಿಮ್ಮನ್ನು ಪ್ರೀತಿಸುತ್ತಾರೆ ಎಂದು ಕಿವಿಮಾತು ಹೇಳಿದರು.



ಚಪ್ಪಾಳೆಯಲ್ಲಿ ಪ್ರಾಣವಾಯು... ಬೇರೆ ದೇಶಗಳಲ್ಲಿ ಚಪ್ಪಾಳೆ ತಟ್ಟುವುದನ್ನು ಕೇಳಿದರೆ ಕಿವಿಗಳು ಕೆಂಪಾಗುತ್ತವೆ. ನಮ್ಮ ಕೈಯಲ್ಲಿ 39 ಪ್ರಮುಖ ಕೇಂದ್ರಗಳಿದ್ದು, ಜೋರಾಗಿ ಚಪ್ಪಾಳೆ ತಟ್ಟಿದರೆ ಅದರಿಂದ ದೇಹದ 39 ಅಂಗಾಂಗಗಳಿಗೆ ಪ್ರಾಣವಾಯು ತಲುಪುತ್ತದೆ. ಆರೋಗ್ಯ ವೃದ್ಧಿಯಾಗುತ್ತದೆ. ರಕ್ತದೊತ್ತಡ, ಡಯಾಬಿಟಿಸ್ ಕಡಿಯಾಗುತ್ತದೆ. ಶರೀರದಲ್ಲಿರುವಂತಹ 60 ಟ್ರಿಲಿಯನ್ ಜೀವಕಣಗಳಿಗೆ ಪ್ರಾಣವಾಯು ಮುಟ್ಟುತ್ತದೆ. ಮುಖದಲ್ಲಿ ನಗು ಹರಳುತ್ತೆ. ನಿಮಗೂ ಸಂತೋಷದ ಹಾರ್ಮೋನ್‌ಗಳು ಉತ್ಪತ್ತಿಯಾಗಿ ಆರೋಗ್ಯ ಚೆನ್ನಾಗುತ್ತದೆ. **– ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ವೈದ್ಯ ಲೇಖಕಿ**

ಪರಮಾತ್ಮನ ಅವಾಸಸ್ಥಾನವಾಗಿರುವ ಹೃದಯ ಇಡೀ ಶರೀರದ ನಕಶಿಕಾಂತರ ತಾಪಮಾನವನ್ನು ಸರಿಯಾಗಿಡುತ್ತದೆ. ಇದರಲ್ಲಿ ಅಗ್ನಿ ಅತ್ಯಂತ ಸೂಕ್ಷ್ಮ ರೂಪದಲ್ಲಿದ್ದು, ಬ್ರಹ್ಮ(ಜೀವಕಣ ಬೆಳೆಸುವುದು), ವಿಷ್ಣು(ಉಳಿಸುವುದು), ಮಹೇಶ್ವರ(ಬೇಡವಾದನ್ನು ಸಾಯಿಸುವುದು) ಇರುತ್ತಾರೆ. ಆದ್ದರಿಂದ ನಮ್ಮ ಹೃದಯ ಮಿಡಿಯಬೇಕು ಎಂದರೆ ಯಾವಾಗಲೂ ಸಂತೋಷವಾಗಿರಬೇಕು. ಸಿಟ್ಟು, ಸೊಕ್ಕು ಸೇಡು ತೋರಿಸುವ ಧಾರಾವಾಹಿಗಳನ್ನು ನೋಡಿಕೊಂಡು ಮಹಿಳೆಯರು ತಮ್ಮ ಆಲೋಚನೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಕೆಲಸ ಮಾಡದೆ ಮೈ ಬೆಳೆಸಿಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಬಾಯಿಯ ಸುಖಕ್ಕಾಗಿ ದೇಹ ಹಾಳಾಗುತ್ತಿದೆ: ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಬಾಯಿಯ ಸುಖಕ್ಕಾಗಿ ಕುರುಕಲು ತಿಂಡಿ–ತಿನಿಸುಗಳನ್ನು ತಿಂದು ದೇಹದ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ಜೇಬಿನಲ್ಲಿ ಸದಾ ಮಾತ್ರೆಗಳನ್ನು ಇಟ್ಟುಕೊಂಡು ಓಡಾಡುವ ಸ್ಥಿತಿಗೆ ಬಂದಿದ್ದೇವೆ ಎಂದರು. 'ಆರೋಗ್ಯ ಮಿತ್ರ' ಕೃತಿಯ ಕಡೆಯಲ್ಲಿ 'ಮೈಸೂರು ಮಿತ್ರ' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು 'ಆರೋಗ್ಯ ಮಿತ್ರ' ಕೃತಿ ಪ್ರತಿಯೊಬ್ಬರು ಓದಲೇಬೇಕಾದ ಪುಸ್ತಕ. ಏಕೆಂದರೆ ಆರೋಗ್ಯ ಸಮಸ್ಯೆಗಳನ್ನು ಎದುರಿಸಲು ಓದಬೇಕಾದ ಪುಸ್ತಕವಾಗಿದೆ ಎಂದು ಬರೆದಿದ್ದಾರೆ ಎಂದು ತಿಳಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುವುದರ ಮಹತ್ವವನ್ನು ತಿಳಿಸಿಕೊಟ್ಟರು. ನಿವೃತ್ತ ಪ್ರಾಧ್ಯಾಪಕ ಪ್ರೊ.ತಿರುಮಲಚಾರ್, ಸಾಹಿತಿ ಪ್ರೊ.ಸಿ.ನಾಗಣ್ಣ, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಪ್ರಕಾಶಕ ಡಿ.ಎನ್.ಲೋಕಪ್ಪ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಪ್ರತ್ಯೇಕ ಮುಸ್ಲಿಂ ಕಾಲೇಜು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿಲ್ಲ

ಬೆಂಗಳೂರು,ನ.30–ಪ್ರತ್ಯೇಕವಾಗಿ ಮುಸ್ಲಿಂ ಕಾಲೇಜುಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸಚಿವ ಬಿ.ಸಿ.ನಾಗೇಶ್ ಸ್ಪಷ್ಟಪಡಿಸಿದ್ದಾರೆ.



ಸರ್ಕಾರದಿಂದಲೇ ಮುಸ್ಲಿಂ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ ಅನ್ನೋ ವಿಚಾರ ಕೇಳಿಬರುತ್ತಿದೆ. ಇಂತಹ ಯಾವುದೇ ಪ್ರಸ್ತಾವನೆಯನ್ನು ಶಿಕ್ಷಣ ಇಲಾಖೆ ಸಲ್ಲಿಸಿಲ್ಲ. ಪ್ರತ್ಯೇಕ ಮುಸ್ಲಿಂ ಕಾಲೇಜು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೂ ಇಲ್ಲ ಎಂದು ತಿಳಿಸಿದ್ದಾರೆ.


ಏನಿದು ಪ್ರತ್ಯೇಕ ಮುಸ್ಲಿಂ ಕಾಲೇಜು ವಿವಾದ: ಉಡುಪಿಯಲ್ಲಿ ಹಿಜಾಬ್ ವಿವಾದ ಉದ್ಭವಿಸಿದ ನಂತರ ತರಗತಿಗಳಲ್ಲಿ ಹಿಜಾಬ್ ಧರಿಸದಂತೆ ಆದೇಶ ಹೊರಡಿಸಿತ್ತು. ಈ ವಿಚಾರ ನ್ಯಾಯಾಲಯದ ಮೆಟ್ಟಿಲೇರಿತ್ತು. ಇದರಿಂದಾಗಿ ಬಹುತೇಕ ಮುಸ್ಲಿಂ ಸಂಘ ಸಂಸ್ಥೆಗಳು, ಸರ್ಕಾರದ ವಿರುದ್ಧ ತಿರುಗಿಬಿದ್ದು ಹೆಣ್ಣುಮಕ್ಕಳಿಗೆ ತೊಂದರೆ ಯಾಗುತ್ತಿದೆ ಎಂದು ಹೇಳಿದ್ದರು. ಹೀಗಾಗಿ ಮುಸ್ಲಿಂ ಹೆಣ್ಣುಮಕ್ಕಳಿಗಾಗಿ ಸರ್ಕಾರವೇ ಪ್ರತ್ಯೇಕ ಕಾಲೇಜು ಸ್ಥಾಪನೆ ಮಾಡಲು ಮುಂದಾಗಿದೆ ಮೂಲಗಳು ತಿಳಿಸಿದ್ದವು.



ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವತಿಯಿಂದ ಕನ್ನಡ ರಾಜ್ಯೋತ್ಸವ, ರಾಷ್ಟ್ರೀಯ ಹಾಲು ದಿನಾಚರಣೆ ಅಂಗವಾಗಿ ನಡೆದ ಸಮಾರಂಭದಲ್ಲಿ ಹಿರಿಯ ಸಹಕಾರಿಗಳು ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ಎ.ಟಿ. ಸೋಮಶೇಖರ್, ಕೆ.ಉಮಾಶಂಕರ್, ಸಿ.ಓಂಪ್ರಕಾಶ್ ಅವರನ್ನು ಒಕ್ಕೂಟದ ವತಿಯಿಂದ ಸನ್ಮಾನಿಸಲಾಯಿತು. ಇದೇ ವೇಳೆ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜೇತರಾದ ಆಡಳಿತ ಮಂಡಳಿ ನಿರ್ದೇಶಕರು, ಅಧಿಕಾರಿಗಳು, ಸಿಬ್ಬಂದಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು. ಚಿತ್ರದಲ್ಲಿ ಒಕ್ಕೂಟದ ಅಧ್ಯಕ್ಷ ಇ.ಎಂ.ಪ್ರಸನ್ನ, ನಿರ್ದೇಶಕರಾದ ಕೆ.ಈರೇಗೌಡ, ಹೆಚ್.ಡಿ.ರಾಜೇಂದ್ರ, ಬಿ.ಎನ್.ಸದಾನಂದ, ಆರ್.ಚೆಲುವರಾಜು, ಶ್ರೀಮತಿ ದಾಕ್ಷಾಯಿಣಿ, ಶ್ರೀಮತಿ ಲೀಲಾ, ಶ್ರೀಮತಿ ನೀಲಾಂಬಿಕೆ ಮಹೇಶ್, ಶ್ರೀಮತಿ ಎ.ಶಿವಗಾಮಿ, ವ್ಯವಸ್ಥಾಪಕ ನಿರ್ದೇಶಕ ಡಿ.ಎನ್.ವಿಜಯಕುಮಾರ್ ಇತರರು ಹಾಜರಿದ್ದಾರೆ.

ಡಿ.3, ದಸರಾ ವಸ್ತುಪ್ರದರ್ಶನದಲ್ಲಿ ಸುಧಾಬರಗೂರು ಹಾಸ್ಯ ಸಂಜೆ

ಮೈಸೂರು, ನ.30–ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಡಿಸೆಂಬರ್ 3ರ ಶನಿವಾರ ಸಂಜೆ 6 ಘಂಟೆಗೆ ಜನಪ್ರಿಯ ಹಾಸ್ಯ ಕಲಾವಿದೆ ಸುಧಾ ಬರಗೂರು ತಂಡದ ವತಿಯಿಂದ ಹಾಸ್ಯಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೇಕಪ್ ಮ್ಯಾನ್ ವೇಣುಗೋಪಾಲ್ ಕುಟುಂಬಕ್ಕೆ ಆರ್ಥಿಕ ನೆರವು

ಮೈಸೂರು, ನ.30(ಎಂಕೆ)– ಇತ್ತೀಚೆಗೆ ನಿಧನರಾದ ರಂಗಭೂಮಿ ಮೇಕಪ್ ಮ್ಯಾನ್ ವೇಣುಗೋಪಾಲ್ ಕುಟುಂಬಸ್ಥರಿಗೆ ಕರ್ನಾಟಕ ರಾಜ್ಯ ಕಲಾವಿದರ ಒಕ್ಕೂಟದ ಉಪಾಧ್ಯಕ್ಷ ಹುಯಿಲಾಳು ರಾಮಸ್ವಾಮಿ ಆರ್ಥಿಕ ನೆರವು ನೀಡಿದ್ದಾರೆ.



ಹಲವಾರು ವರ್ಷಗಳಿಂದ ರಂಗಭೂಮಿ ಮೇಕಪ್ ಮ್ಯಾನ್ ಆಗಿ ಸೇವೆ ಸಲ್ಲಿಸಿದ್ದ ವೇಣುಗೋಪಾಲ್, ನ.17ರಂದು ಹೃದಯಾಘಾತದಿಂದ ನಿಧನರಾಗಿದ್ದರು. ಕುಟುಂಬಕ್ಕೆ ಆಧಾರವಾಗಿದ್ದ ವೇಣುಗೋಪಾಲ್ ನಿಧನದಿಂದ ಕುಟುಂಬಸ್ಥರ ಜೀವನ ನಡೆಸುವುದು ಕಷ್ಟವಾಗಿತ್ತು.

ಇದನ್ನು ಮನಗಂಡ ಕರ್ನಾಟಕ ರಾಜ್ಯ ಕಲಾವಿದರ ಒಕ್ಕೂಟದ ಉಪಾಧ್ಯಕ್ಷ ಹುಯಿಲಾಳು ರಾಮಸ್ವಾಮಿ, ವೇಣುಗೋಪಾಲ್ ಕುಟುಂಬಸ್ಥರಿಗೆ ಆರ್ಥಿಕ ನೆರವು ನೀಡಿ, ಸಾಂತ್ವನ ಹೇಳಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗಣ್ಯರು ಹಾಗೂ ಕಲಾಭಿಮಾನಿಗಳು ರಂಗಭೂಮಿಯಲ್ಲಿ ದುಡಿದು ನಿಧನ ಹೊಂದಿದವರ ಕುಟುಂಬಕ್ಕೆ ಸಹಾಯಹಸ್ತ ನೀಡುವಂತೆ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಉಮೇಶ ಡ್ರಾಮ ಸೀನರಿ ಮಾಲೀಕ ರಮೇಶ್, ಸಾಹುಕಾರ್‌ಹುಂಡಿ ಗೋಪಾಲಗೌಡ, ಹುಯಿಲಾಳು ಜಯರಾಮು, ಕೃಷ್ಣಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪಾಲಿಕೆ ಅದಾಲತ್‌ಗೆ ತೆರೆ: 272ರಲ್ಲಿ 98 ಅರ್ಜಿಗಳ ವಿಲೇವಾರಿ

ಮೈಸೂರು,ನ.30(ಆರ್‌ಕೆ)–ನವೆಂಬರ್ 14ರಿಂದ 19ರವರೆಗೆ ನಡೆದ ಮೈಸೂರು ಮಹಾನಗರ ಪಾಲಿಕೆ ಅದಾಲತ್ ಅಂತ್ಯಗೊಂಡಿದೆ.

ಮೈಸೂರಿನ ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಪಾಲಿಕೆ ಪ್ರಧಾನ ಕಚೇರಿಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಅಂತಿಮ ಅದಾಲತ್‌ನಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ ಹಾಗೂ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅದಾಲತ್‌ನಲ್ಲಿ ಸ್ವೀಕೃತಿಯಾಗಿದ್ದ ಅರ್ಜಿದಾರರಿಗೆ ವಿವಿಧ ಸೇವಾ ದಾಖಲೆಗಳನ್ನು ವಿತರಿಸಿದರು.

ಖಾತೆ ವರ್ಗಾವಣೆ ಹಾಗೂ ಪೌತಿ ಖಾತೆ ಕೋರಿ ಅದಾಲತ್‌ನಲ್ಲಿ ಕಂದಾಯ ಶಾಖೆಗೆ ಸಲ್ಲಿಕೆಯಾಗಿದ್ದ 82 ಅರ್ಜಿಗಳ ಪೈಕಿ 35 ಮಂದಿಗೆ ಅಂತಿಮ ಅದಾಲತ್‌ನಲ್ಲಿ ಇಂದು ಖಾತಾ ಪತ್ರವನ್ನು ವಿತರಿಸಲಾಯಿತು. ಕೆಲವು ತಾಂತ್ರಿಕ ಅಡಚಣೆಗಳಿಂದಾಗಿ ಉಳಿದ 47 ಅರ್ಜಿಗಳ ಸಂಬಂಧ ಮಹಿತಿಯೊಂದಿಗೆ ಹಿಂಬರಹ ನೀಡಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಇಂಜಿನಿಯರಿಂಗ್ ಶಾಖೆಗೆ ಸಲ್ಲಿಕೆಯಾಗಿದ್ದ 59 ಅರ್ಜಿ ಪೈಕಿ ನಕ್ಷೆ ಉಲ್ಲಂಘನೆಯಾಗದ ಹಾಗೂ ಎಲ್ಲಾ ದಾಖಲಾತಿಗಳು ಊರ್ಜಿತವಾಗಿದ್ದ 6 ಅರ್ಜಿದಾರರಿಗೆ ಸಿಆರ್ ನೀಡಲಾಯಿತು. ಆಶ್ರಯ ಶಾಖೆಯ 54ರ ಪೈಕಿ ಎಲ್ಲಾ ದಾಖಲೆಗಳೂ ಸರಿ ಇದ್ದ 30 ಮಂದಿ ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಹಕ್ಕು ಖುಲಾಸೆ ಪತ್ರ ನೀಡಲು ಆಯುಕ್ತರು ಅನುಮೋದನೆ ನೀಡಿದರು. ನಂತರ ಆಯಾ ಕ್ಷೇತ್ರದ ಶಾಸಕರ ಸಮ್ಮುಖದಲ್ಲಿ ಅವರಿಗೆ ದಾಖಲೆ ಪತ್ರ ವಿತರಿಸುವರು. ಬಡತನ ನಿರ್ಮೂಲನಾ ಶಾಖೆಗೆ ಸ್ವೀಕೃತವಾಗಿದ್ದ 30 ಅರ್ಜಿಗಳ ಪೈಕಿ 11 ಇತ್ಯರ್ಥವಾಗಿವೆ. ಒಳಚರಂಡಿ ವಿಭಾಗದ 15ರ ಪೈಕಿ ಕೇವಲ 3 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ನೀರು ಸರಬರಾಜು ಸಂಬಂಧದ 15 ದೂರುಗಳ ಪೈಕಿ 7, ಆರೋಗ್ಯ ಶಾಖೆಯ 6ರ ಪೈಕಿ 1, ತೋಟಗಾರಿಕೆ ವಿಭಾಗಕ್ಕೆ ಸಲ್ಲಿಕೆಯಾಗಿದ್ದ ಎಲ್ಲಾ 5 ಅರ್ಜಿಗಳನ್ನೂ ಇತ್ಯರ್ಥಗೊಳಿಸಲಾಗಿದೆ ಎಂದು ಪಾಲಿಕೆ ಉಪಆಯುಕ್ತೆ ಎಂ.ಕೆ.ಸವಿತಾ ಅದಾಲತ್‌ನಲ್ಲಿ ಮಾಹಿತಿ ನೀಡಿದರು.

ಅಂತಿಮ ಅದಾಲತ್‌ನಲ್ಲಿ 18 ಅರ್ಜಿ ಸ್ವೀಕೃತಿ



ಆಡಳಿತ ಶಾಖೆ, ಜನನ–ಮರಣ ದಾಖಲಾತಿ, ಮಾರುಕಟ್ಟೆ, ಮರಾಮತ ಶಾಖೆ ಸೇರಿದಂತೆ ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 12 ವಿಭಾಗಗಳಿಗೆ ಅದಾಲತ್ ವೇಳೆ ಸ್ವೀಕೃತಿಯಾಗಿದ್ದ 272 ಅರ್ಜಿಗಳ ಪೈಕಿ 98 ಅನ್ನು ಇತ್ಯರ್ಥಗೊಳಿಸಿದ್ದು ಉಳಿದ 174 ಅರ್ಜಿದಾರರಿಗೆ ಸೂಕ್ತ ಮಾಹಿತಿಯೊಂದಿಗೆ ಹಿಂಬರಹ ನೀಡಲಾಗಿದೆ ಎಂದು ತಿಳಿಸಿದರು.

ಇಂದಿನ ಅಂತಿಮ ಅದಾಲತ್‌ನಲ್ಲಿ ಒಟ್ಟು 18 ಅರ್ಜಿಗಳು ಸ್ವೀಕೃತ ವಾಗಿದ್ದು, ಅವುಗಳನ್ನು ಪರಿಶೀಲಿಸಿ, ಸಂಬಂಧಪಟ್ಟ ವಿಭಾಗದ ಅಧಿಕಾರಿಗಳು ನಿಯಮಾನುಸಾರ ವಿಲೇವಾರಿ ಮಾಡುವರು. ಪ್ರತೀದಿನ ಸಾರ್ವಜನಿಕರಿಂದ ಪಾಲಿಕೆ ಕಚೇರಿಗೆ ಬರುವ ಅರ್ಜಿಗಳನ್ನು ಆಯಾ ವಲಯ ಕಚೇರಿಯಲ್ಲಿ ಇತ್ಯರ್ಥಪಡಿಸುವ ಪ್ರಕ್ರಿಯೆ ಮುಂದುವರೆಯಲಿದ್ದು, ವಿಳಂಬ ಮಾಡದೇ ಸಾರ್ವಜನಿಕರಿಗೆ ಕೋರಿದ ಸೇವೆಗಳನ್ನು ಒದಗಿಸಬೇಕು ಎಂದು ಮೇಯರ್ ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ರಂಜಿತ್‌ಕುಮಾರ್, ಸುವರ್ಣ, ಮಧುಸೂದನ್, ಮೃತ್ಯುಂಜಯ, ನಗರ ಯೋಜನಾ ಶಾಖೆಯ ಜಂಟಿ ನಿರ್ದೇಶಕ ವೇಣುಗೋಪಾಲ್, ವಲಯ ಅಧಿಕಾರಿಗಳು, ಕಂದಾಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳು ಹಾಗೂ ನಗರಪಾಲಿಕೆ ಎಲ್ಲಾ ಅಧಿಕಾರಿಗಳು ಇಂದಿನ ಅಂತಿಮ ಅದಾಲತ್‌ನಲ್ಲಿ ಹಾಜರಿದ್ದರು.

ಮನುವಾದಿಗಳ ಶೋಷಣೆಯಿಂದ ಅಸಮಾನತೆ ಜೀವಂತ

ಕನಕದಾಸ ಜಯಂತಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ



ನಂಜನಗೂಡು, ನ.30– ಶೋಷಣೆಗೆ ಒಳಗಾದವರಿಗೆ ಮೀಸಲಾತಿ ನೀಡಬೇಕೆಂಬುದು ಡಾ.ಬಿ.ಆರ್. ಅಂಬೇಡ್ಕರ್ ಆಶಯವಾಗಿತ್ತು. ಆದರೆ ಪ್ರಧಾನಿ ಮೋದಿ ಮೇಲ್ವರ್ಗದ ಸಾಮಾನ್ಯ ಸಮುದಾಯದ ಬಡವರಿಗೂ ಶೇ.10ರಷ್ಟು ಮೀಸಲಾತಿ ನೀಡಿದರು. ಹೀಗಾಗಿ ಸಮಾಜದಲ್ಲಿ ಹೇಗೆ ಸಮಾನತೆ ಬರಲು ಸಾಧ್ಯ ಎಂದು ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ನಗರದ ವಿದ್ಯಾವರ್ಧಕ ಕಾಲೇಜು ಮೈದಾನದಲ್ಲಿ ಕನಕದಾಸ ಸಾರ್ವಜನಿಕ ವಿದ್ಯಾರ್ಥಿ ನಿಲಯ, ತಾಲೂಕು ಕುರುಬರ ಸಂಘ, ಕನಕದಾಸ ಜಯಂತೋತ್ಸವ ಸಮಿತಿಯಿಂದ ನಡೆದ ಭಕ್ತ ಕನಕದಾಸರ 535ನೇ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುವಾದಿಗಳು ಶೋಷಿತ ಸಮಾಜಗಳಿಗೆ ವಿದ್ಯೆ ಕಲಿಯಲು ಅವಕಾಶ ನೀಡದ ಕಾರಣ ಇಂದಿಗೂ ಅಸಮಾನತೆ ಜೀವಂತವಾಗಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಮೇಲ್ವರ್ಗದ ಬಡವರಿಗೂ ಸದ್ದು ಗದ್ದಲವಿಲ್ಲದೆ ಒಂದೇ ದಿನ ಲೋಕಸಭೆ, ರಾಜ್ಯಸಭೆಯಲ್ಲಿ ಮೀಸಲಾತಿ ಅನುಮೋದನೆಗೊಳಿಸಿ ಕಾನೂನು ಮಾಡಿದರು ಎಂದರು.

ಬಡವರು ಹಸಿವಿನಿಂದ ಇರಬಾರದೆಂದು ಅನ್ನಭಾಗ್ಯ ಯೋಜನೆಯಡಿ 7 ಕೆಜಿ ಅಕ್ಕಿ ನೀಡಿದೆ. ಆದರೆ ಬಿಜೆಪಿಯವರು 5 ಕೆಜಿಗೆ ಇಳಿಸಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ ಆಹಾರ ಧಾನ್ಯ ನೀಡುತ್ತಿರುವುದು ಕೇಂದ್ರ ಸರ್ಕಾರ ಸಿದ್ದರಾಮಯ್ಯ ಪುಕ್ಕಟೆ ಪ್ರಚಾರ ನಡೆಸುತ್ತಿದ್ದಾರೆ ಎನ್ನುತ್ತಾರೆ. ಆಹಾರ ಭದ್ರತಾ ಕಾಯ್ದೆ, ನರೇಗಾ ಜಾರಿಗೆ ತಂದಿದ್ದು ಕಾಂಗ್ರೆಸ್ ಪಕ್ಷವಲ್ಲವೇ ಎಂದು ಜರಿದ ಅವರು ಇಂದಿರಾ ಕ್ಯಾಂಟೀನ್ ಮುಚ್ಚಿದ್ದಾರೆ. ನನ್ನ ಅವಧಿಯಲ್ಲಿ 15 ಲಕ್ಷ ಮನೆ ಮಂಜೂರಾಗಿತ್ತು. ಬಿಜೆಪಿ ಸರ್ಕಾರ ಬಡವರಿಗೆ ಏನು ಮಾಡಿದೆ? ಕಳೆದ ನಾಲ್ಕೂವರೆ ವರ್ಷದಿಂದ 1 ಮನೆಯನ್ನೂ ಮಂಜೂರು ಮಾಡಿಲ್ಲ. ಇವರ ಯೋಗ್ಯತೆಗೆ ಆನೆಗಳನ್ನು ಓಡಿಸುವ ಕೆಲಸವನ್ನೂ ಮಾಡಿಲ್ಲ. ಸಿ.ಟಿ.ರವಿ ನಾವು ದೇಶಭಕ್ತರು, ಸಿದ್ದರಾಮಯ್ಯ ಮುಸಲ್ಮಾನರನ್ನು ಓಲೈಸುತ್ತಾನೆ ಎನ್ನುತ್ತಾರೆ. ಆದರೆ ನಾನು ಮನುಷ್ಯ ಜಾತಿ ಜನರನ್ನು ಪ್ರೀತಿಸುತ್ತೇನೆ. ನಿಜವಾಗಿ ಕನಕದಾಸರ ಬಗ್ಗೆ ಗೌರವ ಇಟ್ಟುಕೊಂಡಿರುವವರು ಯಾರೂ ಸಹ ಬಿಜೆಪಿಗೆ ಮತ ನೀಡಬಾರದು ಎಂದರು.

ವರುಣಾದಿಂದಲೇ ಸ್ಪರ್ಧೆ ಮಾಡಬೇಕೆಂಬ ಜನರ ಒತ್ತಾಯಕ್ಕೆ ಉತ್ತರಿಸಿದ ಸಿದ್ದರಾಮಯ್ಯ ವರುಣಾ ಜನರು 2 ಬಾರಿ ನನ್ನನ್ನು ಗೆಲ್ಲಿಸಿ ಒಮ್ಮೆ ವಿಪಕ್ಷ ನಾಯಕನಾಗಿ, ಮತ್ತೊಮ್ಮೆ ಮುಖ್ಯಮಂತ್ರಿಯನ್ನಾಗಿ ಮಾಡಿದ್ದಾರೆ. ಎಂದಿಗೂ ಸಹ ನಾನು ಈ ಕ್ಷೇತ್ರದ ಜನರನ್ನು ಮರೆಯಲ್ಲ. ಎಲ್ಲಿದ್ದರೂ ನಮ್ಮ ಕ್ಷೇತ್ರದ ಜನರೇ, ಸ್ಪರ್ಧೆ ಬಗ್ಗೆ ಮುಂದೆ ನೋಡೋಣ ಎಂದು ನುಡಿದರು.

ಕನಕದಾಸರು ಸಮಾಜದಲ್ಲಿ ಜಾತಿ, ಬೇಧ, ಮೇಲು–ಕೀಳೆಂಬ ತಾರತಮ್ಯ ಇರಬಾರದು. ಸಮಸಮಾಜ ನಿರ್ಮಾಣವಾಗಬೇಕೆಂದು ಕನಸು ಕಂಡು ಬದುಕಿನುದ್ದಕ್ಕೂ ಸಮಾಜ ತಿದ್ದುವ ಕೆಲಸ ಮಾಡಿದವರು. ಅವರ ತತ್ವಾದರ್ಶ ನಮಗೆ ದಾರಿ ದೀಪ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಸಿದ್ದರಾಮಯ್ಯ ಸ್ವಾಭಿಮಾನಿ, ಬದ್ಧತೆಯುಳ್ಳ ರಾಜಕಾರಣಿ. ಸಮುದಾಯದ ಜನರು ಅನೇಕ ಕುರುಬ ರಾಜಕಾರಣಿಗಳಿದ್ದರೂ, ಸಿದ್ದರಾಮಯ್ಯರಿಗೆ ಕನಕದಾಸರಷ್ಟೇ ಗೌರವ ನೀಡುತ್ತಿದ್ದಾರೆ. ಇದಕ್ಕೆ ಅವರ ಹೃದಯ ವೈಶಾಲ್ಯತೆಯೇ ಕಾರಣ. ಅವರು ಸಿಎಂ ಆಗಿದ್ದಾಗ ವರುಣಾ ಕ್ಷೇತ್ರಕ್ಕೆ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಿ ಮಾದರಿ ಕ್ಷೇತ್ರವನ್ನಾಗಿ ಮಾಡಿದ್ದಾರೆ. ಅವರು ಅಲ್ಲಿಂದಲೇ ಸ್ಪರ್ಧಿಸಬೇಕು ಎಂದರು.

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, 1988ರಲ್ಲಿ ಮೊದಲ ಬಾರಿಗೆ 500ನೇ ಕನಕ ಜಯಂತಿ ಪ್ರಾರಂಭಿಸಿ ರಾಜ್ಯದ ಉದ್ದಗಲಕ್ಕೂ ಸಮುದಾಯದಲ್ಲಿ ಜಾಗೃತಿ ಮೂಡಿಸಿದವರು ಸಿದ್ದರಾಮಯ್ಯ ಎಂದರು.

ಶಾಸಕ ಯತೀಂದ್ರ ಮಾತನಾಡಿ, ಸಮುದಾಯದವರು ಮೇಲ್ವರ್ಗದವರ ಭಯದಿಂದ ಕುರುಬರು ಎಂದು ಹೇಳಿಕೊಳ್ಳಲು ಹಿಂಜರಿಯುತ್ತಿದ್ದರು. ಕನಕಪೀಠ ಸ್ಥಾಪನೆ ಮಾಡಿ ನಮ್ಮ ತಂದೆಯವರು 500ನೇ ಕನಕ ಜಯಂತಿ ಪ್ರಾರಂಭಿಸಿದ ನಂತರ ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವ ಶಕ್ತಿ ಬಂದಿದೆ. ಶಕ್ತಿ ಪಡೆಯುವ ಸ್ಥಾನದಲ್ಲಿ ಬಡವರು ಇರುವುದರಿಂದ ಹಿಂದುಳಿದ ವರ್ಗಗಳು ಒಂದಾಗಬೇಕು. ನನ್ನ ತಂದೆಯವರು ವರುಣಾ ಕ್ಷೇತ್ರದಿಂದಲೇ ಸ್ಪರ್ಧೆ ಮಾಡಬೇಕೆಂದು ನಾನು ವೇದಿಕೆಯಲ್ಲಿ ಕೇಳಿಕೊಳ್ಳುತ್ತೇನೆ ಎಂದರು.

ಸಮಾರಂಭದಲ್ಲಿ ಎಂಎಲ್‌ಸಿ ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಮುಖಂಡರಾದ ಸುನೀಲ್ ಬೋಸ್, ಗಣೇಶ್ ಪ್ರಸಾದ್, ಕನಕದಾಸ ವಿದ್ಯಾರ್ಥಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾಸಿದ್ದಶೆಟ್ಟಿ, ಜಿಪಂ ಮಾಜಿ ಅಧ್ಯಕ್ಷ ಶಂಕರಪ್ಪ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮಹೇಶ್, ರಂಗಸ್ವಾಮಿ, ಶ್ರೀಕಂಠನಾಯಕ, ಮುಖಂಡರಾದ ನಾಗೇಶ್ ರಾಜ್, ನಂದಕುಮಾರ್, ಇಂಧನ್ ಬಾಬು, ನಗರಸಭಾ ಸದಸ್ಯರಾದ ಗಂಗಾಧರ್, ಪ್ರದೀಪ್ ಸೇರಿದಂತೆ ಇತರರಿದ್ದರು.

ಮತ್ತೆ ಮುನ್ನೆಲೆಗೆ ಬಂದ ಮುಂದಿನ ಸಿಎಂ ಕೂಗು

ನಂಜನಗೂಡು, ನ.30– ನಗರದಲ್ಲಿ ನಡೆದ ಭಕ್ತ ಕನಕದಾಸರ 535ನೇ ಜಯಂತೋತ್ಸವದಲ್ಲಿ ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿಗಳಾಗಬೇಕು ಎಂಬ ಕೂಗು ಕೇಳಿ ಬಂತು.

ಈ ವೇಳೆ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಿದ್ದರಾಮಯ್ಯನವರೇ ಮುಂದಿನ ಸಿಎಂ ಎಂದು ಹೇಳಬೇಡಿ ಎಂದು ಪಕ್ಷದ ವರಿಷ್ಠರು ಹೇಳುತ್ತಾರೆ. ರಾಜ್ಯದ ಜನತೆಯೇ ಹೇಳುತ್ತಿದ್ದಾರೆ ಇದಕ್ಕೆ ಏನು ಮಾಡುವುದು? ಸಿದ್ದರಾಮಯ್ಯರವರ ಜನಪರ ಸೈದ್ಧಾಂತಿಕ ಗಟ್ಟಿ ನಿಲುವು ಮತ್ತು ಜನಪರ ಆಲೋಚನೆಗಳಿಂದ ರಾಜ್ಯದ ಜನತೆ ಸಿದ್ದರಾಮಯ್ಯನವರ ನಾಯಕತ್ವ ಬೇಕು. ಅವರೇ ಮುಂದಿನ ಸಿಎಂ ಆಗಬೇಕೆಂದು ಜನರು ಹೇಳುತ್ತಿದ್ದಾರೆ. ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕಿದೆ ಎಂದು ಪರೋಕ್ಷವಾಗಿ ಮುಂದಿನ ಸಿಎಂ ಸಿದ್ದರಾಮಯ್ಯನವರೇ ಎಂದರು.

> ಮೊದಲ ಬಾರಿಗೆ ಕೆಂಪೇಗೌಡ ಜಯಂತಿ ಜಾರಿಗೆ ತಂದಿದ್ದು ನಾನು, ಕೆಂಗಲ್ ಹನುಮಂತಯ್ಯ, ಎಸ್.ಎಂ.ಕೃಷ್ಣ, ಹೆಚ್.ಡಿ.ದೇವೇಗೌಡ, ಹೆಚ್.ಡಿ.ಕುಮಾರಸ್ವಾಮಿ ಆದಿಯಾಗಿ ಯಾರೂ ಮಾಡಲಿಲ್ಲ. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ವಿಮಾನ ನಿಲ್ದಾಣವೆಂದು ಹೆಸರಿಟ್ಟಿದ್ದು ನಾನು. ಆದರೆ ಶೇ.40 ಕಮಿಷನ್ ಗಿರಾಕಿಗಳು ಎಲ್ಲೂ ಸಹ ನನ್ನ ಹೆಸರು ಹೇಳುತ್ತಿಲ್ಲ. ಭಗೀರಥ ಜಯಂತಿ, ಭಗೀರಥ ನಿಗಮ ಸ್ಥಾಪಿಸಿದ್ದು ನಾನು. ಆದರೆ ಈಗಿನ ಸರ್ಕಾರ ಅವರಿಗೆ ಅನುದಾನ ನೀಡಲಿಲ್ಲ. ಸಮುದಾಯದ ಯಾರೊಬ್ಬರನ್ನೂ ಶಾಸಕ, ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಲಿಲ್ಲ. ನಂಜನಗೂಡಿನಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 3 ಕೋಟಿ ಅನುದಾನ ನೀಡಿ. ಮಿಕ್ಕ ಅನುದಾನ ಕೊಡಿಸಿ ಕಾಮಗಾರಿ ಪೂರ್ಣಗೊಳಿಸಿದೆ. ಆದರೆ ಹಟ್ಟಿಕ್ಕಿದವರಿಗಿಂತ ಭಟ್ಟಿಕ್ಕಿದವರು ಮೇಲು ಎಂಬಂತೆ ಭವನವನ್ನು ಬಿಜೆಪಿಯವರು ಉದ್ಘಾಟಿಸಿದ್ದಾರೆ.
>
> – ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಹುಣಸೂರು ನ30– ಅಖಿಲ ಭಾರತ ವಿಮಾ ಪ್ರತಿನಿಧಿಗಳ ಸಂಘಟನೆ (ಎಲ್‌ಐಸಿಏಓಐ) ಕರೆ ಮೇರೆಗೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ವಿಮಾ ಪ್ರತಿನಿಧಿಗಳು ಪ್ರತಿಭಟನೆ ನಡೆಸಿದರು.

ನಗರದ ಭಾರತೀಯ ಜೀವ ವಿಮಾ ಶಾಖೆ ಎದುರು ಜಮಾಯಿಸಿದ ಪ್ರತಿನಿಧಿಗಳು ಗುಂಪು ವಿಮೆ ಮಿತಿ ಹೆಚ್ಚಿಸಬೇಕು. ಕ್ಲಬ್ ಸದಸ್ಯರು, CLIA ಮತ್ತು LIC ಮ್ಯೂಚುಯಲ್ ಫಂಡ್ ಏಜೆಂಟ್‌ಗಳನ್ನು ರಕ್ಷಿಸಬೇಕು. ಎಲ್‌ಐಸಿ ಷೇರುಗಳ ಮೌಲ್ಯ ಕುಸಿಯುವ ಸಂದರ್ಭ ಎಲ್‌ಐಸಿಯ ಗರಿಷ್ಠ ಷೇರುಗಳನ್ನು ಖರೀದಿಸುವಂತೆ ಒತ್ತಾಯಿಸಿದರು. ಭಾರತ ವಿಮಾ ಪ್ರತಿನಿಧಿಗಳ ಸಂಘಟನೆ ಅಧ್ಯಕ್ಷ ರಾಧಕೃಷ್ಣ ಮಾತನಾಡಿದರು. ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ಕೋಟೆ ಶಿವಣ್ಣ, ಕೆಂಪರಾಜು, ನಂಜೇಗೌಡ, ಬಸವರಾಜು, ಎಂ.ಶಂಕರ್, ಎಚ್.ಆರ್. ಸೋಮಶೇಖರ್, ರಾಜು, ಮಹೇಶ್, ನಿಂಗರಾಜು, ಸೂರೇಗೌಡ, ನಟರಾಜು ಇತರರಿದ್ದರು.

ಖಾಸಗಿ ಬಸ್ ಏಜೆಂಟ್‌ರ ಸಂಘದಿಂದ ಅದ್ಧೂರಿ ಕನ್ನಡ ರಾಜ್ಯೋತ್ಸವ

ತಿ.ನರಸೀಪುರ, ನ.30– ಕನ್ನಡಾಭಿಮಾನ ಬೆಳೆಸಿಕೊಂಡು ಕಾಲಕ್ಕೆ ತಕ್ಕಂತೆ ಭಾಷೆ ಬೆಳವಣಿಗೆಗೆ ಪೂರಕ ವಿಧಾನಗಳನ್ನು ಬಳಸಿಕೊಂಡಲ್ಲಿ ಮಾತ್ರ ಕನ್ನಡ ಭಾಷೆ ಬೆಳವಣಿಗೆ ಸಾಧ್ಯ ಎಂದು ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಪಿ.ಪುಟ್ಟರಾಜ್ ಅಭಿಪ್ರಾಯಪಟ್ಟರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್ ಏಜೆಂಟರ ಸಂಘದಿಂದ ನಡೆದ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಭಾಷೆ, ನೆಲ, ಜಲದ ವಿಷಯ ಬಂದಾಗ ನಾವು ಸ್ವಾಭಿಮಾನಿಗಳಾಗಬೇಕು. ಭಾಷೆಯಲ್ಲಿ ಹೊಸ ಪದಗಳ ಸೃಷ್ಟಿಸಿ ಅವುಗಳನ್ನು ಬಳಸಬೇಕು. ಉನ್ನತ ಶಿಕ್ಷಣವನ್ನು ಕನ್ನಡದಲ್ಲಿ ಪಡೆಯುವಂತಾಗಬೇಕು. ಕನ್ನಡಾಭಿಮಾನ ಬೆಳೆಸಿಕೊಂಡು ಕಾಲಕ್ಕೆ ತಕ್ಕಂತೆ ಭಾಷೆ ಬೆಳವಣಿಗೆ ಪೂರಕವಾದ ವಿಧಾನಗಳನ್ನು ಬಳಸಬೇಕು ಎಂದರು.

ಕನ್ನಡ ಭಾಷೆಯ ಹಿರಿಮೆ ದೊಡ್ಡದು. 1500 ವರ್ಷಗಳ ಇತಿಹಾಸ, ವೈಭವ, ಸಂಸ್ಕೃತಿ ಹೊಂದಿರುವ ಕನ್ನಡ ಭಾಷೆ ಅಸ್ತಿತ್ವಕ್ಕೆ ಧಕ್ಕೆ ಬಂದಾಗ ನಾವು ಸ್ವಾಭಿಮಾನಿಗಳಾಗಬೇಕು. ಕನ್ನಡ ಎಂಬುದು ಸಂವಹನ ಮಾಧ್ಯಮ ಮಾತ್ರವಲ್ಲ. ಅದು ಒಂದು ಸಮುದಾಯದ ಗುರುತು ಮತ್ತು ಸಂಸ್ಕೃತಿ ಒಳಗೊಂಡ ಅಸ್ಮಿತೆ. ಮನೆಯಿಂದಲೇ ಕನ್ನಡ ಭಾಷೆ ಬಳಕೆ ಹೆಚ್ಚಾದಾಗ ಮಾತ್ರ ಭಾಷೆ ಬೆಳವಣಿಗೆ ಸಾಧ್ಯ ಎಂದರು

ಈ ವೇಳೆ ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ವೆಂಕಟೇಶ್, ಹಿಂದುಳಿದ ವರ್ಗಗಳ ಮಾಜಿ ಜಿಲ್ಲಾಧ್ಯಕ್ಷ ವೆಂಕಟರಮಣ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಸಂಘದ ಕಾರ್ಯದರ್ಶಿ ರಾಜಣ್ಣ ನಿರ್ದೇಶಕರಾದ ಶ್ರೀನಿವಾಸ್, ಕುಮಾರ್, ಸಿದ್ದಪ್ಪ, ಮಂಜು ಸೇರಿದಂತೆ ಇತರರಿದ್ದರು.



ಮರುಡೇಶ್ವರ, ಗಣೇಶ, ಸುಬ್ರಹ್ಮಣ್ಯ ಉತ್ಸವ ಮೂರ್ತಿ ಮೆರವಣಿಗೆ



ತಿ.ನರಸೀಪುರ, ನ.30– ಸುಬ್ರಹ್ಮಣ್ಯ ಷಷ್ಠಿ ಪ್ರಯುಕ್ತ ತಾಲೂಕಿನ ಮಾದಾಪುರದಲ್ಲಿ ಮರುಡೇಶ್ವರ, ಗಣೇಶ ಹಾಗೂ ಸುಬ್ರಹ್ಮಣ್ಯ ಉತ್ಸವ ಮೂರ್ತಿಗಳನ್ನು ಮೆರವಣಿಗೆ ಮಾಡಲಾಯಿತು.

ಮರುಡೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಭಕ್ತರು ಹುತ್ತಕ್ಕೆ ತನಿಯರದು. ಒಂದು ಹೊತ್ತು ಉಪವಾಸವಿದ್ದು, ದೇವಸ್ಥಾನದಲ್ಲಿ ನಡೆದ ಶ್ರೀಸುಬ್ರಹ್ಮಣ್ಯ ರಥೋತ್ಸವದಲ್ಲಿ ಪಾಲ್ಗೊಂಡರು. ಮಧ್ಯಾಹ್ನ ಸರಿಯಾಗಿ 1.15ಕ್ಕೆ ವಿಶೇಷವಾಗಿ ಅಲಂಕಾರಗೊಂಡಿದ್ದ ರಥೋತ್ಸವದಲ್ಲಿ ಶ್ರೀಸುಬ್ರಹ್ಮಣ್ಯಸ್ವಾಮಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ರಥ ಬೀದಿಯಲ್ಲಿ ಒಂದು ಸುತ್ತು ತೇರನ್ನು ಎಳೆಯಲಾಯಿತು. ಸುತ್ತಮುತ್ತಲಿನ ಗ್ರಾಮಸ್ಥರು ಸೇರಿದಂತೆ ನೂರಾರು ಭಕ್ತರು ದೇವರ ದರ್ಶನ ಪಡೆದರು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಯಿತು. ದೇವಸ್ಥಾನದ ಅರ್ಚಕರಾದ ಮಂಜುನಾಥ್ ಪೂಜಾ ಕಾರ್ಯ ನೆರವೇರಿಸಿದರು.

ಚಂದಗಾಲು ಗ್ರಾಮದಲ್ಲಿ ನೂತನ ಗ್ರಂಥಾಲಯ ಉದ್ಘಾಟನೆ



ಹೆಬ್ಬಾಳು(ಕೆ.ಆರ್.ನಗರ), ನ.30– ಯುವಕರು ದುಶ್ಚಟಗಳಿಂದ ದೂರವಿದ್ದು, ನಿಮ್ಮೂರಿನ ಗ್ರಂಥಾಲಯದಲ್ಲಿ ಪುಸ್ತಕಗಳ ಅಧ್ಯಯನ ಮಾಡುವ ಮೂಲಕ ವಿದ್ಯಾವಂತರಾಗಿ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ತಾಲೂಕಿನ ಚಂದಗಾಲು ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಗ್ರಂಥಾಲಯ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಹೆಚ್ಚು ಹೆಚ್ಚು ಪುಸ್ತಕ ಅಧ್ಯಯನ ಮಾಡಿದರೆ ಉನ್ನತ ಶಿಕ್ಷಣ ಪಡೆದು ವಿವಿಧ ಹುದ್ದೆ ಅಲಂಕರಿಸಬಹುದು ಎಂದರು.

ವಿದ್ಯಾರ್ಥಿಗಳು ಹೆಚ್ಚಿನ ಜ್ಞಾನ ಪಡೆದು ದೇಶಕ್ಕೆ ಕೀರ್ತಿ ತರುವ ಕೆಲಸ ಮಾಡಬೇಕು. ಕೆ.ಆರ್.ನಗರದಲ್ಲಿಯೂ 35 ಲಕ್ಷ ರೂ. ವೆಚ್ಚದ ಕಟ್ಟಡ ನಿರ್ಮಾಣ ಮಾಡಿದ್ದು, ಪಟ್ಟಣದ ನಾಗರಿಕರಿಂದ ಉತ್ತಮ ಸ್ಪಂದನೆ ದೊರೆತಿದೆ. ತಾಲೂಕಿನ ಎಲ್ಲಾ ಗ್ರಾಪಂನಲ್ಲೂ ಗ್ರಂಥಾಲಯ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಲಾಗುವುದು ಎಂದರು.

ಚಂದಗಾಲು ಗ್ರಾಮದ 3 ದೇವಾಲಯ, ಸಿಸಿ ರಸ್ತೆ, ಕೆರೆ ಅಭಿವೃದ್ಧಿ ಪಡಿಸಿ ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸಲಾಗಿದೆ ಎಂದ ಶಾಸಕರು ಸ್ಮಶಾನಕ್ಕೆ ಹೋಗುವ ರಸ್ತೆಯನ್ನು 40 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಗ್ರಂಥಾಲಯ ನಿವೇಶನ ದಾನಿ ಕೃಷ್ಣಪ್ಪಗೌಡ ಮಾತನಾಡಿ, ನಾನು ಶಿಕ್ಷಣ ಪಡೆದಿದ್ದರಿಂದ ಸರ್ಕಾರಿ ಉದ್ಯೋಗ ಪಡೆಯಲು ಸಾಧ್ಯವಾಯಿತು. ನಮ್ಮೂರಿನ ಯುವಕರು ನನ್ನಂತೆ ಶಿಕ್ಷಣ ಪಡೆಯಲಿ ಎಂಬ ಉದ್ದೇಶಕ್ಕಾಗಿ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಉಚಿತ ನಿವೇಶನ ನೀಡಿದ್ದೇನೆ ಎಂದರು.

ಇದೇ ವೇಳೆ ಕೃಷ್ಣಪ್ಪಗೌಡರನ್ನು ಶಾಸಕ ಸಾ.ರಾ.ಮಹೇಶ್ ಅಭಿನಂದಿಸಿದರು. ಗ್ರಾಪಂ ಅಧ್ಯಕ್ಷ ಸುರೇಶ್, ಸದಸ್ಯ ನಿಶಾಂತ್, ಸೌಮ್ಯ, ಮೀನಾಕ್ಷಿ, ರಾಜೇಶ್ವರಿ, ಬಿ.ಮಹದೇವ್, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ಜೆಡಿಎಸ್ ಮುಖಂಡರಾದ ನಂಜುಂಡಸ್ವಾಮಿ, ಸಿ.ಆರ್.ಡಿಂಡಿಮ, ಸಿ.ಕೆ.ಅಣ್ಣೇಗೌಡ, ರಾಘವೇಂದ್ರ, ಜಿಲ್ಲಾ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಪದ್ಮಶ್ರೀ, ಕೆ.ಆರ್.ನಗರ ಗ್ರಂಥಪಾಲಕಿ ಎಂ.ವಾಣಿ, ಚಂದಗಾಲು ಗ್ರಂಥಪಾಲಕ ನಟರಾಜು, ಗುತ್ತಿಗೆದಾರ ಜಿ.ಡಿ.ರಾಕೇಶ್ ಇತರರಿದ್ದರು.



ಮಾಜಿ ಸಚಿವ ಜಿ.ಟಿ. ದೇವೇಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದೊಡ್ಡಹೆಜ್ಜೂರು ಗ್ರಾಂ ಪಂ ಅಧ್ಯಕ್ಷ ಶುಭಾಶ್, ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಸದಸ್ಯರಾದ ವೆಂಕಟೇಶ್, ಶ್ರೀನಿವಾಸ್, ಗಣೇಶ್, ನಂಜುಂಡ, ಕಾಂತರಾಜ್, ನಂಜೇಗೌಡ, ಬೀರಪ್ಪ, ಲೊಕೇಶ್ ಮತ್ತಿತರರು ಸನ್ಮಾನಿಸಿ, ಶುಭಾಶಯ ಕೋರಿದರು.

ಕಾಂಗ್ರೆಸ್ ವಕ್ತಾರರಾಗಿ ನೇಮಕ



ಸರಗೂರು, ನ.30– ಸರಗೂರು ತಾಲೂಕಿನ ಕಾಂಗ್ರೆಸ್ ವಕ್ತಾರ ರಾಗಿ ಎನ್.ನಂಜಯ್ಯ ನೇಮಕವಾಗಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಬೇಕು ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದಪ್ಪ ಹಾಗೂ ಪ್ರಧಾನ ಕಾರ್ಯದರ್ಶಿ ಚಲುವರಾಜು ಆದೇಶ ಪತ್ರ ನೀಡಿದ್ದಾರೆ.



ಬನ್ನೂರಿನ ಬೋವಿ ಕಾಲೋನಿ ಯುವಕರ ಬಳಗದಿಂದ ಬುಧವಾರ ಕನ್ನಡ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ಬೋವಿ ಕಾಲೋನಿ ಮಕ್ಕಳು, ಮುಖಂಡರು, ಯುವಕರು ಸೇರಿದಂತೆ ಇತರರಿದ್ದರು.

ಹೆಚ್.ಡಿ.ಕೋಟೆ ನಾಯಕರ ಕ್ಷೇಮಾಭಿವೃದ್ಧಿ ಸಂಘ ಅಸ್ತಿತ್ವಕ್ಕೆ



ಹೆಚ್.ಡಿ.ಕೋಟೆ, ನ.30– ತಾಲೂಕು ನಾಯಕ ಸಮಾಜದ ಹಿತದೃಷ್ಟಿಯಿಂದ ನಾಯಕರ ಕ್ಷೇಮಾಭಿವೃದ್ಧಿ ಸಂಘ (ರಿ) ಅಸ್ತಿತ್ವಕ್ಕೆ ಬಂದಿದ್ದು, ಸಂಘದ ಗೌರವಾಧ್ಯಕ್ಷರಾಗಿ ಸಿಪಿಎಂ ಶಿವಣ್ಣ, ಅಧ್ಯಕ್ಷರಾಗಿ ಕ್ಯಾತನಹಳ್ಳಿ ನಾಗರಾಜು, ಉಪಾಧ್ಯಕ್ಷರಾಗಿ ಚೆಲುವಕೃಷ್ಣ ನಾಯಕ, ಸುಂದರನಾಯಕ, ಪ್ರಧಾನ ಕಾರ್ಯದರ್ಶಿ ರಾಜನಾಯಕ, ಖಜಾಂಚಿ ನಾಗರಾಜು, ಸಹ ಕಾರ್ಯದರ್ಶಿ ರವಿನಾಯಕ, ಸಂಘಟನಾ ಕಾರ್ಯದರ್ಶಿ ದಾಸನಾಯಕ, ಪತ್ರಿಕಾ ಕಾರ್ಯದರ್ಶಿ ಟಿ.ಅಂಕನಾಯಕ, ನಿರ್ದೇಶಕರಾಗಿ ನಾಗನಾಯಕ, ಕೆ.ಟಿ.ಚಿಕ್ಕಣ್ಣ, ಸಿದ್ದರಾಜು, ಭೈರನಾಯಕ, ರವಿಶಂಕರ, ನಿಂಗನಾಯಕ, ಆಯ್ಕೆಯಾಗಿದ್ದಾರೆ.

ಕನ್ನಡ ರಾಜ್ಯೋತ್ಸವ ಸ್ವಾಭಿಮಾನ, ಸಹಬಾಳ್ವೆಯ ಸಂಕೇತ

ಶಾಸಕ ಹೆಚ್.ಪಿ.ಮಂಜುನಾಥ್



ಹನಗೋಡು, ನ.30– ಕನ್ನಡ ರಾಜ್ಯೋತ್ಸವ ನಾಡಿನ ಏಕತೆ, ಸಮಾನತೆ, ಸ್ವಾಭಿಮಾನ ಹಾಗೂ ಸಹಬಾಳ್ವೆಯ ಸಂಕೇತವಾಗಿದೆ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಬ್ಬಾಳ ಗ್ರಾಮದಲ್ಲಿ ಅರುಣೋದಯ ಯುವ ಟ್ರಸ್ಟ್‌ನಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜಕುಮಾರ್ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಕನ್ನಡಿಗರು ನಮ್ಮ ನಾಡು, ನುಡಿಯ ಅಸ್ಮಿತೆ ಉಳಿಸಿ ಬೆಳೆಸುವ ಪ್ರಜ್ಞಾವಂತಿಕೆ ಮೆರೆಯಬೇಕು. ಪ್ರತಿಯೊಂದು ಹಂತದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಬೇಕು. ಕನ್ನಡ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಬೇಕು. ಕನ್ನಡ ಸಾಹಿತ್ಯ ಶ್ರೀಮಂತಿಕೆ ಉಳಿಸಿ ಬೆಳೆಸಲು ನಾವು ನೀವೆಲ್ಲರೂ ಒಂದಾಗಬೇಕಾಗಿದೆ ಎಂದರು.

ಅರುಣೋದಯ ಟ್ರಸ್ಟ್ ಯಾವುದೇ ಪಕ್ಷದೊಂದಿಗೆ ಗುರುತಿಸಿಕೊಳ್ಳದೇ ಗ್ರಾಮದ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಸಲಹೆ ನೀಡಿದ ಅವರು, ಕೊರೊನಾ ವೇಳೆ ಹಲವು ಸಾಮಾಜಿಕ ಸೇವಾ ಕಾರ್ಯ ಹಮ್ಮಿಕೊಂಡು ಗ್ರಾಮದಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ಸಹಾಯಹಸ್ತ ನೀಡಿದ್ದು ಹೆಮ್ಮೆಯ ವಿಷಯ ಎಂದರು.

ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ಅಜೀಜ್ ಮೋಹನ್ ಮಾತನಾಡಿ, ಯುವ ಜನಾಂಗದ ಬೆಳವಣಿಗೆ, ಹಿಂದುಳಿದ ಸಮಾಜದ ಏಳಿಗೆಗೆ, ವಿದ್ಯಾಭ್ಯಾಸ, ಗ್ರಾಮಾಭಿ ವೃದ್ಧಿ ಕಲ್ಯಾಣ ಯೋಜನೆಗಳು, ನಿರ್ಗತಿಕರು ಹಾಗೂ ಬಡ ಮಕ್ಕಳ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಸೇರಿದಂತೆ ಸಮಾಜಮುಖಿ ಕಾರ್ಯಕ್ಕೆ ಎಲ್ಲಾ ನಿರ್ದೇಶಕರು ಹಾಗೂ ಪದಾಧಿಕಾರಿಗಳು ಕೈ ಜೋಡಿಸುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಕಡೇಮನಗನಹಳ್ಳಿ ಗ್ರಾಪಂ ಅಧ್ಯಕ್ಷೆ ಪಾರ್ವತಿ, ತಾಪಂ ಮಾಜಿ ಸದಸ್ಯ ರೂಪ, ಮುಖಂಡ ರಾದ ರವಿಕುಮಾರ್, ಚೆಲುವೇಗೌಡ ಶ್ರೀನಿವಾಸ್, ನಂದೀಶ್, ಗವಿಮಾದು ಗ್ರಾಪಂ ಸದಸ್ಯರಾದ ರಂಗಣ್ಣ, ಸದಾನಂದ, ಗೌರಮ್ಮ, ರಾಧಾ, ಟ್ರಸ್ಟ್ ಗೌರವಾಧ್ಯಕ್ಷ ರಾಮಕೃಷ್ಣ, ಉಪಾಧ್ಯಕ್ಷ ಮಹೇಶ್, ಕಾರ್ಯದರ್ಶಿ ಕಿರಣ್ ಕುಮಾರ್, ಖಜಾಂಚಿ ಮಾದೇವ, ಪದಾಧಿಕಾರಿಗಳಾದ ಅಶೋಕ್, ರಂಜನ್, ಮಣಿಕಂಠ, ರೋಹಿತ್, ಪ್ರವೀಣ್, ವಸಂತ, ಯತೀಶ್, ರಘು, ರವಿ, ಮಧು, ಶಂಕರೇಗೌಡ, ರಾಜೇಶ್, ಸುಭಾಶ್, ಶಶಿ ಹಾಗೂ ಟ್ರಸ್ಟ್ ಆಡಳಿತ ಮಂಡಳಿ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ತಿ.ನರಸೀಪುರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ



ತಿ.ನರಸೀಪುರ, ನ.30– ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ರಾಜ್ಯ ಯುವ ಘಟಕದಿಂದ ಶ್ರೀಅಕ್ಕ ಮಹಾದೇವಿ ಸಭಾಂಗಣದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ಪ್ರಪಂಚದ ಎಲ್ಲಾ ದೇಶಗಳಲ್ಲೂ ಮಹಾಕಾವ್ಯ ಸೃಷ್ಟಿಯಾಗಿಲ್ಲ. ಗ್ರೀಕ್, ರೋಮ್ ಬಿಟ್ಟರೆ ನಮ್ಮ ದೇಶದಲ್ಲಿ ಮಾತ್ರ ಮಹಾಕಾವ್ಯ ಕಾಣಬಹುದು. ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಸಾರ್ವಕಾಲಿಕ ಮೌಲ್ಯ ಪ್ರತಿನಿಧಿಸುವ ಕೃತಿಗಳಾಗಿವೆ. ರಾಮಾಯಣದ ಪಾತ್ರಗಳು, ದೃಶ್ಯಗಳು ಇವತ್ತಿಗೂ ನಮ್ಮನ್ನು ಕಾಡುತ್ತವೆ ಎಂದರು.

ಮಹರ್ಷಿ ವಾಲ್ಮೀಕಿ ರಾಮಾಯಣ ಬರೆದಾಗ, ಈ ಕೃತಿ ತನ್ನನ್ನೇ ಮೀರಿಸಬಹುದು ಎಂಬ ಕಲ್ಪನೆ ಅವರಿಗೆ ಇರಲಿಲ್ಲ. ಇತಿಹಾಸದಲ್ಲಿ ಇಂತಹ ಕ್ಷಣ ಸೃಷ್ಟಿಯಾಗಿರುವುದು ಅಪರೂಪ. ವಾಲ್ಮೀಕಿ ಅಂತಹ ಇತಿಹಾಸ ನಿರ್ಮಿಸಿದ್ದಾರೆ. ನಮಗೆಲ್ಲರಿಗೂ ರಾಮಾಯಣದ ಬಗ್ಗೆ ಗೊತ್ತಿದೆಯೇ ವಿನಹ, ವಾಲ್ಮೀಕಿ ಬಗ್ಗೆ ತಿಳಿದಿರುವುದು ಕಡಿಮೆ ಎಂದರು. ಜಾತಿ, ಮೇಲು–ಕೀಳು ಎಂಬುದನ್ನೆಲ್ಲ ನಮ್ಮ ಬೆನ್ನಿಗೆ ಅಂಟಿಸಿಕೊಂಡು ಬಂದಿದ್ದೇವೆ. ಪ್ರತಿಭೆಗೆ ಯಾವುದೂ ಅಡ್ಡಿಯಾಗಬಾರದು. ಆದರೆ, ಅಡ್ಡಿಪಡಿಸಲು, ಕಾಲೆಳೆಯಲು ಜನರು ಸರತಿ ಸಾಲಿನಲ್ಲಿ ನಿಂತಿರುತ್ತಾರೆ. ವ್ಯಕ್ತಿಯೊಬ್ಬನ ಬುದ್ಧಿವಂತಿಕೆ, ಸಾಮರ್ಥ್ಯಕ್ಕೆ ಸರಿ ಸಮನಾಗಿ ತಲುಪಲು ಸಾಧ್ಯವಾಗದಿದ್ದರೆ ಜನರು ಆತನ ಹುಟ್ಟು, ಜಾತಿ ಬಗ್ಗೆ ಪ್ರಸ್ತಾಪಿಸುತ್ತಾರೆ. ಆತನನ್ನು ಮಾನಸಿಕವಾಗಿ ಕುಗ್ಗಿಸಲು ಯತ್ನಿಸುತ್ತಾರೆ. ಹಾಗಾಗಿ, ವಾಲ್ಮೀಕಿ ಜಯಂತಿ ಕೇವಲ ಸಂಭ್ರಮದ ಜೊತೆಗೆ ಮಾನವ ಪ್ರಜ್ಞೆ ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಜಯ್ ಕುಮಾರ ಸ್ವಾಮೀಜಿ, ಯುವ ಘಟಕದ ಅಧ್ಯಕ್ಷ ಎಂ.ಲಕ್ಷ್ಮಣನಾಯಕ್, ರಾಜ್ಯ ನಾಯಕರ ಹಿತ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ದೇವರಾಜ್ ಪಾಳೇಗಾರ್, ಚಿನ್ನಸ್ವಾಮಿ, ತಿ.ನರಸೀಪುರ ತಾಲೂಕು ನಾಯಕ ಸಂಘದ ಅಧ್ಯಕ್ಷ ಬನ್ನೂರು ಚಿಕ್ಕಯ್ಯ, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಹೆಮ್ಮಿಗೆ ಸೋಮಣ್ಣ ಮತ್ತಿತರರಿದ್ದರು.

ಎಂದೆಂದಿಗೂ ತಾಯಿ-ತಂದೆ, ಗುರು ಹಿರಿಯರ ಗೌರವಿಸಿ

ಕನ್ನಡ ಚಿತ್ರರಂಗದ ಹಿರಿಯ ನಟ ದೊಡ್ಡಣ್ಣ



ಮೈಸೂರು, ನ.30– ಜೀವನದಲ್ಲಿ ಒಳ್ಳೆಯ ನಡತೆ, ಜ್ಞಾನ, ಮೌಲ್ಯ ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟ ತಂದೆ, ತಾಯಿ ಹಾಗೂ ಗುರು ಹಿರಿಯರನ್ನು ಎಂದೆಂದಿಗೂ ಮರೆಯದಿರಿ, ಮರೆತರೆ ನೀವು ಎಂದಿಗೂ ನಿಮ್ಮ ಜೀವನದಲ್ಲಿ ಏಳ್ಗೆ ಹೊಂದಲು ಸಾಧ್ಯವಿಲ್ಲ ಎಂದು 800ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಕನ್ನಡದ ಹಿರಿಯ ನಟ ದೊಡ್ಡಣ್ಣ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅವರು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಅಬ್ದುಲ್ ಕಲಾಂ ರಜತ ಮಹೋತ್ಸವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ನೀವು ಒಳ್ಳೆಯ ಸುಸಂಸ್ಕೃತ ಪ್ರಜೆಗಳಾಗಿ. ಹೆಣ್ಣು ಮಕ್ಕಳು, ರೈತರು ಹಾಗೂ ಹಿರಿಯರಿಗೆ ಗೌರವ ಕೊಡುವುದನ್ನು ಕಲಿಯಿರಿ. ಜೀವನದಲ್ಲಿ ನನ್ನಿಂದಲೇ ಎಲ್ಲಾ, ನಾನೇ ಎಲ್ಲಾ ಎಂದು ಯಾವಾಗಲೂ ಬೀಗಬೇಡಿ, ಅಹಂ ಒಳ್ಳೆಯದಲ್ಲ. ನಮ್ಮನ್ನು ಕಾಪಾಡುತ್ತಿರುವ ಶಕ್ತಿ ಮೇಲೊಂದಿದೆ, ಅದೇ ದೈವಶಕ್ತಿ. ದೇವರನ್ನು ಎಂದೂ ಮರೆಯಬಾರದು ಎಂದರು. ಮಾನವ ಜನ್ಮ ದೊಡ್ಡದು, ವಿದ್ಯಾರ್ಥಿಗಳಲ್ಲಿ ಒಂದಲ್ಲ ಒಂದು ಪ್ರತಿಭೆ ಸುಪ್ತವಾಗಿದ್ದು, ಅದನ್ನು ಅನಾವರಣಗೊಳಿಸಲು ಮಹಾಜನ ಕಾಲೇಜು ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಅದನ್ನು ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಿ. ಮಹಾಜನ ಕಾಲೇಜು ಮಾನವೀಯ ಮೌಲ್ಯಗಳು ಮತ್ತು ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಶಿಕ್ಷಣವನ್ನು ನೀಡುತ್ತಿದೆ. ಇದರಿಂದ ನಮ್ಮ ಯುವ ವಿದ್ಯಾರ್ಥಿಗಳಿಗೆ ಸಂಸ್ಕಾರ ಮತ್ತು ಸಂಸ್ಕೃತಿ ಅನಾವರಣಗೊಳ್ಳಲು ಅವಕಾಶವಾಗಿದೆ ಎಂದು ಕಿವಿಮಾತು ಹೇಳಿದರು. ಕನ್ನಡ ಒಂದು ಪ್ರಾಚೀನ ಭಾಷೆ, ಇದಕ್ಕೆ 7500 ವರ್ಷದ ಇತಿಹಾಸವಿದೆ. ಕನ್ನಡ ನಾಡಿನಲ್ಲಿ ಜನಿಸಿದ ನಾವು ಕನ್ನಡದ ಅನ್ನ, ನೀರು, ಗಾಳಿಯನ್ನು ಸೇವಿಸುತ್ತಿದ್ದೇವೆ ತಾಯಿ ಭಾಷೆಯನ್ನು ಮರೆತರೆ, ತಾಯಿಯನ್ನು ಮರೆತಂತೆ, ಕನ್ನಡನಾಡಿಗೆ ದ್ರೋಹ ಬಗೆದಂತೆ, ಆದ್ದರಿಂದ ಕನ್ನಡ ಉಳಿಸಿ, ಬೆಳೆಸಿ ಎಂದು ಕನ್ನಡದ ಹಿರಿಮೆಯನ್ನು ಕೊಂಡಾಡಿದರು. ನೀವು ಯಾವ ವಿಷಯದಲ್ಲಿ ಓದುತ್ತಿದ್ದೀರಿ ಎಂಬುದು ಮುಖ್ಯವಲ್ಲ, ನಿಮ್ಮ ಕೌಶಲ್ಯಾಧಾರಿತ ಜ್ಞಾನ ಎಷ್ಟಿದೆ ಎಂಬುದನ್ನು ಅರಿತು, ಸಮಾಜಕ್ಕೆ ಏನಾದರೂ ಕೊಡುಗೆಗಳನ್ನು ನೀಡಬೇಕು. ವಿದ್ಯಾರ್ಥಿಗಳು ಬರೀ ಓದಿ, ಪದವಿಯನ್ನು ಗಳಿಸಿದರೆ ಸಾಲದು, ತಮ್ಮಲ್ಲಿ ಹುದುಗಿರುವ ಕೌಶಲ್ಯ, ಪ್ರತಿಭೆಯನ್ನು ಹೊರಹಾಕಿ, ಯಾವುದಾದರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು. ವಿದ್ಯಾರ್ಥಿ ಸಂಸತ್ ಉದ್ಘಾಟಿಸಿದ ಯುವ ಕನ್ನಡ ಚಲನಚಿತ್ರ ನಟರಾದ ಕಾರ್ತಿಕ್ ಮಹೇಶ್ ಮಾತನಾಡುತ್ತಾ, ನಾನು ಓದಿದ ಕಾಲೇಜಿಗೆ ಅತಿಥಿಯಾಗಿ ಬಂದಿರುವುದು ನನಗೆ ಸಂತೋಷ ಉಂಟಾಗಿದೆ. ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಸತ್ ಮೂಲಕ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಿ. ನಿಮ್ಮ ಕೌಶಲ್ಯ, ಪ್ರತಿಭೆಗಳನ್ನು ಹೊರಹಾಕಲು ಕಾಲೇಜು ಅವಕಾಶಗಳನ್ನು ಕಲ್ಪಿಸಿದೆ. ಇದನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದರು.

ಕನ್ನಡದಲ್ಲಿ ಪಿಹೆಚ್.ಡಿ ಮಾಡಿದ್ದರೂ, ಇಂಗ್ಲಿಷ್ ಗೊತ್ತಿಲ್ಲದಿದ್ದರೆ ಸೆಕ್ಯೂರಿಟಿ ಗಾರ್ಡ್ ಕೆಲಸವೂ ಸಿಕ್ಕಲ್ಲ...!

ವಾಣಿಜ್ಯ ತೆರಿಗೆ ಅಧಿಕಾರಿ ಡಾ.ಮಂಜುನಾಥ ಸೋಸಲೆ ವಿಷಾದ

- ಸಾಧಕರಿಗೆ ಕರುನಾಡ ಸೇವಾರತ್ನ ಪ್ರಶಸ್ತಿ ಪ್ರದಾನ
- ಕವಿಕಾವ್ಯ ಗಾನಯಾನ ಸಂಗೀತ ಕಾರ್ಯಕ್ರಮ



ಮೈಸೂರು, ನ.30– ಕನ್ನಡ ಅನ್ನದ ಭಾಷೆಯಾಗಬೇಕು. ಸರ್ಕಾರಗಳು ಈ ದಿಸೆಯಲ್ಲಿ ಕ್ರಮಕೈಗೊಳ್ಳಬೇಕು ಎಂದು ಹಾಸನ ಜಿಲ್ಲಾ ವಾಣಿಜ್ಯ ತೆರಿಗೆ ಉಪ ಆಯುಕ್ತ (ಜಾರಿ ವಿಭಾಗ) ಡಾ.ಮಂಜುನಾಥ ಸೋಸಲೆ ಮನವಿ ಮಾಡಿದರು.

ತನುಮನ ಸಂಸ್ಥೆ, ವೈಬ್ರೆಂಟ್ ಮೈಸೂರು, ಪ್ರಜಾಸ್ತ್ರ ವೆಬ್ ಪತ್ರಿಕೆ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಬೋಗಾದಿ ರಸ್ತೆಯ ಧ್ವನ್ಯಾಲೋಕದಲ್ಲಿ ಬುಧವಾರ ಏರ್ಪಡಿಸಿದ್ದ ಕವಿಕಾವ್ಯ ಗಾನಯಾನ ಸಂಗೀತ ಕಾರ್ಯಕ್ರಮ ಮತ್ತು ಕರುನಾಡ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿ, ಕನ್ನಡದಲ್ಲಿ ಪಿಎಚ್.ಡಿ ಮಾಡಿದ್ದರೂ ಇಂಗ್ಲಿಷ್ ಗೊತ್ತಿಲ್ಲದಿದ್ದರೆ ಸೆಕ್ಯೂರಿಟಿ ಗಾರ್ಡ್ ಕೆಲಸವೂ ಸಿಕ್ಕುವುದಿಲ್ಲ. ಈ ಪರಿಸ್ಥಿತಿ ಬದಲಾಗಬೇಕು ಎಂದರು.

ಯುಪಿಎಸ್ಸಿ ಮತ್ತಿತರ ಕೇಂದ್ರ ಸೇವೆಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮಾತೃಭಾಷೆಯಲ್ಲಿಯೇ ಬರೆಯುವಂತಾಗಬೇಕು. ಯುಪಿಎಸ್ಸಿ ನಡೆಸುವ ಪರೀಕ್ಷೆಗಳಲ್ಲಿ ಹಿಂದಿ ಮಾತನಾಡುವ ಉತ್ತರ ಭಾರತದವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿರುವುದಕ್ಕೆ ಅವರು ಹಿಂದಿಯಲ್ಲಿ ಉತ್ತರಿಸುವುದೇ ಆಗಿದೆ ಎಂದರು. ನಗರ, ಪಟ್ಟಣ ಪ್ರದೇಶಗಳಲ್ಲಿ ಇರುವವರು ಕನ್ನಡದ ಜೊತೆಗೆ ಇಂಗ್ಲಿಷ್ ಬಳಕೆ ಮಾಡುತ್ತಿದ್ದಾರೆ. ಆದರೆ ಕನ್ನಡ ಉಳಿದಿರುವುದು ಹಳ್ಳಿಗಳಲ್ಲೇ ಎಂದ ಅವರು, ಕುವೆಂಪು ಅವರ ಸಾಹಿತ್ಯ, ಡಾ.ರಾಜ್‌ಕುಮಾರ್ ಅವರ ನಟನೆ, ಭಾಷಾ ಬಳಕೆಯಿಂದಲೂ ಕನ್ನಡ ಬೆಳೆದಿದೆ. ಪೋಷಕರು ಮನೆಯಲ್ಲಿ ಮಕ್ಕಳಿಗೆ ಸಾಹಿತ್ಯದ ಸಂಸ್ಕಾರ ಬೆಳೆಸಬೇಕು ಎಂದು ಸಲಹೆ ಮಾಡಿದರು. ಮೊಬೈಲ್, ಟಿವಿಗಳಿಂದ ಜ್ಞಾನ ಬೆಳೆಯುವುದಿಲ್ಲ. ಆದ್ದರಿಂದ ಓದುವ ಕಡೆ ಗಮನಹರಿಸಬೇಕು ಎಂದು ಅವರು ಹೇಳಿದರು.

ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದ ಜಿಲ್ಲಾ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ದುಂಡಯ್ಯ ಮಾತನಾಡಿ, ಶ್ರಮ ಮತ್ತು ಶ್ರದ್ಧೆ ಇದ್ದಲ್ಲಿ ಯಾರು ಏನು ಬೇಕಾದರೂ ಸಾಧಿಸಬಹುದು ಎಂದರು.

ಕಲೆ ಮತ್ತು ಸಂಗೀತದ ಬಗ್ಗೆ ಆಸಕ್ತಿ ಇದ್ದಲ್ಲಿ ಮನಸ್ಸಿಗೆ ನೆಮ್ಮದಿ ಇರುತ್ತದೆ ಎಂದ ಅವರು, ಪ್ರತಿನಿತ್ಯ ಆರು ತಾಸು ನಿದ್ರೆ ಮಾಡಿ, 4 ಲೀಟರ್ ನೀರು ಕುಡಿಯಿರಿ, ಎರಡು ಹೊತ್ತು ಊಟ ಮಾಡಿ, ಎರಡು ಹೊತ್ತು ಧ್ಯಾನ ಮಾಡಿದರೆ ಆರೋಗ್ಯದಿಂದ ಬದುಕಬಹುದು ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಸಾಮಾಜಿಕ ಹೋರಾಟಗಾರ ಹಿನಕಲ್ ಸೋಮಣ್ಣ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಸಹಾಯಕ ತೋಟಗಾರಿಕೆ ಅಧಿಕಾರಿ ಎಸ್. ವೆಂಕಟೇಶಮೂರ್ತಿ, ವಕೀಲ ಎ.ಆರ್. ಕಾಂತರಾಜು, ವೈಬ್ರೆಂಟ್ ಪತ್ರಿಕೆಯ ಸ್ಥಾನಿಕ ಸಂಪಾದಕ ಮಧುಕುಮಾರ್, ಪ್ರಜಾಸ್ತ್ರ ವೆಬ್ ಪತ್ರಿಕೆ ಸಂಪಾದಕ ನಾಗೇಶ್ ತಳವಾರ್ ಮುಖ್ಯ ಅತಿಥಿಗಳಾಗಿದ್ದರು.

ಕರುನಾಡ ಸೇವಾ ರತ್ನ ಪ್ರಶಸ್ತಿಯನ್ನು ಕೆ. ಸೋಮಯ್ಯ, ದ್ಯಾವಪ್ಪನಾಯಕ, ವಿದುಷಿ ಮಹೇಶ್ವರಿ, ಅಮೀನ ಬೇಗಂ ಕಾಲೇಖಾನ, ರವಿ ಛಲವಾದಿ, ಎಸ್.ಕೆ. ಚೇತನ್, ಸೋಮಯ್ಯ ಮಲೆಯೂರು, ವಿಶ್ವನಾಥ್ ಶೇಷಾಚಲ, ಮಹೇಶ್ವರಿ, ಶಶಿಕಲಾ ಸುರೇಂದ್ರ, ರೇಖಾ ಮನಶಾಂತಿ, ಶಿಲ್ಪಾ ಸುಧಾಕರ್, ಚಾಮರಾಜ್, ಗಾಮನಹಳ್ಳಿ ಸ್ವಾಮಿ ಮೊದಲಾದವರಿಗೆ ಪ್ರದಾನ ಮಾಡಲಾಯಿತು. ನಂತರ ಲಕ್ಷ್ಮೀರಾಮ್, ಮಾದೇಶ್ ಚಿಕ್ಕನಂದಿ, ರಮೇಶ್ ತಾಯೂರು, ಎಸ್.ಸಿ.ಪುಷ್ಪಲತಾ, ಕೆ.ನೀಲಾ, ಶುಭಶ್ರೀ, ನಾದಸಿರಿ ಸಂಗೀತ ಬಳಗದವರು ಗಾಯನ ನಡೆಸಿಕೊಟ್ಟರು. ಡಿ.ಸಿ.ಶಿವಕುಮಾರ್, ರೋಶನ್ ಸೂರ್ಯ, ಕಿರಣ್ ವಾದ್ಯ ಸಹಕಾರ ನೀಡಿದರು.

ಕುಲಾಧಿಪತಿ ಹುದ್ದೆಯಿಂದ ಕೇರಳ ರಾಜ್ಯಪಾಲರನ್ನು ವಜಾಗೊಳಿಸುವ ಕರಡು ಮಸೂದೆಗೆ ಸಂಪುಟ ಅಸ್ತು

ತಿರುವನಂತಪುರಂ, ನ.30– ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರನ್ನು ವಿಶ್ವವಿದ್ಯಾಲಯಗಳ ಕುಲಾಧಿಪತಿ ಹುದ್ದೆಯಿಂದ ತೆಗೆದು ಹಾಕಿ, ಆ ಸ್ಥಾನಕ್ಕೆ ವಿಷಯ ತಜ್ಞರನ್ನು ನೇಮಿಸುವ ಕರಡು ಮಸೂದೆಗೆ ಬುಧವಾರ ಕೇರಳ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಇಂದು ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ಕುಲಾಧಿಪತಿ ಹುದ್ದೆಯಿಂದ ರಾಜ್ಯಪಾಲರನ್ನು ತೆಗೆದು ಹಾಕುವ ಕರಡು ಮಸೂದೆಗೆ ಒಪ್ಪಿಗೆ ನೀಡಲಾಗಿದೆ. ಕುಲಾಧಿಪತಿಗಳ ವಿರುದ್ಧ ಗಂಭೀರ ಆರೋಪಗಳಿದ್ದಲ್ಲಿ ಅವರನ್ನು ಪದಚ್ಯುತಗೊಳಿಸಲು ಮಸೂದೆಯಲ್ಲಿ ಅವಕಾಶವಿದೆ.

ಭತ್ತ ಖರೀದಿ ನಿಯಮ ಮಾರ್ಪಾಡು ವಿರೋಧಿಸಿ ರೈತರ ಪ್ರತಿಭಟನೆ



ಮೈಸೂರು, ನ.30(ಆರ್‌ಕೆಬಿ)–ಎಂಎಸ್‌ಪಿ ಯೋಜನೆಯಡಿ ಭತ್ತದ ಖರೀದಿ ನಿಯಮಗಳ ಮಾರ್ಪಾಡು ವಿರೋಧಿಸಿ ಕೃಷಿ ಕಾರ್ಮಿಕರ ಜಾಗೃತಿ ಸಂಘ, ರಾಜ್ಯ ಭತ್ತದ ಬೆಳೆಗಾರರ ಒಕ್ಕೂಟದ ಕಾರ್ಯಕರ್ತರು ಬುಧವಾರ ಜಂಟಿಯಾಗಿ ಪ್ರತಿಭಟನೆ ನಡೆಸಿದರು.


ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಬೈಕ್ ರ‍್ಯಾಲಿ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಪ್ರತಿಭಟನಾಕಾರರು, ಹಳೆಯ ವ್ಯವಸ್ಥೆಯನ್ನೇ ಮುಂದುವರಿಸುವಂತೆ ಆಗ್ರಹಿಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಭತ್ತ ಕಟಾವು ನಂತರ ಖರೀದಿ ಅಧಿಕಾರಿಗಳು ದಿನಾಂಕ ಗೊತ್ತುಪಡಿಸುವವರೆಗೂ ರೈತರು ದಾಸ್ತಾನನ್ನು ಶೇಖರಣೆ ಮಾಡಿಕೊಂಡು ಕಾಯುವಂತಹ ಪರಿಸ್ಥಿತಿ ಇದೆ. ಚೀಲ, ವಾಹನಗಳ ಬಾಡಿಗೆ ಕಟ್ಟಲಾಗದೇ ಮೊದಲೇ ತೊಂದರೆಯಲ್ಲಿರುವ ರೈತರಿಗೆ ಇದು ಇನ್ನಷ್ಟು ತೊಂದರೆಯಾಗುತ್ತಿದೆ. ಇದನ್ನು ಕೇಳಿದರೆ ಅಧಿಕಾರಿಗಳ ಬೇಜವಾಬ್ದಾರಿ ಉತ್ತರ ಸಿಗುತ್ತದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಹಳೆಯ ವ್ಯವಸ್ಥೆಯನ್ನೇ ಮುಂದುವರಿಸಬೇಕು. ಪ್ರತಿ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಟ 150 ಕ್ವಿಂಟಾಲ್ ಭತ್ತ ಖರೀದಿಸಬೇಕು. ಬೇರೆ ಜಿಲ್ಲೆಗಳಿಗೆ ನಿಗದಿಪಡಿಸಿರುವ ದರವನ್ನೇ ನಮಗೂ ನೀಡಬೇಕು ಎಂದು ಒತ್ತಾಯಿಸಿದ ಪ್ರತಿಭಟನಾಕಾರರು, ನಮ್ಮ ಮನವಿಗೆ ಸರ್ಕಾರ ಸ್ಪಂದಿಸದಿದ್ದರೆ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಭತ್ತ ಬೆಳೆಗಾರರ ಒಕ್ಕೂಟದ ಸಂಚಾಲಕ ಎಂ.ಎನ್.ವೆಂಕಟೇಶ್, ರಾಮಣ್ಣ, ಮಹದೇವ ಸ್ವಾಮಿ, ಪ್ರಕಾಶ್, ಕುಪ್ಪೇಗಾಲ ನಾಗೇಂದ್ರ, ಹಳ್ಳಿಕೆರೆಹುಂಡಿ ರವಿ ಇನ್ನಿತರರು ಉಪಸ್ಥಿತರಿದ್ದರು.

ಎಸ್‌ಸಿ, ಎಸ್‌ಟಿ ಕೋಟಾದಿಂದ ಬಿಜೆಪಿ ದಾಳ; ಇಕ್ಕಟ್ಟಿಗೆ ಸಿಲುಕಿದ ಕರ್ನಾಟಕ ಕಾಂಗ್ರೆಸ್

ಬೆಂಗಳೂರು, ನ.30– ರಾಜ್ಯದಲ್ಲಿ ಐದನೇ ಒಂದರಷ್ಟು ಜನಸಂಖ್ಯೆಯನ್ನು ಹೊಂದಿರುವ ಕೆಳ ಸಮುದಾಯಗಳನ್ನು ಒಲಿಸಿಕೊಳ್ಳಲು ಮುಂದಿನ ವರ್ಷ ಸಂಕ್ರಾಂತಿ ಹಬ್ಬಕ್ಕೆ ಒಂದು ವಾರ ಮುಂಚಿತವಾಗಿ ಚಿತ್ರದುರ್ಗದಲ್ಲಿ ಕಾಂಗ್ರೆಸ್ ಎಸ್‌ಸಿ, ಎಸ್‌ಟಿ ಬೃಹತ್ ಸಮಾವೇಶವನ್ನು ಆಯೋಜಿಸುತ್ತಿದೆ. ರಾಜ್ಯ ವಿಧಾನಸಭೆಯು 51 ಎಸ್‌ಸಿ, ಎಸ್‌ಟಿ ಸದಸ್ಯರನ್ನು ಹೊಂದಿದೆ ಮತ್ತು ಅವರಲ್ಲಿ 18 ಮಂದಿ ಕಾಂಗ್ರೆಸ್‌ನವರು. ವಿರೋಧ ಪಕ್ಷವು ಸಾಂಪ್ರದಾಯಿಕವಾಗಿ ಈ ಸಮುದಾಯಗಳ ಬೆಂಬಲವನ್ನು ಪಡೆಯುತಿದೆ. ಆದರೆ ಈ ಬಾರಿ ಬಿಜೆಪಿ ಸರ್ಕಾರವೇ 2023ರ ವಿಧಾನಸಭೆ ಚುನಾವಣೆಗೂ ಮುನ್ನ ಸಮುದಾಯಗಳ ಬೆಂಬಲ ಪಡೆಯಲು ಇತ್ತೀಚೆಷ್ಟೇ ಮೀಸಲಾತಿಯನ್ನು ಶೇ.6ರಷ್ಟು ಹೆಚ್ಚಿಸಿರುವುದರಿಂದ ಮತ ಬ್ಯಾಂಕ್ ಸಮೀಕರಣದಲ್ಲಿ ಬದಲಾವಣೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಡಿ.6ರಂದು ಮೈಸೂರಲ್ಲಿ ದಸಂಸ ಎಲ್ಲಾ ಬಣಗಳ ರಾಜ್ಯ ಮಟ್ಟದ ಸಮಾವೇಶ



ಮೈಸೂರು, ನ.30(ಪಿಎಂ)– ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನವಾದ ಡಿ.6ರಂದು ಮೈಸೂರಿನಲ್ಲಿ 'ಶೋಷಿತ ಸಮುದಾಯಗಳ ಸ್ವತಂತ್ರ ರಾಜ್ಯಾಧಿಕಾರಕ್ಕಾಗಿ ಪರ್ಯಾಯ ರಾಜಕಾರಣ' ಶೀರ್ಷಿಕೆಯಡಿ ಎಲ್ಲಾ ದಲಿತ ಸಂಘರ್ಷ ಸಮಿತಿಗಳ (ದಸಂಸ) ಪದಾಧಿಕಾರಿಗಳ ರಾಜ್ಯ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ದಸಂಸ (ಭೀಮವಾದ) ಮುಖಂಡ ಡಾ.ಆರ್.ಮೋಹನ್‌ರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಮಾವೇಶ ನಡೆಯಲಿದೆ. ವಾಲ್ಮೀಕಿ ಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್ ಸೇರಿದಂತೆ ಹಲವು ಗಣ್ಯರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಲ್ಲಾ 6 ದಸಂಸ ಬಣಗಳಿಂದ ಸುಮಾರು 3 ಸಾವಿರ ಮಂದಿ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಇಡೀ ಜಗತ್ತಿಗೆ ಮಾನವೀಯ ತತ್ವ ನೀಡಿದ್ದಾರೆ. ಅಲ್ಲದೆ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯವು ದೇಶದ ಪ್ರತಿಯೊಬ್ಬ ಪ್ರಜೆಗೂ ದೊರಕುವಂತೆ ಅತ್ಯುತ್ತಮ ಸಂವಿಧಾನ ಸಹ ನೀಡಿದ್ದಾರೆ. ಆದರೆ ಸರ್ಕಾರಗಳ ನಿರ್ಲಕ್ಷ್ಯದ ಕಾರಣ ಸಂವಿಧಾನದ ಆಶಯ ಪೂರ್ಣ ಪ್ರಮಾಣದಲ್ಲಿ ಈಡೇರಲು ಈವರೆಗೆ ಸಾಧ್ಯವಾಗಿಲ್ಲ. ಹೀಗಾಗಿ ದಸಂಸದ ಬಣಗಳು ಒಗ್ಗೂಡಿ ಪರ್ಯಾಯ ರಾಜಕಾರಣದ ರೂಪುರೇಷೆಗಾಗಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ದಸಂಸ ಮುಖಂಡರಾದ ವೆಂಕಟಗಿರಿಯಯ್ಯ, ಕೆ.ಬಿ.ರಾಜು, ನಿಂಗರಾಜು, ಮೈಸೂರು ದೇವರಾಜ್ ಮತ್ತಿತರರು ಗೋಷ್ಠಿಯಲ್ಲಿದ್ದರು.